सत्यमेव जयते

# ಲೆಕ್ಕ ಪತ್ರ – ಒಂದು ವಿಹಂಗಮ ನೋಟ

# 2018 –19

भारतीय लेखापरीक्षा और लेखा विभाग

INDIAN AUDIT AND ACCOUNTS DEPARTMENT

सत्यमेव जयते

लोकहितार्थ सत्यनिष्ठा

**Dedicated to Truth in Public Interest**

सत्यमेव जयते

## ಕರ್ನಾಟಕ ಸರ್ಕಾರ

सत्यमेव जयते

# ಲೆಕ್ಕ ಪತ್ರ – ಒಂದು ವಿಹಂಗಮ ನೋಟ

# 2018 –19

लोकहितार्थ सत्यनिष्ठा

**Dedicated to Truth in Public Interest**

**ಕರ್ನಾಟಕ ಸರ್ಕಾರ**

## ಪರಿವಿಡಿ


| | | ಪುಟ ಸಂಖ್ಯೆ |
|---|---|---|
| | ಪ್ರಸ್ತಾವನೆ | iii |
| | ನಮ್ಮದೃಕ್ಪಥ, ಲಕ್ಷ್ಯ ಮತ್ತು ಪ್ರಮುಖ ಮೌಲ್ಯಗಳು | iv |
| ಅಧ್ಯಾಯ–I | ಪಕ್ಷಿ ನೋಟ | |
| **1.1** | **ಪೀಠಿಕೆ** | **1** |
| **1.2** | **ಸರ್ಕಾರಿ ಲೆಕ್ಕಗಳ ವಿನ್ಯಾಸ** | **1** |
| 1.2.1 | ಸರ್ಕಾರದ ಲೆಕ್ಕಗಳ ಭಾಗಗಳು | 1 |
| 1.2.2 | ಲೆಕ್ಕಗಳ ಸಂಕಲನ | 2 |
| **1.3** | **ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು** | **2** |
| 1.3.1 | ಹಣಕಾಸು ಲೆಕ್ಕಗಳು | 2 |
| 1.3.2 | ಧನವಿನಿಯೋಗ ಲೆಕ್ಕಗಳು | 3 |
| **1.4** | **ನಿಧಿಗಳ ಆಕರಗಳು ಮತ್ತು ಅನ್ವಯಗಳು** | **4** |
| 1.4.1 | ಅರ್ಥೋಪಾಯ ಮುಂಗಡಗಳು | 4 |
| 1.4.2 | ನಿಧಿಗಳ ಹರಿವಿನ ವಿವರಣೆ | 4 |
| 1.4.3 | ಸ್ವೀಕೃತಿಯಮೂಲಗಳು | 5 |
| 1.4.4 | ವೆಚ್ಚದ ಗುರಿ | 6 |
| **1.5** | **ಹಣಕಾಸಿನ ಮುಖ್ಯಾಂಶಗಳು** | **7** |
| **1.6** | **ಕೊರತೆ ಮತ್ತು ಹೆಚ್ಚಳಗಳ ವ್ಯಾಖ್ಯೆ** | **7** |
| 1.6.1 | ರಾಜಸ್ವ ಹೆಚ್ಚಳದ ಪ್ರವೃತ್ತಿ | 9 |
| 1.6.2 | ವಿತ್ತೀಯ ಕೊರತೆಯ ಪ್ರವೃತ್ತಿ | 9 |
| 1.6.3 | ಸರ್ಕಾರದ ಲೆಕ್ಕಗಳು | 10 |
| 1.6.4 | ಸಾಲದ ಮೊತ್ತಗಳಲ್ಲಿ ಬಂಡವಾಳ ವೆಚ್ಚಕ್ಕೆ ಬಳಸಿದ ಪ್ರಮಾಣ | 10 |
| ಅಧ್ಯಾಯ–II | ಸ್ವೀಕೃತಿಗಳು | |
| **2.1** | **ಪೀಠಿಕೆ** | **12** |
| **2.2** | **ರಾಜಸ್ವ ಸ್ವೀಕೃತಿಗಳು** | **12** |
| 2.2.1 | ರಾಜಸ್ವ ಸ್ವೀಕೃತಿಗಳ ಭಾಗಗಳು | 13 |
| 2.2.2 | ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ | 14 |
| **2.3** | **ರಾಜಸ್ವ ತೆರಿಗೆಯ ಸಂಗ್ರಹಣೆಯ ಪ್ರವೃತ್ತಿ** | **14** |
| 2.3.1 | ರಾಜ್ಯದ ತೆರಿಗೆಯ ಸಂಗ್ರಹದ ನಿರ್ವಹಣೆ | 15 |
| **2.4** | **ತೆರಿಗೆ ಸಂಗ್ರಹದ ದಕ್ಷತೆ** | **16** |
| 2.4.1 | ಕಳೆದ ಐದು ವರ್ಷಗಳಲ್ಲಿ ರಾಜ್ಯದ ಸ್ವಂತ ತೆರಿಗೆ ಸಂಗ್ರಹಣೆಯ ಪ್ರವೃತ್ತಿ | 16 |
| 2.4.2 | ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯ ಪಾಲಿನ ಪ್ರವೃತ್ತಿ | 17 |
| **2.5** | **ಸಾರ್ವಜನಿಕ ಋಣ** | **18** |
| ಅಧ್ಯಾಯ–III | ವೆಚ್ಚಗಳು | |
| **3.1** | **ಪೀಠಿಕೆ** | **19** |
| **3.2** | **ರಾಜಸ್ವ ವೆಚ್ಚ** | **19** |
| 3.2.1 | ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ | 20 |
| 3.2.2 | ವಿಭಾಗವಾರು ರಾಜಸ್ವ ವೆಚ್ಚದ ಸಂಯೋಜನೆಯ ಪ್ರವೃತ್ತಿ | 21 |
| 3.2.3 | ಪ್ರಮುಖ ಉಪವಿಭಾಗಗಳಲ್ಲಿನ ವೆಚ್ಚಗಳು | 22 |

## ಪರಿವಿಡಿ


| | | ಪುಟ ಸಂಖ್ಯೆ |
|---|---|---|
| **3.3** | **ಬಂಡವಾಳ ವೆಚ್ಚ** | 22 |
| 3.3.1 | ಬಂಡವಾಳ ವೆಚ್ಚದ ವಿಭಾಗವಾರು ವಿತರಣೆ | 22 |
| 3.3.2 | ಬಂಡವಾಳ ವೆಚ್ಚದ ಪ್ರವೃತ್ತಿ | 23 |
| 3.3.3 | ಬಂಡವಾಳ ಮತ್ತು ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ | 24 |
| **3.4** | **ಬದ್ಧ ವೆಚ್ಚಗಳು** | **24** |
| **ಅಧ್ಯಾಯ–IV** | **ಧನವಿನಿಯೋಗ ಲೆಕ್ಕಗಳು** | |
| **4.1** | **ಧನವಿನಿಯೋಗ ಲೆಕ್ಕಗಳ ಸಾರಾಂಶ** | 26 |
| **4.2** | **ಉಳಿತಾಯ ಪ್ರವೃತ್ತಿ** | 27 |
| **4.3** | **ಗಣನೀಯ ಉಳಿತಾಯಗಳು** | 28 |
| **4.4** | **ಪೂರಕ ಅಂದಾಜುಗಳು** | 29 |
| **ಅಧ್ಯಾಯ–V** | **ಆಸ್ತಿ ಮತ್ತು ಜವಾಬ್ದಾರಿಗಳು** | |
| **5.1** | **ಆಸ್ತಿಗಳು** | 30 |
| **5.2** | **ಋಣ ಮತ್ತು ಜವಾಬ್ದಾರಿಗಳು** | 30 |
| 5.2.1 | ರಾಜ್ಯ ಭವಿಷ್ಯ ನಿಧಿ | 32 |
| 5.2.2 | ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿ | 32 |
| 5.2.3 | ಸಾದಿಲ್ವಾರು ನಿಧಿ | 33 |
| **5.3** | **ಖಾತರಿಗಳು** | 33 |
| **5.4** | **ಬಾಹ್ಯ ಬೆಂಬಲಿತ ಯೋಜನೆಗಳು** | 34 |
| **ಅಧ್ಯಾಯ–VI** | **ಇತರೆ ವಿಷಯಗಳು** | |
| **6.1** | **ಸಾರ್ವಜನಿಕ ಋಣದಡಿ ವ್ಯತಿರಿಕ್ತ ಶಿಲ್ಕುಗಳು** | 35 |
| **6.2** | **ರಾಜ್ಯ ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು** | 35 |
| **6.3** | **ಸ್ಥಳೀಯ ಸಂಸ್ಥೆಗಳು ಮತ್ತು ಇತರರಿಗೆ ನೀಡಿದ ಆರ್ಥಿಕ ಬೆಂಬಲ** | 35 |
| 6.3.1 | ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆ | 36 |
| **6.4** | **ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು** | 36 |
| **6.5** | **ಲೆಕ್ಕಗಳ ಹೊಂದಾಣಿಕೆ** | 36 |
| **6.6** | **ಖಜಾನೆಗಳಿಂದ ಲೆಕ್ಕಗಳ ಸಲ್ಲಿಕೆ** | 36 |
| **6.7** | **ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳು** | 37 |
| **6.8** | **ಅಪೂರ್ಣ ಕಾಮಗಾರಿಗಳ ಮೇಲಿನ ಬದ್ಧತೆಗಳು** | 37 |
| **ಅಧ್ಯಾಯ–VII** | **ವಿತ್ತೀಯ ವರದಿ** | |
| **7.1** | **ಮುಂಗಡ ಸಿದ್ಧಪಡಿಸುವಾಗ ದಕ್ಷತೆ** | 38 |
| **7.2** | **ಸಹಾಯಾನುದಾನ** | 39 |
| **7.3** | **ಅಮಾನತು ಶಿಲ್ಕಿನ ಸ್ಥಿತಿ** | 39 |
| **7.4** | **ನೂತನ ಪಿಂಚಣಿ ಯೋಜನೆ** | 40 |
| **7.5** | **ವೈಯಕ್ತಿಕ ಠೇವಣಿ ಖಾತೆಗಳು** | 41 |
| **7.6** | **ಹೂಡಿಕೆಗಳು** | 42 |
| **7.7** | **ವೆಚ್ಚದ ಒತ್ತಡ** | 42 |

# ಪ್ರಸ್ತಾವನೆ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾನಿಯಮಗಳು) ಅಧಿನಿಯಮ 1971ರ ಅಧಿಕಾರದನ್ವಯ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ನಿರ್ದೇಶನಗಳ ಮೇರೆಗೆಕರ್ನಾಟಕರಾಜ್ಯ ಸರ್ಕಾರದ ವಾರ್ಷಿಕ ಲೆಕ್ಕ ಪತ್ರಗಳನ್ನು ರಾಜ್ಯದ ವಿಧಾನಮಂಡಲದಲ್ಲಿ ಸಾದರ ಪಡಿಸುವ ಸಲುವಾಗಿ ತಯಾರಿಸಿ, ಪರಿಶೋಧಿಸಲಾಗುವುದು. ರಾಜ್ಯ ಸರ್ಕಾರದ ವಾರ್ಷಿಕ ಲೆಕ್ಕಗಳು (ಅ) ಹಣಕಾಸು ಲೆಕ್ಕಗಳು ಮತ್ತು (ಆ) ಧನವಿನಿಯೋಗ ಲೆಕ್ಕಗಳನ್ನು ಒಳಗೊಂಡಿರುತ್ತವೆ.

ಹಣಕಾಸು ಲೆಕ್ಕಗಳು ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳ ಸಾರಾಂಶದವಿವರಣಾಪಟ್ಟಿಗಳನ್ನು ಒಳಗೊಂಡಿರುತ್ತವೆ. ಧನವಿನಿಯೋಗ ಲೆಕ್ಕಗಳು ರಾಜ್ಯ ವಿಧಾನಮಂಡಲವು ಅನುಮೋದಿಸಿದ ಅವಕಾಶಗಳಿಗೆ ಪ್ರತಿಯಾಗಿಅನುದಾನವಾರುಒಟ್ಟುವೆಚ್ಚಗಳನ್ನು ದಾಖಲಿಸುತ್ತವೆಹಾಗೂಒದಗಿಸಿದ ಮೊತ್ತಗಳಿಗೂಮತ್ತುವಾಸ್ತವ ವೆಚ್ಚಗಳಿಗೂ ನಡುವಿನ ವ್ಯತ್ಯಾಸಗಳಿಗೆ ವಿವರಣೆಯನ್ನು ನೀಡುತ್ತದೆ.

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ರಾಜ್ಯದ ಹಣಕಾಸು ಲೆಕ್ಕ ಮತ್ತುಧನವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ.

ರಾಜ್ಯದ ಹಣಕಾಸು ಲೆಕ್ಕಗಳು, ಧನವಿನಿಯೋಗ ಲೆಕ್ಕಗಳು, ರಾಜ್ಯದ ಹಣಕಾಸಿನ ವ್ಯವಹಾರಗಳ ಮೇಲಿನ ವರದಿ ಮತ್ತು"ಲೆಕ್ಕ ಪತ್ರ–ಒಂದು ವಿಹಂಗಮ ನೋಟ" – ಇವುಗಳ ಒಟ್ಟುಓದುವಿಕೆಯು,ಕರ್ನಾಟಕ ಸರ್ಕಾರದ ಹಣಕಾಸು ವಹಿವಾಟಿನ ವಿವಿಧ ಮುಖಗಳ ಪರಿಣಾಮಕಾರಿಗ್ರಹಿಕೆಗೆ ಸಹಾಯ ಮಾಡುತ್ತದೆ.

"ಲೆಕ್ಕಪತ್ರ – ಒಂದು ವಿಹಂಗಮ ನೋಟ"ವು ಹಣಕಾಸು ಲೆಕ್ಕಗಳು ಮತ್ತುಧನವಿನಿಯೋಗ ಲೆಕ್ಕಗಳಲ್ಲಿ ಬಿಂಬಿತವಾಗಿರುವಂತೆರಾಜ್ಯ ಸರ್ಕಾರದ ಚಟುವಟಿಕೆಗಳ ಒಂದು ಸ್ಥೂಲನೋಟವನ್ನು ನೀಡುತ್ತದೆ. ಈ ಮಾಹಿತಿಯನ್ನುಕೋಷ್ಟಕಗಳು ಮತ್ತು ನಕ್ಷೆಗಳೊಂದಿಗೆ ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ.

ಈ ಭಾಷಾಂತರಿಸಿದ ಆವೃತ್ತಿಯಲ್ಲಿನಯಾವುದೇ ಸಂದೇಹಗಳಿಗೆ, ಆಂಗ್ಲ ಭಾಷಾಆವೃತ್ತಿಯೇಅಧಿಕೃತವೆಂದು ಪರಿಗಣಿಸಬೇಕು.

ಈ ಪ್ರಕಟಣೆಯನ್ನು ಉತ್ತಮಗೊಳಿಸುವ ದಿಶೆಯಲ್ಲಿತಮ್ಮಅಮೂಲ್ಯವಾದ ಸಲಹೆ ಸೂಚನೆಗಳಿಗೆ ಸದಾ ಸ್ವಾಗತವಿದೆ.

R Naresh

**(ಆರ್.ನರೇಶ್)**

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ)

ಕರ್ನಾಟಕ

ಸ್ಥಳ: ಬೆಂಗಳೂರು

ದಿನಾಂಕ: 09.06.2020

## *ನಮ್ಮ ದೃಕ್ಪಥ, ಲಕ್ಷ್ಯ ಮತ್ತು ಪ್ರಮುಖ ಮೌಲ್ಯಗಳು*

ದೃಕ್ಪಥ:

*(ಭಾರತದಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ಸಂಸ್ಥೆಯು ನಮ್ಮ ಮಹತ್ವಾಕಾಂಕ್ಷೆಯನ್ನು ಪ್ರತಿನಿಧಿಸುತ್ತದೆ .)*

ನಾವು ಸಾರ್ವಜನಿಕ ವಲಯದ ಲೆಕ್ಕವಿಧಾನ ಮತ್ತು ಪರಿಶೋಧನೆಗಳಲ್ಲಿ ರಾಷ್ಟ್ರೀಯ ಮತ್ತುಅಂತಾರಾಷ್ಟ್ರೀಯಅತ್ಯುತ್ತಮ ರೂಢಿಗಳ ಆರಂಭಿತರಾಗಲು ಮತ್ತು ಸಾರ್ವಜನಿಕ ವಿತ್ತ ವ್ಯವಹಾರ ಮತ್ತು ಆಡಳಿತಗಳಲ್ಲಿ ಸ್ವಾಯುತ್ತತೆ, ವಿಶ್ವಾಸಾರ್ಹತೆ, ಸಮತೋಲಿತ ಹಾಗೂ ಸಕಾಲಿಕ ವರದಿ ಸಲ್ಲಿಕೆಗೆ ಮನ್ನಣೆ ಪಡೆಯಲು ಹಾಗೂ ವಿಶ್ವದ ಮುಂದಾಳುವಾಗಲು ಶ್ರಮಿಸುತ್ತೇವೆ.

ಲಕ್ಷ್ಯ:

*(ನಮ್ಮ ಪ್ರಸ್ತುತ ಹೊಣೆಯನ್ನು ನಿಷ್ಕೃಷ್ಟವಾಗಿ ಪ್ರತಿಪಾದಿಸುವುದೆ. ನಾವು ಪ್ರಸ್ತುತ ಏನು ಮಾಡುತ್ತಿರುವೆನೆಂಬುದು ನಿರೂಪಿಸುತ್ತದೆ.)*

ಭಾರತ ಸಂವಿಧಾನವು ವಿಧಿಸಿರುವಂತೆ ನಾವು ಅತ್ಯುತ್ತಮಗುಣಮಟ್ಟದ ಲೆಕ್ಕವಿಧಾನ ಮತ್ತು ಲೆಕ್ಕಪರಿಶೋಧನೆಯ ಮೂಲಕ ಉತ್ತರವಾದಿತ್ವ, ಪಾರದರ್ಶಕತೆ ಮತ್ತುಉನ್ನತ ಆಡಳಿತವನ್ನು ಉತ್ತೇಜಿಸುವುದರೊಂದಿಗೆ ನಮ್ಮಆಸ್ಥೆದಾರರಾದ ಶಾಸಕಾಂಗ, ಕಾರ್ಯಾಂಗ ಮತ್ತು ಪ್ರಜೆಗಳಿಗೆ ಸಾರ್ವಜನಿಕ ನಿಧಿಗಳು ಸಂಕಲ್ಪಿತ ಉದ್ದೇಶಗಳಿಗೆ ಫಲಪ್ರದದಾಯಕವಾಗಿ ಬಳಸಲ್ಪಟ್ಟಿದೆ ಎಂಬ ಸ್ವತಂತ್ರ ಭರವಸೆಯನ್ನು ನೀಡುತ್ತೇವೆ. .

ಪ್ರಮುಖಮೌಲ್ಯಗಳು:

*(ನಮ್ಮಕಾರ್ಯನಿರ್ವಹಣೆಗೆ ದಿಕ್ಸೂಚಿಯಾಗಿರುವುದು ನಾವು ಅಳವಡಿಸಿಕೊಂಡಿರುವ ಪ್ರಮುಖ ಮೌಲ್ಯಗಳು. ಅವು ನಮ್ಮಕ್ಷಮತೆಯ ಮಾಪನಕ್ಕೆ ಅಳತೆಗೋಲುಗಳಾಗಿವೆ )*

- ಸ್ವಾತಂತ್ರ್ಯ
- ವಸ್ತುನಿಷ್ಠತೆ
- ಪ್ರಾಮಾಣಿಕತೆ
- ವಿಶ್ವಾಸಾರ್ಹತೆ
- ವೃತ್ತಿ ಶ್ರೇಷ್ಠತೆ
- ಪಾರದರ್ಶಕತೆ
- ಸಕಾರಾತ್ಮಕತೆ

# ಅಧ್ಯಾಯ–I

## ಪಕ್ಷಿ ನೋಟ

### 1.1 ಪೀಠಿಕೆ

ಕರ್ನಾಟಕ ರಾಜ್ಯ ಸರ್ಕಾರದ ಸ್ವೀಕೃತಿ ಮತ್ತು ವಿತರಣೆಗಳ ಲೆಕ್ಕವನ್ನು ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಕರ್ನಾಟಕ ಇವರು ಸಂಕಲಿಸುತ್ತಾರೆ. ಈ ಸಂಕಲಿತ ಸ್ವೀಕೃತಿ ಮತ್ತು ವಿತರಣೆ ಲೆಕ್ಕಗಳು ಜಿಲ್ಲಾ ಖಜಾನೆಗಳು ಸಲ್ಲಿಸಿದ ಪ್ರಾರಂಭಿಕ ಲೆಕ್ಕಗಳು, ಲೋಕೋಪಯೋಗಿ ಮತ್ತು ಅರಣ್ಯ ವಿಭಾಗಗಳು, ಇತರ ಲೆಕ್ಕ ಸಲ್ಲಿಸುವ ಕಛೇರಿಗಳು ಸಲ್ಲಿಸಿದ ಲೆಕ್ಕಗಳು ಹಾಗೂ ಭಾರತೀಯ ರಿಜರ್ವ್ ಬ್ಯಾಂಕ್–ಕೇಂದ್ರೀಯ ಲೆಕ್ಕ ವಿಭಾಗ, ನಾಗಪುರ, ಇವರು ನೀಡಿದ ತೀರುವಳಿ ಮೆಮೋ ಮತ್ತು ಕಾಲ ಕಾಲಕ್ಕೆ ಕರ್ನಾಟಕ ಸರ್ಕಾರವು ಹೊರಡಿಸಿದ ನಗದು ಹೊರಹರಿವು ಇಲ್ಲದ ಆದೇಶಗಳನ್ನು ಆಧರಿಸಿದೆ. ಈ ಸಂಕಲನದ ನಂತರ ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ), ವಾರ್ಷಿಕ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ಸೇವೆಗಳ ಲೆಕ್ಕ ಪರಿಶೋಧನೆ), ಕರ್ನಾಟಕ, ಇವರ ಲೆಕ್ಕ ಪರಿಶೋಧನೆ ಮತ್ತು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ದೃಢೀಕರಣದನಂತರ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲಾಗುವುದು.

### 1.2 ಸರ್ಕಾರಿ ಲೆಕ್ಕಗಳ ವಿನ್ಯಾಸ

*1.2.1 ಸರ್ಕಾರದ ಲೆಕ್ಕವನ್ನು ಮೂರು ಭಾಗಗಳಲ್ಲಿ ಇಡಲಾಗುತ್ತದೆ.*

| | |
|---|---|
| **ಭಾಗ –1**<br>**ಸಂಚಿತ ನಿಧಿ** | ಸಂಚಿತ ನಿಧಿಯು ರಾಜಸ್ವ ಮತ್ತು ಬಂಡವಾಳ ಲೆಕ್ಕದ ಸ್ವೀಕೃತಿಗಳು ಮತ್ತು ವೆಚ್ಚ, ಸಾರ್ವಜನಿಕ ಋಣ, ಸಾಲಗಳು ಮತ್ತು ಮುಂಗಡಗಳು, ಅಂತರರಾಜ್ಯ ಹೊಂದಾಣಿಕೆ ಮತ್ತು ಸಾದಿಲ್ವಾರು ನಿಧಿಗೆ ಹಂಚಿಕೆಯ ಲೆಕ್ಕಗಳನ್ನು ಒಳಗೊಂಡಿದೆ. |
| **ಭಾಗ – 2**<br>**ಸಾದಿಲ್ವಾರು ನಿಧಿ** | ಆಯವ್ಯಯದಲ್ಲಿ ಸೇರಿರದ, ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಸಾಧಿಲ್ವಾರು ನಿಧಿಯ ಮೂಲಧನವನ್ನು ಸ್ಥಾಪಿಸಲಾಗಿದೆ. ಈ ನಿಧಿಯಿಂದ ಮಾಡಿದ ವೆಚ್ಚವನ್ನು ಅದೇ ಆರ್ಥಿಕ ವರ್ಷದಲ್ಲಿ ಆಂತರಿಕ ವರ್ಗಾವಣೆಯ ಮೂಲಕ ಅಥವಾ ಮುಂದಿನ ಆರ್ಥಿಕ ವರ್ಷದಲ್ಲಿ ಸಂಚಿತ ನಿಧಿಗೆ ಹೊಸ ಖರ್ಚಿನ ಮೂಲಕ ಪುನರ್ಭರ್ತಿ ಮಾಡಲಾಗುವುದು. ಕರ್ನಾಟಕ ಸರ್ಕಾರದ ಸಾದಿಲ್ವಾರು ನಿಧಿಯ ಮೂಲಧನವು ರೂ.80.00 ಕೋಟಿಯಷ್ಟಿದೆ. |
| **ಭಾಗ –3**<br>**ಸಾರ್ವಜನಿಕ ಲೆಕ್ಕ** | ರಾಜ್ಯ ಸಂಚಿತ ನಿಧಿಗೆ ಜಮೆಯಾಗುವ ಮೊತ್ತಗಳ ಹೊರತಾಗಿ ಇತರೆ ಎಲ್ಲಾ ಸಾರ್ವಜನಿಕ ಮೊತ್ತಗಳನ್ನು ಸಾರ್ವಜನಿಕ ಲೆಕ್ಕದಲ್ಲಿ ಲೆಕ್ಕ ಹಾಕಲಾಗುತ್ತದೆ. ಇಂತಹ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಒಂದು ಟ್ರಸ್ಟಿಯಂತೆ ವ್ಯವಹರಿಸುತ್ತದೆ. ಈ ಭಾಗದಲ್ಲಿನ ಋಣ ಠೇವಣಿ ಮತ್ತು ಮುಂಗಡಗಳಲ್ಲಿ ಸರ್ಕಾರವು ಸ್ವೀಕರಿಸಿದ ಮೊತ್ತಗಳಣ್ನು (ಋಣ ಮತ್ತು ಠೇವಣಿ) ಮರುಪಾವತಿಸುವ ಜವಾಬ್ದಾರಿ ಮತ್ತು ಮುಂಗಡಗಳನ್ನು ವಸೂಲು ಮಾಡುವ ಹೊಣೆಯಿರುತ್ತದೆ. ಅಮಾನತು ಕೇವಲ ಹೊಂದಾಣಿಕೆಯ ಶೀರ್ಷಿಕೆಗಳಾಗಿದ್ದು, ಖಜಾನೆ ಮತ್ತು ನಗದು ಲೆಕ್ಕದ ನಡುವಿನ ಇರಸಾಲು ಮತ್ತು ಬೇರೆ ಬೇರೆ ಲೆಕ್ಕ ವಲಯಗಳ ನಡುವಿನ ವರ್ಗಾವಣೆಯನ್ನು ಸೂಚಿಸುತ್ತವೆ. ಈ ಶೀರ್ಷಿಕೆಯಲ್ಲಿನ ಮೊದಲಿನ ಜಮೆ ಅಥವಾ ವೆಚ್ಚಗಳು ಅದೇ ಲೆಕ್ಕ ವಲಯ ಅಥವಾ ಬೇರೆ ಲೆಕ್ಕ ವಲಯದ ಸಂವಾದಿ ಜಮೆ ಅಥವಾ ವೆಚ್ಚ ಶೀರ್ಷಿಕೆಗಳಲ್ಲಿ ಲೆಕ್ಕ ಹಾಕಿ ತೀರುವಳಿ ಮಾಡಲಾಗುತ್ತದೆ. |

### *1.2.2 ಲೆಕ್ಕಗಳ ಸಂಕಲನ*

**ಲೆಕ್ಕಗಳ ಸಂಕಲನ ಪ್ರಕ್ರಿಯೆಯ ಹರಿವನ್ನು ತೋರಿಸುವ ನಕ್ಷೆ**

ಲೋಕೋಪಯೋಗಿ ಮತ್ತು ಅರಣ್ಯ ವಿಭಾಗಗಳೂ ಸೇರಿದಂತೆ ವಿವಿಧ ಇಲಾಖೆಗಳ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು ಖಜಾನೆಗಳಿಗೆ ಬಿಲ್ಲುಗಳನ್ನು ಸಲ್ಲಿಸುತ್ತಾರೆ ಮತ್ತು ಚಲನ್‌ಗಳ ಮೂಲಕ ಇರಸಾಲುಗಳನ್ನು ಮಾಡುತ್ತಾರೆ.

ಖಜಾನೆಗಳು ವೋಚರ್‌ಗಳನ್ನು, ಅನುಸೂಚಿಗಳನ್ನು ಚಲನ್‌ಗಳೊಂದಿಗೆ ಪ್ರಾಥಮಿಕ ಲೆಕ್ಕಗಳನ್ನು ಸಂಕಲಿಸಿ ಪ್ರಧಾನ ಮಹಾಲೇಖಪಾಲರಿಗೆ (ಲೆಕ್ಕ ಮತ್ತು ಹಕ್ಕುದಾರಿ) ಮಾಸಿಕ ಲೆಕ್ಕಗಳನ್ನು ಸಲ್ಲಿಸುತ್ತಾರೆ.

ಬಟವಾಡೆ ಅಧಿಕಾರಿಗಳು ಇಲಾಖಾ ಸ್ವೀಕೃತಿ ಮತ್ತು ವೆಚ್ಚಗಳನ್ನು ಖಜಾನೆಯು ಸಂಕಲಿಸಿದ ಪ್ರಾಥಮಿಕ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಲು ಜವಾಬ್ದಾರರಾಗಿರುತ್ತಾರೆ.

ಪ್ರಧಾನ ಮಹಾಲೇಖಪಾಲರ (ಲೆಕ್ಕ ಮತ್ತು ಹಕ್ಕುದಾರಿ) ಕಛೇರಿಯು ಖಜಾನೆಗಳಿಂದ ರಾಜ್ಯ ಸರ್ಕಾರದ ಇಲಾಖಾ ವಹಿವಾಟುಗಳ ಪ್ರಾಥಮಿಕ ಲೆಕ್ಕಗಳನ್ನು, ನಾಗಪುರದ ಭಾರತೀಯ ರಿಜರ್ವ್ ಬ್ಯಾಂಕಿನ ಕೇಂದ್ರೀಯ ಲೆಕ್ಕ ವಿಭಾಗದಿಂದ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಕೇಂದ್ರದ ವಹಿವಾಟುಗಳಿಗೆ ಸಂಬಂಧಿಸಿದ ಸೂಚನಾ ಮೆಮೋಗಳನ್ನು, ಇತರೆ ಲೆಕ್ಕ ಸಲ್ಲಿಸುವ ಕಛೇರಿಗಳಿಂದ, ಲೋಕೋಪಯೋಗಿ ಮತ್ತು ಅರಣ್ಯ ವಿಭಾಗಗಳಿಂದ ಸಂಕಲಿಸಿದ ಲೆಕ್ಕಗಳನ್ನು ಮತ್ತು ಕಾಲಕಾಲದ/ವಾರ್ಷಿಕ ಅಂತರ ಲೆಕ್ಕ ಹೊಂದಾಣಿಕೆಯನ್ನು ಒಳಗೊಂಡ ಸರ್ಕಾರಿ ಆದೇಶಗಳನ್ನು ಸ್ವೀಕರಿಸುತ್ತದೆ.

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಇವರ ಕಛೇರಿಯ ವಿಎಲ್‌ಸಿ ಕಾರ್ಯ ಕೇಂದ್ರದಲ್ಲಿ ಮಾಸಿಕ ಸಿವಿಲ್ ಲೆಕ್ಕಗಳು, ವಾರ್ಷಿಕ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳ ತಯಾರಿಕೆಗೆ ವರ್ಗೀಕೃತ ಲೆಕ್ಕಗಳನ್ನು ತಯಾರಿಸುತ್ತಾರೆ.

## 1.3 ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು

### *1.3.1 ಹಣಕಾಸು ಲೆಕ್ಕಗಳು*

ಹಣಕಾಸು ಲೆಕ್ಕಗಳು ಸರ್ಕಾರದ ಆಯಾ ವರ್ಷದ ಸ್ವೀಕೃತಿಗಳು ಮತ್ತು ವಿತರಣೆಗಳನ್ನಲ್ಲದೆ, ಲೆಕ್ಕಗಳಲ್ಲಿ ದಾಖಲಿಸಲಾದ ರಾಜಸ್ವ ಮತ್ತು ಬಂಡವಾಳ ಲೆಕ್ಕಗಳು, ಸಾರ್ವಜನಿಕ ಋಣ ಮತ್ತು ಸಾರ್ವಜನಿಕ ಲೆಕ್ಕಗಳ ಶಿಲ್ಕುಗಳು ತೋರಿಸುವ ಆರ್ಥಿಕ ಫಲಿತಾಂಶಗಳನ್ನು ಸಹ ಬಿಂಬಿಸುತ್ತವೆ. ಹಣಕಾಸು ಲೆಕ್ಕಗಳನ್ನುಹೆಚ್ಚು ವ್ಯಾಪಕ ಮತ್ತು ಉಪಯುಕ್ತವಾಗುವಂತೆ ಎರಡು ಸಂಪುಟಗಳಲ್ಲಿ ತಯಾರಿಸಲಾಗುತ್ತದೆ.**ಸಂಪುಟ– I**ರಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ದೃಢೀಕರಣ ಪತ್ರ, ಹಣಕಾಸು ಲೆಕ್ಕಗಳ ಮಾರ್ಗದರ್ಶಿ, ವರ್ಷದ ಒಟ್ಟಾರೆ ಸ್ವೀಕೃತಿಗಳು ಮತ್ತು ವಿತರಣೆಗಳ ಕ್ರೋಢೀಕೃತ ವಿವರಣಾ ಪಟ್ಟಿಗಳು,

ಸರ್ಕಾರದ ಆಸ್ತಿ ಮತ್ತು ಜವಾಬ್ದಾರಿಗಳು,ಸಂಚಿತಬಂಡವಾಳ ವೆಚ್ಚ,ಸಾಲಗಳು ಮತ್ತು ಇತರ ಜವಾಬ್ದಾರಿಗಳು, ಸಾಲಗಳು ಮತ್ತು ಮುಂಗಡಗಳು, ಸರ್ಕಾರ ನೀಡಿರುವ ಖಾತರಿಗಳು ಮತ್ತು ಸಹಾಯನುದಾನಗಳು, ಸರ್ಕಾರದ ಹೂಡಿಕೆಗಳು, ಪುರಸ್ಕೃತ ಮತ್ತು ಪ್ರಭೃತ ಖರ್ಚಿನ ವಿತರಣೆ, ರಾಜಸ್ವ ಲೆಕ್ಕದಿಂದ ಹೊರತಾದ ಖರ್ಚುಗಳ ನಿಧಿಯ ಆಕರ, ಮತ್ತು ವಿನಿಯೋಗ, ಶಿಲ್ಕುಗಳ ಸಾರಾಂಶ 'ಮತ್ತು ಬಾಬತ್ತುಗಳ ವಿವರಗಳೊಂದಿಗೆ ಸರ್ಕಾರದ ಆರ್ಥಿಕ ಸ್ಥಿತಿಗತಿಗಳ ಸಂಕ್ಷಿಪ್ತ ವಿವರಣಾಪಟ್ಟಿಗಳನ್ನು ಒಳಗೊಂಡಿದ್ದರೆ, **'ಲೆಕ್ಕಗಳಿಗೆ ಟಿಪ್ಪಣಿ'**ಯನ್ನು **ಸಂಪುಟ– II**ವಿವರಣಾ ಪಟ್ಟಿಗಳು **(ಭಾಗ–I)** ಮತ್ತು ಅನುಬಂಧಗಳನ್ನು **(ಭಾಗ–II)** ಒಳಗೊಂಡಿದೆ.

2018–19ರ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವಂತೆ ಕರ್ನಾಟಕ ಸರ್ಕಾರದ ಸ್ವೀಕೃತಿಗಳು ಮತ್ತು ವಿತರಣೆಗಳನ್ನು ಕೆಳಗೆ ನೀಡಲಾಗಿದೆ.

**(₹ ಕೋಟಿಗಳಲ್ಲಿ)**

| **2018–19ನೇ ವರ್ಷದ ಸ್ವೀಕೃತಿಗಳು ಮತ್ತು ವಿತರಣೆಗಳು** | | | |
|---|---|---|---|
| **ಸ್ವೀಕೃತಿಗಳು** | **ಒಟ್ಟು ಸ್ವೀಕೃತಿಗಳು** | | **203,446** |
| | ರಾಜಸ್ವ | ತೆರಿಗೆ ಆದಾಯ | 132,725 |
| | | ತೆರಿಗೆಯೇತರ ಆದಾಯ | 6,773 |
| | | ಸಹಾಯಾನುದಾನಗಳು | 25,481 |
| | | ರಾಜಸ್ವ ಸ್ವೀಕೃತಿಗಳು | 164,979 |
| | ಬಂಡವಾಳ | ಸಾಲ ಮತ್ತು ಮುಂಗಡಗಳ ವಸೂಲಾತಿ | 31 |
| | | ಸಾಲ ಮತ್ತು ಇತರ ಜವಾಬ್ದಾರಿಗಳು(1) | 38,442 |
| | | ಇತರೆ ಸ್ವೀಕೃತಿಗಳು (ಇತರೆ ಬಂಡವಾಳ ಸ್ವೀಕೃತಿಗಳು) | (-) 6 |
| | | ಬಂಡವಾಳ ಸ್ವೀಕೃತಿಗಳು | 38,467 |
| **ವಿತರಣೆಗಳು** | **ಒಟ್ಟು ವಿತರಣೆಗಳು** | | **203,446** |
| | **ರಾಜಸ್ವ(2)** | | 164,300 |
| | **ಬಂಡವಾಳ** | | 34,659 |
| | **ಸಾಲಗಳು ಮತ್ತು ಮುಂಗಡಗಳು** | | 4,487 |
| (1) ಇ–ಸಾರ್ವಜನಿಕ ಋಣ {₹30,831 ಕೋಟಿ}; (ii) ಸಾದಿಲ್ವಾರು ನಿಧಿ (ಇಲ್ಲ); (iii) ಸಾರ್ವಜನಿಕ ಲೆಕ್ಕ {₹7,877 ಕೋಟಿ} – ಕಳೆದದ್ದು ನಿವ್ವಳ ನಗದು ಶಿಲ್ಕು {₹266 ಕೋಟಿ} ಇವುಗಳ ನಿವ್ವಳ ಪಾಲನ್ನು ಒಳಗೊಂಡಿದೆ. | | | |
| (2) ಬಂಡವಾಳ ಆಸ್ತಿಗಳ ಸೃಜನೆಗೆ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಗೊಳಿಸಿದ ₹2,480 ಕೋಟಿಗಳ ಅನುದಾನವು ಇದರಲ್ಲಿ ಸೇರಿದೆ. (ಹಣಕಾಸು ಲೆಕ್ಕಗಳ ಸಂಪುಟ 1ರ ವಿವರಣ ಪಟ್ಟಿ–10ನ್ನು ನೋಡಿ) | | | |

### *1.3.2. ಧನವಿನಿಯೋಗ ಲೆಕ್ಕಗಳು*

ಧನವಿನಿಯೋಗ ಲೆಕ್ಕಗಳು ಹಣಕಾಸು ಲೆಕ್ಕಗಳಿಗೆ ಪೂರಕವಾಗಿದ್ದು ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಅವಕಾಶಗಳಿಗೆ ಪ್ರತಿಯಾಗಿ ಅನುದಾನವಾರು ಒಟ್ಟು ವೆಚ್ಚವನ್ನು ದಾಖಲಿಸಿ ಅವಕಾಶ ಒದಗಿಸಿದ್ದ ಮೊತ್ತಗಳಿಗೂ ವಾಸ್ತವ ವೆಚ್ಚಗಳಿಗೂ ನಡುವಿನ ವ್ಯತ್ಯಾಸಕ್ಕೆ ವಿವರಣೆಗಳನ್ನು ನೀಡುತ್ತದೆ. ಒಟ್ಟು 28 ಪುರಸ್ಕೃತ ಅನುದಾನಗಳು ಮತ್ತು ಒಂದು ಪ್ರಭೃತ ವಿನಿಯೋಗವು ಇದೆ.

ರಾಜ್ಯ ಸಂಚಿತ ನಿಧಿಯ ಮೇಲಿನ ಪ್ರಭೃತ ಮತ್ತು ಇತರೆ ವೆಚ್ಚಗಳಿಗಾಗಿ ಕಲ್ಪಿಸಿರುವ ಅವಕಾಶಗಳಿಗಾಗಿ ವಿಧಾನ ಮಂಡಲವು 2018–19ರ ಧನವಿನಿಯೋಗ ಅಧಿನಿಯಮವನ್ನು ಅನುಮೋದಿಸಿತು. 2018–19ರ ಧನವಿನಿಯೋಗ ಅಧಿನಿಯಮವು ಪ್ರಸಕ್ತ ವರ್ಷದಲ್ಲಿ ರಾಜ್ಯ ವಿಧಾನ ಮಂಡಲವು ಪೂರಕ ಅನುದಾನ ₹21,562 ಕೋಟಿ ಸೇರಿದಂತೆ ಅನುಮೋದಿಸಿದ ₹245,673 ಕೋಟಿಗಳ ಒಟ್ಟು ವೆಚ್ಚವನ್ನು ಪ್ರಕ್ಷೇಪಿಸಿತ್ತು.ಇದರೊಂದಿಗೆ ₹6,148 ಕೋಟಿಗಳನ್ನುವೆಚ್ಚದಲ್ಲಿನ ಕಡಿತವೆಂದು ಪರಿಗಣಿಸಲಾಗುವ ವಸೂಲಿಯ ಮೊತ್ತವಾಗಿ ಪ್ರಕ್ಷೇಪಿಸಲಾಗಿತ್ತು.

2018–19ರ ಧನವಿನಿಯೋಗ ಲೆಕ್ಕಗಳು ಒಟ್ಟಾರೆ ಆಯವ್ಯಯ ಅಂದಾಜು ₹220,534 ಕೋಟಿಗಳಿಗೆ ಪ್ರತಿಯಾಗಿ ₹245,673 ಕೋಟಿಗಳ ವೆಚ್ಚವನ್ನು ತೋರಿಸಿದ್ದು, ₹25,139 ಕೋಟಿಗಳ ನಿವ್ವಳ ಉಳಿತಾಯವಾಗಿದೆ. ವೆಚ್ಚದಲ್ಲಿ ಕಡಿತವೆಂದು ತೋರಿಸುವ ವಸೂಲಾತಿಯ ಮೊತ್ತವು ₹6,005 ಕೋಟಿಗಳಷ್ಟಿದ್ದು, ಆಯವ್ಯಯ ಅಂದಾಜಿನ (₹6,148 ಕೋಟಿ) ಮೊತ್ತಕ್ಕಿಂತಲೂ

₹143 ಕೋಟಿಗಳಷ್ಟು ಕಡಿಮೆಯಾಗಿದೆ. ಒಟ್ಟು ವೆಚ್ಚದ ಮೊತ್ತವು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದ ₹52ಕೋಟಿಗಳಿಗೆ ಸವಿವರ ಬಿಲ್ಲುಗಳ ಸಲ್ಲಿಕೆಯು ವರ್ಷದ ಕೊನೆಯಲ್ಲಿ ಬಾಕಿ ಉಳಿದಿದೆ.

2018–19ರಲ್ಲಿ ₹5,351 ಕೋಟಿಗಳ ಮೊತ್ತವು ಸಾರ್ವಜನಿಕ ಲೆಕ್ಕದಡಿ ನಿರ್ದಿಷ್ಟ ಉದ್ದೇಶಗಳಿಗಾಗಿ ನಿಯುಕ್ತ ಆಡಳಿತಾಧಿಕಾರಿಗಳು ನಿರ್ವಹಿಸುವ ವೈಯಕ್ತಿಕ ಠೇವಣಿ ಲೆಕ್ಕಗಳಿಗೆ ಸಂಚಿತ ನಿಧಿಯಿಂದ ವರ್ಗಾಯಿಸಲ್ಪಟ್ಟಿದೆ. ಸಾಧಾರಣವಾಗಿ, ಆಡಳಿತಾಧಿಕಾರಿಗಳು ಆರ್ಥಿಕ ವರ್ಷದ ಕೊನೆಯಲ್ಲಿ ವೈಯಕ್ತಿಕ ಠೇವಣಿ ಲೆಕ್ಕದಲ್ಲಿಬಳಕೆಯಾಗದೆ ಉಳಿದ ಮೊತ್ತವನ್ನು ಸಂಚಿತ ನಿಧಿಗೆ ವರ್ಗಾಯಿಸಬೇಕಾಗಿದೆ. ವರ್ಷದ ಕೊನೆಯಲ್ಲಿ  ಒಟ್ಟಾರೆ ₹4,085 ಕೋಟಿಗಳ ಮೊತ್ತವು ಬಳಕೆಯಾಗದೆ ಆಡಳಿತಾಧಿಕಾರಿಗಳ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಉಳಿದಿತ್ತು.

## 1.4 ನಿಧಿಗಳ ಆಕರಗಳು ಮತ್ತು ಅನ್ವಯಗಳು

### *1.4.1 ಅರ್ಥೋಪಾಯ ಮುಂಗಡಗಳು*

ಇವು ಕೇವಲ ತಾತ್ಕಾಲಿಕ ಸ್ವರೂಪದ ಸಾಲಗಳು. ಭಾರತೀಯ ರಿಜರ್ವ್‌ಬ್ಯಾಂಕಿನಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು ಕನಿಷ್ಠ ಮೊತ್ತಕ್ಕಿಂತ ಕಡಿಮೆಯಾದಾಗ ಆ ಕೊರತೆಯನ್ನು ತುಂಬಲು ಈ ಮುಂಗಡವನ್ನು ಪಡೆಯಲಾಗುತ್ತದೆ. ಗರಿಷ್ಠ ಅರ್ಥೋಪಾಯ ಮುಂಗಡವನ್ನು ಪಡೆದ ನಂತರವೂ ನಗದು ಶಿಲ್ಕು ಕನಿಷ್ಠ ಮೊತ್ತಕ್ಕಿಂತಲೂ ಕಡಿಮೆಯಿದ್ದಲ್ಲಿ, ಆ ಕೊರತೆಯನ್ನು ಓವರ್ ಡ್ರಾಫ್ಟ್ ಸೌಲಭ್ಯದ ಮೂಲಕ ಭರಿಸಲಾಗುತ್ತದೆ. 2018–19ರಲ್ಲಿ ರಾಜ್ಯ ಸರ್ಕಾರವು ಭಾರತೀಯ ರಿಜರ್ವ್ ಬ್ಯಾಂಕಿನಿಂದ ಯಾವುದೇ ಅರ್ಥೋಪಾಯ ಮುಂಗಡ ಅಥವಾ ಓವರ್ ಡ್ರಾಫ್ಟ್ ಸೌಲಭ್ಯವನ್ನು ಪಡೆದಿರುವುದಿಲ್ಲ.

### *1.4.2 ನಿಧಿಗಳ ಹರಿವಿನ ವಿವರಣೆ*

2018–19ನೇ ವರ್ಷದಲ್ಲಿ ರಾಜ್ಯವು ₹679 ಕೋಟಿಗಳ  ರಾಜಸ್ವ ಹೆಚ್ಚಳ ಮತ್ತು ₹38,442 ಕೋಟಿಗಳ ವಿತ್ತೀಯ ಕೊರತೆಯನ್ನು ಹೊಂದಿದ್ದು ಇದು ಕ್ರಮವಾಗಿರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ರಾ.ಒ.ಆಂ.ಉ)[3] ಶೇಕಡ 0.05 ಮತ್ತು ಶೇಕಡ 2.73 ರಷ್ಟಿತ್ತು. ವಿತ್ತೀಯ ಕೊರತೆಯು ಒಟ್ಟು ವೆಚ್ಚದ ಶೇಕಡ 18.90 ರಷ್ಟಿತ್ತು. ಈ ಕೊರತೆಯನ್ನು ಸಾರ್ವಜನಿಕ ಋಣ (₹30,831 ಕೋಟಿ), ಸಾರ್ವಜನಿಕ ಲೆಕ್ಕದಡಿಯ ನಿವ್ವಳ ಹೆಚ್ಚಳ (₹7,877 ಕೋಟಿ) ಮತ್ತು ನಿವ್ವಳ ನಗದು ಶಿಲ್ಕುಗಳ (₹266) ಕೋಟಿ) ಜಮೆಗಳಿಂದ ಭರಿಸಲಾಗಿತ್ತು. ಸುಮಾರು ಶೇಕಡ 84.16 ರಷ್ಟು ರಾಜಸ್ವ ಸ್ವೀಕೃತಿಗಳನ್ನು (₹164,979 ಕೋಟಿ), ಸಂಬಳ[4] (₹28,024 ಕೋಟಿ), ಸಬ್ಸಿಡಿಗಳು[4&5] (₹15,400 ಕೋಟಿ), ಸಹಾಯಾನುದಾನ[4] (₹9,280 ಕೋಟಿ), ಬಡ್ಡಿಪಾವತಿ (₹16,614 ಕೋಟಿ), {ಇದರಲ್ಲಿ ಆಯವ್ಯಯ ಹೊರತಾದ ಸಾಲದ ಮೇಲಿನ ಬಡ್ಡಿ (₹1,262 ಕೋಟಿ) 'ಬಡ್ಡಿಪಾವತಿ' ಪ್ರಧಾನ ಲೆಕ್ಕ ಶೀರ್ಷಿಕೆಯಲ್ಲದೆ ವಿವಿಧ ಪ್ರಧಾನ ಲೆಕ್ಕ ಶೀರ್ಷಿಕೆಗಳಡಿಯಲ್ಲಿಯೂ ಲೆಕ್ಕ ಮಾಡಲಾಗಿದೆ} ನಿವೃತ್ತಿ ವೇತನ ಪಾವತಿ (₹15,109 ಕೋಟಿ), ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪರಿಹಾರ ಮತ್ತು ನಿಯೋಜನೆ (₹26,720 ಕೋಟಿ), ಸಾಮಾಜಿಕ ಭದ್ರತಾ ವಿಶ್ರಾಂತಿ ವೇತನ (₹5,460 ಕೋಟಿ) ಮುಂತಾದ ಬದ್ಧ ವೆಚ್ಚಗಳಿಗೆ (₹138,841 ಕೋಟಿ) ಖರ್ಚು ಮಾಡಲಾಗಿದೆ.

### ನಿಧಿಗಳ ಆಕರಗಳು ಮತ್ತು ಅನ್ವಯಗಳು

(₹ ಕೋಟಿಗಳಲ್ಲಿ)

| | ವಿವರಗಳು | ಮೊತ್ತ |
|---|---|---|
| ಆಕರಗಳು | 1.4.2018 ರಲ್ಲಿದ್ದಂತೆ ಆರಂಭಿಕ ಶಿಲ್ಕು | 724 |
| | ರಾಜಸ್ವ ಸ್ವೀಕೃತಿಗಳು | 164,979 |
| | ಇತರೆ ಬಂಡವಾಳ ಸ್ವೀಕೃತಿಗಳು ಮತ್ತು ಸಾಲ ಮತ್ತು ಮುಂಗಡಗಳ ವಸೂಲಾತಿ | 25 |
| | ಸಾರ್ವಜನಿಕ ಋಣ ಸ್ವೀಕೃತಿಗಳು | 41,914 |
| | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಮತ್ತು ಇತರೆ ಅಡಿಯ ಸ್ವೀಕೃತಿಗಳು | 7,135 |
| | ಮೀಸಲು ನಿಧಿಗಳು ಮತ್ತು ಋಣ ಪರಿಹಾರ ನಿಧಿಗಳು | 4,547 |
| | ಸ್ವೀಕೃತ ಠೇವಣಿಗಳು | 57,757 |
| | ಅಮಾನತ್ತು ಲೆಕ್ಕ | 447,362 |
| | ಇರಸಾಲುಗಳು | 36 |
| | ಸಾದಿಲ್ವಾರು ನಿಧಿ | … |
| | **ಒಟ್ಟು** | **724,479** |
| ಅನ್ವಯ | ರಾಜಸ್ವ ವೆಚ್ಚ | 164,300 |
| | ಬಂಡವಾಳ ವೆಚ್ಚ | 34,659 |
| | ಸಾಲ ವಿತರಣೆ | 4,487 |
| | ಸಾರ್ವಜನಿಕ ಋಣ ಮರುಪಾವತಿ | 11,083 |
| | ಸಣ್ಣ ಉಳಿತಾಯಗಳು, ಭವಿಷ್ಯನಿಧಿಗಳು ಮತ್ತು ಇತರೆ ಪಾವತಿಗಳು | 3,843 |
| | ಮೀಸಲು ಮತ್ತು ಋಣ ಪರಿಹಾರ ನಿಧಿಗಳು | 4,420 |
| | ಠೇವಣಿಗಳ ಮರುಪಾವತಿ | 54,689 |
| | ಸಾದಿಲ್ವಾರು ನಿಧಿ | ... |
| | ಅಮಾನತ್ತು ಲೆಕ್ಕ | 445,933 |
| | ಇರಸಾಲುಗಳು | 75 |
| | ಅಂತಿಮ ಶಿಲ್ಕು 31.3.2019 ರಲ್ಲಿದ್ದಂತೆ | 990 |
| | **ಒಟ್ಟು** | **724,479** |


(3) 2018–19ನೇ ವರ್ಷದ ರಾ.ಒ.ಆಂ.ಉ. : ₹1,408,112 ಕೋಟಿ (ಆಕರ: ಮಧ್ಯಂತರ ವಿತ್ತೀಯ ಯೋಜನೆ 2019–23).

(4) ಸಂಬಳ, ಸಬ್ಸಿಡಿಗಳು ಮತ್ತು ಸಹಾಯಾನುದಾನಗಳು ಎಲ್ಲಾ ವಿಭಾಗಗಳಿಂದ ಸಂಕಲಿತವಾಗಿದೆ ಮತ್ತು ಸಂಬಳ ವೆಚ್ಚವು ಸ್ಥಳೀಯ ಸಂಸ್ಥೆಗಳಿಗೆ ಸಂಬಳಕ್ಕಾಗಿ ನೀಡಿದ ಅನುದಾನಗಳನ್ನು ಒಳಗೊಂಡಿರುವುದಿಲ್ಲ.

(5) ಸಬ್ಸಿಡಿ '106 ಸಬ್ಸಿಡಿಗಳು' ಅಡಿಯಲ್ಲಿ ಸಂಕಲಿಸಿದ ವೆಚ್ಚವನ್ನು ಮಾತ್ರ ಒಳಗೊಂಡಿದೆ.

## *1.4.3 ಸ್ವೀಕೃತಿಯ ಮೂಲಗಳು*


ಸರ್ಕಾರವು ಮಾಡುವ ಸಾರ್ವಜನಿಕ ವೆಚ್ಚಗಳು ಮುಖ್ಯವಾಗಿ ಸಂಚಿತ ನಿಧಿಯಡಿಯ ಸರ್ಕಾರದ ಸ್ವೀಕೃತಿಗಳು, ಸಾರ್ವಜನಿಕ ಋಣದ ಸ್ವೀಕೃತಿಗಳು, ಸಾಲಗಳು ಮತ್ತು ಮುಂಗಡಗಳ ವಸೂಲಾತಿ ಮತ್ತು ಸಾರ್ವಜನಿಕ ಲೆಕ್ಕದಡಿಯ ನಗದು ಏರಿಕೆಯನ್ನು ಕಳೆದ ನಂತರ ನಿವ್ವಳ ಏರಿಕೆಗಳಿಂದ ಬಂದ ಜಮೆಗಳಿಂದ ಆಗುತ್ತದೆ. ಸಂಚಿತ ನಿಧಿಯಡಿ ಪ್ರತಿ ರೂಪಾಯಿಯ ವಿಭಾಗವಾರು ಸ್ವೀಕೃತಿಯನ್ನು ಕೆಳಗಿನ ಪೈ ನಕ್ಷೆಯಲ್ಲಿ ನೀಡಲಾಗಿದೆ.




**ಸೂಚನೆ:** ಸ್ವೀಕೃತಿಯಡಿಯಲ್ಲಿ ಇತರೆ ಬಂಡವಾಳ ಜಮೆ ₹(-)5.51ಕೋಟಿ) ಮತ್ತು ಸಾಲ ಮತ್ತು ಮುಂಗಡಗಳ ವಸೂಲಾತಿ (₹31ಕೋಟಿ) ಒಂದು ಪೈಸೆಗಿಂತ ಕಡಿಮೆಯಾದ್ದರಿಂದ ಮೇಲಿನ ಪೈ ಚಿತ್ರದಲ್ಲಿ ತೋರಿಸಿರುವದಿಲ್ಲ.

### *1.4.4 ವೆಚ್ಚದ ಉದ್ದೇಶ*

ಸರ್ಕಾರವು ರಾಜ್ಯ ವಿಧಾನ ಮಂಡಲದ ಪೂರ್ವಾನುಮತಿಯೊಂದಿಗೆ ವಿವಿಧ ಕಾರ್ಯಕ್ರಮಗಳಿಗೆ, ಯೋಜನೆಗಳಿಗೆ ಮತ್ತು ವಸ್ತುನಿಷ್ಠ ವೆಚ್ಚಗಳಿಗೆ ಸಂಚಿತ ನಿಧಿಯಿಂದ ವೆಚ್ಚ ಮಾಡಲಾಗುತ್ತದೆ. ಪ್ರತಿ ರೂಪಾಯಿಯ ಮುಖ್ಯವಿಭಾಗವಾರು ವೆಚ್ಚವನ್ನು ಕೆಳಗಿನ ಪೈ ನಕ್ಷೆಯಲ್ಲಿ ನೀಡಲಾಗಿದೆ.



## 1.5 2018–19ರ ಹಣಕಾಸಿನ ಮುಖ್ಯಾಂಶಗಳು

ಕೆಳಗಿನ ಕೋಷ್ಟಕವು 2018–19ರಲ್ಲಿ ಆಯವ್ಯಯ ಅವಕಾಶಗಳಿಗೆ ಪ್ರತಿಯಾಗಿ ಆದ ವಾಸ್ತವ ಹಣಕಾಸಿನ ಫಲಿತಾಂಶಗಳನ್ನು ನೀಡುತ್ತದೆ.

| ಕ್ರ.ಮ ಸಂಖ್ಯೆ | ವಿವರಗಳು | ಆಯವ್ಯಯ ಅಂದಾಜು 2018–19 | | ವಾಸ್ತವಿಕ | | ವಾಸ್ತವಿಕ ಹಾಗೂ ಆಯವ್ಯಯ ಅಂದಾಜುಗಳ ಶೇಕಡಾವಾರು | ವಾಸ್ತವದ ರಾ.ಓ.ಆಂ. ಉ.ಗೆ ಶೇಕಡಾವಾರು |
|---|---|---|---|---|---|---|---|
| | | (₹ ಕೋಟಿ) | | | | | |
| 01. | ತೆರಿಗೆ ರಾಜಸ್ವ | 142,836 | (@) | 132,725 | (&) | 92.92 | 9.43 |
| 02. | ತೆರಿಗೆಯೇತರ ರಾಜಸ್ವ | 8,181 | | 6,773 | | 82.79 | 0.48 |
| 03. | ಸಹಾಯಾನುದಾನಗಳು ಮತ್ತು ವಂತಿಗೆಗಳು | 15,379 | | 25,481 | | 165.70 | 1.81 |
| **04.** | **ರಾಜಸ್ವ ಜಮೆಗಳು (1+2+3)** | **166,396** | | **164,979** | | **99.15** | **11.72** |
| 05. | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 129 | | 31 | | 24.03 | 0.00 |
| 06. | ಇತರ ಬಂಡವಾಳ ಸ್ವೀಕೃತಿ | 75 | | (-)6 | | 0.00 | 0.00 |
| 07. | ಋಣ ಮತ್ತು ಇತರೆ ಜವಾಬ್ದಾರಿಗಳು | 40,753 | (#) | 38,442 | ($) | 94.33 | 2.73 |
| **08.** | **ಬಂಡವಾಳ ಜಮೆಗಳು (5+6+7)** | **40,957** | | **38,467** | | **93.92** | **2.73** |
| **09.** | **ಒಟ್ಟಾರೆ ಜಮೆಗಳು (4+8)** | **207,353** | | **203,446** | | **98.12** | **14.45** |
| 10. | ರಾಜಸ್ವ ವೆಚ್ಚ (11+15) | 166,290 | | 164,300 | | 98.80 | 11.67 |
| 11. | ಬಡ್ಡಿ ಪಾವತಿ ಮೇಲಿನ ವೆಚ್ಚ | 16,209 | | 15,423 | | 95.15 | 1.10 |
| 12. | ಬಂಡವಾಳ ವೆಚ್ಚ (13+16) | 41,063 | (a) | 39,146 | (b) | 95.33 | 2.78 |
| 13. | ಒಟ್ಟು ವೆಚ್ಚ | **207,353** | | **203,446** | | **98.12** | **14.45** |
| **14.** | **ರಾಜಸ್ವ ಹೆಚ್ಚಳ (4-10)** | **106** | | **679** | | **640.57** | **0.05** |
| **15.** | **ವಿತ್ತೀಯ ಕೊರತೆ {(13) - (4+5+6)=7}** | **40,753** | | **38,442** | (^) | **94.33** | **2.73** |
| (*) | 2018–19ನೇ ವರ್ಷದ ಪ್ರಸಕ್ತ ರಾ.ಒ.ಆಂ.ಉ : ₹1,408,112 ಕೋಟಿ (ಆಕರ : ಮಧ್ಯಂತರ ವಿತ್ತೀಯ ಯೋಜನೆ 2019–23). | | | | | | |
| (@) | ₹36,215 ಕೋಟಿ ರಾಜ್ಯ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳನ್ನೊಳಗೊಂಡಿದೆ. | | | | | | |
| (&) | ₹35,895 ಕೋಟಿ ರಾಜ್ಯದ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳನ್ನೊಳಗೊಂಡಿದೆ. | | | | | | |
| (#) | ಇದು (i) ಸಾರ್ವಜನಿಕ ಋಣ (₹35,999 ಕೋಟಿ) (ii) ಸಾರ್ವಜನಿಕ ಲೆಕ್ಕ (₹4,326 ಕೋಟಿ) ಮೊತ್ತದಲ್ಲಿ ಕಳೆದ (iii)ನಿವ್ವಳ ನಗದು ಶಿಲ್ಕು {(–)₹428 ಕೋಟಿ} ಒಳಗೊಂಡಿರುತ್ತದೆ. | | | | | | |
| ($) | ಇದು (i) ಸಾರ್ವಜನಿಕ ಋಣ (₹30,831 ಕೋಟಿ) (ii) ಸಾದಿಲ್ವಾರು ನಿಧಿ (ಇಲ್ಲ) (iii) ಸಾರ್ವಜನಿಕ ಲೆಕ್ಕ (₹7,877 ಕೋಟಿ) ಮೊತ್ತದಲ್ಲಿ ಕಳೆದ (iv)ನಿವ್ವಳ ನಗದು ಶಿಲ್ಕು (–) ₹266 ಕೋಟಿ} ಒಳಗೊಂಡಿರುತ್ತದೆ. | | | | | | |
| (a) | ಬಂಡವಾಳ ವೆಚ್ಚ (₹35,246 ಕೋಟಿ), ಸಾಲಗಳು ಮತ್ತು ಮುಂಗಡಗಳು (₹5,816 ಕೋಟಿ) ಇವುಗಳ ಅಂದಾಜನ್ನು ಒಳಗೊಂಡಿರುತ್ತದೆ. | | | | | | |
| (b) | ಬಂಡವಾಳ ವೆಚ್ಚ (₹34,659 ಕೋಟಿ) ಮತ್ತು ಸಾಲಗಳು ಮತ್ತು ಮುಂಗಡಗಳು (₹4,487 ಕೋಟಿ) ಇವುಗಳನ್ನು ಒಳಗೊಂಡಿರುತ್ತದೆ. | | | | | | |
| (^) | ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹1,262 ಕೋಟಿ) ಪಾವತಿಯನ್ನು ಹೊರತುಪಡಿಸಿದೆ ಹಾಗೂ ಇದು ಸಾಮಾನ್ಯ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳಡಿ ಇರುವ ಇತರೆ ಕಾರ್ಯಿಕ ಪ್ರಧಾನ ಲೆಕ್ಕ ಶೀರ್ಷಿಕೆಗಳಲ್ಲಿ ಪಾವತಿಯಾಗಿದೆ. | | | | | | |

## 1.6 ಕೊರತೆ ಮತ್ತು ಹೆಚ್ಚಳಗಳ ವ್ಯಾಖ್ಯೆ

| | |
|---|---|
| **ಕೊರತೆ** | ಆದಾಯ ಮತ್ತು ವೆಚ್ಚಗಳ ನಡುವಿನ ಅಂತರಕ್ಕೆ ಸಂಬಂಧಿಸಿದೆ. ಕೊರತೆಯ ವಿಧ, ಕೊರತೆಯನ್ನು ಹೇಗೆ ನಿಭಾಯಿಸಲಾಗಿದೆ ಮತ್ತು ನಿಧಿಗಳ ಬಳಕೆಯು ಹಣಕಾಸು ನಿರ್ವಹಣೆಯಲ್ಲಿನ ವಿವೇಚನೆಯ ಮುಖ್ಯ ಸೂಚಕಗಳಾಗಿವೆ. |
| **ರಾಜಸ್ವ ಕೊರತೆ/ಹೆಚ್ಚಳ** | ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚದ ನಡುವಿನ ಅಂತರವನ್ನು ಸೂಚಿಸುತ್ತದೆ. ಅಸ್ತಿತ್ವದಲ್ಲಿರುವ ಸರ್ಕಾರದ ಸಂಸ್ಥೆಗಳ ನಿರ್ವಹಣೆಗೆ ರಾಜಸ್ವ ವೆಚ್ಚದ ಅಗತ್ಯವಿದೆ. ವಾಸ್ತವದಲ್ಲಿ ಇದನ್ನು ರಾಜಸ್ವ ಸ್ವೀಕೃತಿಗಳಲ್ಲಿಯೇ ಪೂರ್ಣವಾಗಿ ಭರಿಸಬೇಕು. |
| **ವಿತ್ತೀಯ ಕೊರತೆ/ಹೆಚ್ಚಳ** | ಒಟ್ಟು ಸ್ವೀಕೃತಿಗಳು (ಸ್ವೀಕೃತಿಗಳು/ಮರುಪಾವತಿಗಳನ್ನು ಹೊರತುಪಡಿಸಿ) ಮತ್ತು ಒಟ್ಟು ವೆಚ್ಚಗಳ ನಡುವಿನ ಅಂತರವನ್ನು ಸೂಚಿಸುತ್ತದೆ. ಹಾಗಾಗಿ, ಈ ಅಂತರವು ಸಾಲಗಳ ಮೂಲಕ ಭರಿಸಲ್ಪಟ್ಟ ವೆಚ್ಚದ ಪ್ರಮಾಣವನ್ನು ಸೂಚಿಸುತ್ತದೆ. ವಾಸ್ತವವಾಗಿ ಸಾಲಗಳ ಮೂಲಕ ಪಡೆದ ಮೊತ್ತವನ್ನು ಬಂಡವಾಳ ಯೋಜನೆಗಳಲ್ಲಿ ಹೂಡಬೇಕಾಗಿರುತ್ತದೆ. |

ಕೊರತೆ ಸೂಚಕಗಳು, ಆದಾಯದ ವೃದ್ಧಿ ಮತ್ತು ವೆಚ್ಚ ನಿರ್ವಹಣೆಗಳು ಸರ್ಕಾರದ ವಿತ್ತ ನಿರ್ವಹಣೆಯ ಮಾಪನಕ್ಕೆ ಪ್ರಮುಖ ಮಾನದಂಡಗಳಾಗಿವೆ.

ವಿತ್ತೀಯ ಹೊಣೆಗಾರಿಕೆಗೆ ಸಂಬಂಧಿಸಿದ ಕಾಯ್ದೆಗಳಾದ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ, 2002, ಮತ್ತು ಕರ್ನಾಟಕ ಸರ್ಕಾರಿ ಖಾತರಿಗಳ ಮೇಲೆ ಗರಿಷ್ಠ ಪರಿಮಿತಿ ಅಧಿನಿಯಮ (ಕೆಸಿಜಿಜಿಎ), 1999, ಗಳನ್ನು ಅಂಗೀಕರಿಸಿದಂದಿನಿಂಲೂ ರಾಜ್ಯ ಸರ್ಕಾರವು ವಿತ್ತೀಯ ಕ್ರೋಢೀಕರಣ ಮಾರ್ಗದಲ್ಲಿ ನಿರಂತರವಾಗಿ ಸಾಗಿದೆ.

ಸರ್ಕಾರದ ಆರ್ಥಿಕ ಪರಿಸ್ಥಿತಿ ಮತ್ತು ಹೊಣೆಗಾರಿಕೆಗಳ ನಿರ್ವಹಣೆಯಲ್ಲಿ ಹೆಚ್ಚು ಪಾರದರ್ಶಕತೆಯನ್ನು ತರುವ ಸಲುವಾಗಿ 2011ರಲ್ಲಿ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ತಿದ್ದುಪಡಿ ತರಲಾಯಿತು. ಪ್ರಸ್ತುತ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಹೊಸದಾಗಿ ಜಾರಿಗೆ ತರಲಾದ 5(2)(ಸಿ)ನೇ ಪ್ರಕರಣವು, ಇತರ ವಿಷಯಗಳೊಂದಿಗೆ ವರ್ಷದಲ್ಲಿ ಪ್ರಮುಖ ಕಾರ್ಯನೀತಿ ತೀರ್ಮಾನಗಳನ್ನು ತೆಗೆದುಕೊಂಡ ಕಾರಣದಿಂದಾಗಿ ಭವಿಷ್ಯದ ವೆಚ್ಚದ ಬದ್ಧತೆಗಳು ಮತ್ತು ವ್ಯಕ್ತ ಮತ್ತು ಅವ್ಯಕ್ತ ಹೊಣೆಗಾರಿಕೆಗಳ ಬಗ್ಗೆ ಸ್ಪಷ್ಟವಾದ ಪ್ರಕಟಣೆಗಳನ್ನು ಮಾಡುವಂತೆ ರಾಜ್ಯ ಸರ್ಕಾರಕ್ಕೆ ವಿಧಿಸುತ್ತದೆ. ರಾಜ್ಯ ಸರ್ಕಾರವು ವಿಧಾನ ಮಂಡಲದಲ್ಲಿ ಕ್ರಮವಾಗಿ ಮಂಡಿಸುವ ಮಧ್ಯಮಾವಧಿ ವಿತ್ತೀಯ ಯೋಜನೆಗಳ ಮೂಲಕ ಈ ಮಾಹಿತಿಯನ್ನು ಒದಗಿಸುತ್ತಾ ಬಂದಿದೆ.ಒಟ್ಟು ಹೊಣೆಗಾರಿಕೆಯನ್ನು ಲೆಕ್ಕಾಚಾರ ಮಾಡುವಾಗ ಆಯವ್ಯಯೇತರ ಸಾಲವನ್ನು ರಾಜ್ಯದ ಸ್ವಂತ ಹೊಣೆಗಾರಿಕೆಯ ಭಾಗವಾಗಿ ವರದಿ ಮಾಡಬೇಕಾದ ಅನುಸರಣಾ ನೀತಿಗೆ ಬದ್ಧವಾಗಿರಲು ಫೆಬ್ರವರಿ 2014ರಲ್ಲಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ಕ್ಕೆ ತಿದ್ದುಪಡಿ ತರಲಾಯಿತು.

ಅನುಸರಿಸಬೇಕಾದ ಪ್ರಮುಖ ವಿತ್ತೀಯ ಮತ್ತು ಋಣದ ಮಾದರಿಗಳು ಮತ್ತು ರಾಜ್ಯದ ಅನುಸರಣಾ ಮಾಹಿತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.


| ಕ್ರಮ ಸಂಖ್ಯೆ | ವಿವರಗಳು | 2018–19ರ ಗುರಿ | ರಾಜ್ಯದ ಸಾಧನೆ |
|---|---|---|---|
| 1 | **ರಾಜಸ್ವ ಕೊರತೆ** | ರಾಜಸ್ವ ಹೆಚ್ಚಳವನ್ನು ನಿರ್ವಹಿಸುವುದು | 2018–19ರಲ್ಲಿ ಸರ್ಕಾರವು ₹678.81 ಕೋಟಿ ರಾಜಸ್ವ ಹೆಚ್ಚಳವನ್ನು ಕಾಯ್ದುಕೊಂಡಿದೆ |
| 2 | **ವಿತ್ತೀಯ ಕೊರತೆ** | ಕೇಂದ್ರ ಸರ್ಕಾರ ಕಾಲಕಾಲಕ್ಕೆ ನಿಗದಿಪಡಿಸಿದ ವಿತ್ತೀಯ ಮಿತಿಗೆ ಒಳಪಟ್ಟು ವಿತ್ತೀಯ ಕೊರತೆಯನ್ನು ಜಿಎಸ್‌ಡಿಪಿಯ ಶೇಕಡ 3ಕ್ಕಿಂತ ಅಧಿಕಗೊಳ್ಳದಂತೆ ನಿರ್ವಹಿಸುವುದು. | ವಿತ್ತೀಯಕೊರತೆಯು ₹38,442.01ಕೋಟಿಗಳಷ್ಟಿದ್ದು ರಾ.ಒ.ಆಂ.ಉ.[6] ದ ಶೇಕಡಾ 2.73ರಷ್ಟಿದೆ. |
| 3 | **ಬಾಕಿಯಿರುವ ಜವಾಬ್ದಾರಿಗಳು** | 31.03.2019ರಲ್ಲಿ ಜಿಎಸ್‌ಡಿಪಿಯ ಅನುಪಾತವು ಶೇಕಡ 25ನ್ನು ಮೀರದಿರುವುದು. | 31ನೇ ಮಾರ್ಚ್ 2019ಕ್ಕೆ ಬಾಕಿಯಿರುವ ಜವಾಬ್ದಾರಿ (₹285,238 ಕೋಟಿ)[7] ರಾ.ಒ.ಆಂ.ಉ. ದ ಶೇಕಡಾ 20.26ರಷ್ಟಿರುತ್ತದೆ. |
| 4 | **ಖಾತರಿಗಳು** | ಬಾಕಿ ಉಳಿದ ಖಾತರಿಯು ಯಾವದೇ ವರ್ಷದ ಏಪ್ರಿಲ್ 1ರಂದು ಅದಕ್ಕೆ ಹಿಂದಿನ ಎರಡನೇ ವರ್ಷದ ಒಟ್ಟು ರಾಜಸ್ವ ಸ್ವೀಕೃತಿಯ ಶೇ.80ನ್ನು ಮೀರಬಾರದು. | 2018–19ರ ಪ್ರಾರಂಭದಲ್ಲಿ ಬಾಕಿ ಉಳಿದ ಖಾತರಿಗಳು ₹20,553.85 ಕೋಟಿಯಷ್ಟಿದ್ದು, ಇದು ಎರಡನೇ ಹಿಂದಿನ ವರ್ಷ 2016–17ರ ಒಟ್ಟು ರಾಜಸ್ವ ಸ್ವೀಕೃತಿಯ (₹133,213.79 ಕೋಟಿ) ಶೇಕಡಾ 15.43ರಷ್ಟಿದೆ. |
| (6) | ಭಾರತ ಸರ್ಕಾರದ ವಿತ್ತ ಸಚಿವಾಲಯ ತಿಳಿಸಿರುವಂತೆ ರಾ.ಒ.ಆಂ.ಉ. ₹1,408,112 ಕೋಟಿ (ಆಕರ: ಕರ್ನಾಟಕ ಸರ್ಕಾರದ ಎಮ್.ಟಿ.ಎಫ್.ಪಿ 2019–23) | | |
| (7) | ಕೆ.ಎಫ್.ಆರ್ (ತಿದ್ದುಪಡಿ) ಅದಿನಿಯಮ 2014ರ ಪ್ರಕಾರ) ಕರ್ನಾಟಕ ಸರ್ಕಾರ ಒದಗಿಸಿರುವ ಆಯವ್ಯಯದ ಹೊರಗಿನ ಸಾಲಗಳ ಮೊತ್ತದ ಬಾಕಿಯಿರುವ ಜವಾಬ್ದಾರಿ (₹14,861.56 ಕೋಟಿಗಳು ಹಾಗೂ ಸಂಚಿತ ನಿಧಿಯ ಜವಾಬ್ದಾರಿಗಳೂ ಮತ್ತು ಸಾರ್ವಜನಿಕ ಲೆಕ್ಕಗಳ ಜವಾಬ್ದಾರಿ ₹270,376.44 ಕೋಟಿಸೇರಿ ಆಗಿರುತ್ತದೆ. | | |

### *1.6.1 ರಾಜಸ್ವ ಹೆಚ್ಚಳದ ಪ್ರವೃತ್ತಿ*

ರಾಜಸ್ವ ಹೆಚ್ಚಳವು ಸರ್ಕಾರದ ರಾಜಸ್ವ ವೆಚ್ಚಕ್ಕಿಂತ ರಾಜಸ್ವ ಸ್ವೀಕೃತಿಗಳ ನಿವ್ವಳ ಅಧಿಕ್ಯವನ್ನು ಸೂಚಿಸುತ್ತದೆ.2014–15ರಿಂದ 2018–19 ರವರೆಗಿನ ರಾಜಸ್ವ ಹೆಚ್ಚಳದ ಪ್ರವೃತ್ತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಹಾಗೂ ನಕ್ಷೆಯಲ್ಲಿ ನೀಡಲಾಗಿದೆ.

(₹ಕೋಟಿಗಳಲ್ಲಿ)

| | 2014-15 | 2015-16 | 2016-17 | 2018-19 | 2018-19 |
|---|---|---|---|---|---|
| ರಾಜಸ್ವ ಹೆಚ್ಚಳ | 528 | 1,788 | 1,293 | 4,518 | 679 |
| ರಾ.ಒ.ಆಂ.ಉ.* | 913,923 | 1,045,182 | 1,155,912 | 1,325,443 | 1,408,112 |
| ರಾ.ಒ.ಆಂ.ಉ.ದ ಶತಾಂಶವಾಗಿ ರಾ.ಹೆಚ್ಚಳ | 0.06 | 0.17 | 0.11 | 0.34 | 0.05 |
| * ಆಕರ : ಮಧ್ಯಂತರ ವಿತ್ತೀಯ ಯೋಜನೆ 2019–23 | | | | | |





### *1.6.2 ವಿತ್ತೀಯ ಕೊರತೆಯ ಪ್ರವೃತ್ತಿ*

ವಿತ್ತೀಯ ಕೊರತೆಯನ್ನು ಒಟ್ಟು ವೆಚ್ಚ (ರಾಜಸ್ವ + ಬಂಡವಾಳ + ನಿವ್ವಳ ಸಾಲ ಮತ್ತು ಮುಂಗಡಗಳು)ದಲ್ಲಿ ರಾಜಸ್ವ ಸ್ವೀಕೃತಿಗಳು ಮತ್ತು ಇತರೆ ಬಂಡವಾಳ ಸ್ವೀಕೃತಿಗಳನ್ನು ಕಳೆದು ಲೆಕ್ಕ ಮಾಡಲಾಗುತ್ತದೆ. 2014–15ರಿಂದ 2018–19ರವರೆಗಿನ ವಿತ್ತೀಯ ಕೊರತೆಯ ಪ್ರವೃತ್ತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಹಾಗೂ ನಕ್ಷೆಯಲ್ಲಿ ನೀಡಲಾಗಿದೆ.

(₹ಕೋಟಿಗಳಲ್ಲಿ)

| | 2014-15 | 2015-16 | 2016-17 | 2018-19 | 2018-19 |
|---|---|---|---|---|---|
| ವಿತ್ತೀಯ ಕೊರತೆ | 19,576 | 19,169 | 28,665 | 31,101 | 38,442 |
| ರಾ. ಒ. ಆಂ ಉ.* | 913,923 | 1,045,182 | 1,155,912 | 1,325,443 | 1,408,112 |
| ರಾ.ಒ.ಆಂ.ಉ.ದ ಶತಾಂಶವಾಗಿ ವಿತ್ತೀಯ ಕೊರತೆ | 2.14 | 1.83 | 2.48 | 2.35 | 2.73 |
| * ಆಕರ : ಮಧ್ಯಂತರ ವಿತ್ತೀಯ ಯೋಜನೆ 2019–23. | | | | | |




### *1.6.3 ಸರ್ಕಾರದ ಲೆಕ್ಕಗಳು*

ಆಯಾ ವರ್ಷದ ಒಟ್ಟು ವೆಚ್ಚಕ್ಕೂ (ರಾಜಸ್ವ ಮತ್ತು ಬಂಡವಾಳ ವೆಚ್ಚ) ವರ್ಷದ ಒಟ್ಟು ಆದಾಯಕ್ಕೂ (ರಾಜಸ್ವ ಮತ್ತು ಋಣೇತರ ಬಂಡವಾಳ ಆದಾಯಗಳು) ಇರುವ ನಿವ್ವಳ ಹೆಚ್ಚಳ/ಕೊರತೆಯ ವ್ಯತ್ಯಾಸವನ್ನು 'ಸರ್ಕಾರದ ಲೆಕ್ಕ' ಎಂದು ಕರೆಯಲಾಗುವ ಪ್ರತ್ಯೇಕ ಖಾತೆಗೆ ವರ್ಗಾಯಿಸಲಾಗುವುದು. ಜೊತೆಗೆ, ಹಿಂದಿನ ವರ್ಷದ ಲೆಕ್ಕಗಳ ಹೊಂದಾಣಿಕೆ ಮತ್ತು ಇತರೆ ಸರ್ಕಾರಿ ಲೆಕ್ಕಗಳ ನಿವ್ವಳ ಪರಿಣಾಮದ ಅಂಶಗಳನ್ನು 'ಸರ್ಕಾರದ ಲೆಕ್ಕ' ಖಾತೆಗೆ ವರ್ಗಾಯಿಸಲಾಗುವುದು.

ಹೀಗೆ 'ಸರ್ಕಾರದ ಲೆಕ್ಕ'ದ ಖಾತೆಯು ವರ್ಷಾನುವರ್ಷ ಸರ್ಕಾರದ ವ್ಯವಹಾರಗಳಿಂದುಂಟಾದ ಆರ್ಥಿಕ ಹೆಚ್ಚಳ/ ಕೊರತೆಗಳ ಸಂಚಿತ ಪರಿಣಾಮವನ್ನು ನಿರೂಪಿಸುತ್ತದೆ. "ಸರ್ಕಾರ ಲೆಕ್ಕ"ಗಳ ಹಿಂದಿನ ಐದು ವರ್ಷಗಳ ಖಾತೆಯ ವಿವರಗಳು ಈ ಕೆಳಗಿನಂತಿವೆ:

(₹ ಕೋಟಿಗಳಲ್ಲಿ)


| ವರ್ಷ | ರಾಜಸ್ವ ಶೀರ್ಷಿಕೆ | | | ಬಂಡವಾಳ ಶೀರ್ಷಿಕೆ | | | Other Heads [#] | ಸದರಿ ಸಾಲಿನ ಕೊರತೆ (–) | ಸಂಚಿತ ಹೆಚ್ಚಳ (+) ಕೊರತೆ (–) ವರ್ಷಾಂತ್ಯಕ್ಕೆ |
|---|---|---|---|---|---|---|---|---|---|
| | ಜಮೆ | ಬಟವಾಡೆ | ಹೆಚ್ಚಳ (+) ಕೊರತೆ (–) | ಜಮೆ | ಬಟವಾಡೆ | ಹೆಚ್ಚಳ (+) ಕೊರತೆ (–) | ಹೆಚ್ಚಳ (+) ಕೊರತೆ (–) | | |
| 2014-15 | 104,142 | 103,614 | (+) 528 | 10 | 19,622 | (-) 19,612 | … | (-) 19,084 | (-) 139,860 |
| 2015-16 | 118,817 | 117,029 | (+) 1,788 | 352 | 20,713 | (-) 20,361 | … | (-) 18,573 | (-) 158,433 |
| 2016-17 | 133,214 | 131,921 | (+) 1,293 | 27 | 28,151 | (-) 28,124 | … | (-) 26,831 | (-) 185,264 |
| 2018-19 | 147,000 | 142,482 | (+) 4,518 | 4 | 30,667 | (-) 30,663 | … | (-) 26,145 | (-) 211,409 |
| 2018-19 | 164,979 | 164,300 | (+) 679 | (-) 6 | 34,659 | (-) 34,665 | … | (-) 33,986 | (-) 245,395 |

(#) ಇತರೆ ಸರ್ಕಾರದ ಲೆಕ್ಕ

### *1.6.4 ಸಾಲದ ಮೊತ್ತದಲ್ಲಿ ಬಂಡವಾಳ ವೆಚ್ಚಕ್ಕೆ ಬಳಸಿದ ಪ್ರಮಾಣ*

ಸಾಲವಾಗಿ ಪಡೆದ ಮೊತ್ತವನ್ನು ಪೂರ್ಣವಾಗಿ ಬಂಡವಾಳ ಆಸ್ತಿ ನಿರ್ಮಾಣಕ್ಕೆ ಬಳಸಿ ರಾಜಸ್ವ ಸ್ವೀಕೃತಿಗಳನ್ನು ಬಡ್ಡಿಪಾವತಿಗೆ ಉಪಯೋಗಿಸುವುದು ಸೂಕ್ತ. ಆದರೆ, ರಾಜ್ಯ ಸರ್ಕಾರವು ಪ್ರಸಕ್ತ ಸಾಲಿನ ಸಾಲದ ಮೊತ್ತವನ್ನು (₹38,442 ಕೋಟಿ) ಬಂಡವಾಳ ವೆಚ್ಚಕ್ಕೆ ಸಾಲ ಮತ್ತು ಮುಂಗಡಗಳ ವಿತರಣೆಯೊಳಗೊಂಡಂತೆ (₹39,146 ಕೋಟಿ) ಖರ್ಚು ಮಾಡಲಾಗಿದೆ.

**ಸಾಲದ ಮೊತ್ತ ಮತ್ತು ಬಂಡವಾಳ ವೆಚ್ಚ**




~~~
~~~

# ಅಧ್ಯಾಯ–II

## ಸ್ವೀಕೃತಿಗಳು


### 2.1 ಪೀಠಿಕೆ

ಸರ್ಕಾರದ ಸ್ವೀಕೃತಿಗಳನ್ನು ರಾಜಸ್ವ ಸ್ವೀಕೃತಿಗಳು ಮತ್ತು ಬಂಡವಾಳ ಸ್ವೀಕೃತಿಗಳು ಎಂದು ವರ್ಗೀಕರಿಸಲಾಗಿದೆ. 2018–19ನೇ ಸಾಲಿನ ಒಟ್ಟು ರಾಜಸ್ವ ಸ್ವೀಕೃತಿಗಳು ₹164,979 ಕೋಟಿಗಳಷ್ಟಿದ್ದು, ಇದು ರಾಜ್ಯದ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳು ₹35,895 ಕೋಟಿ ಒಳಗೊಂಡಂತೆ, ತೆರಿಗೆ ರಾಜಸ್ವ (₹132,725 ಕೋಟಿ,) ತೆರಿಗೆಯೇತರ ರಾಜಸ್ವ (₹6,773 ಕೋಟಿ) ಹಾಗು ಕೇಂದ್ರ ಸರ್ಕಾರದ ಸಹಾಯಾನುದಾನ ಮತ್ತು ವಂತಿಗೆಗಳು (₹25,481 ಕೋಟಿ) ಒಳಗೊಂಡಿದೆ.ಬಂಡವಾಳ ಸ್ವೀಕೃತಿಯ (₹38,467 ಕೋಟಿ), ಸಾಲ ಮತ್ತು ಮುಂಗಡಗಳ ವಸೂಲಾತಿ (₹31 ಕೋಟಿ) ಇತರೆ ಬಂಡವಾಳ ಸ್ವೀಕೃತಿಗಳು (₹(-)6ಕೋಟಿ) ಮತ್ತು'ಸಾಲಗಳು ಮತ್ತು ಇತರೆ ಜವಾಬ್ದಾರಿಗಳು' (₹38,442 ಕೋಟಿ) ಒಳಗೊಂಡಿದೆ.ಸಾಲಗಳು ಮತ್ತು ಇತರೆ ಜವಾಬ್ದಾರಿಯು, (1) "ಸಾರ್ವಜನಿಕ ಋಣ" (₹30,831 ಕೋಟಿ) (2) "ಸಾದಿಲ್ವಾರು ನಿಧಿ" (ಇಲ್ಲ), (3) "ನಿವ್ವಳ ಸಾರ್ವಜನಿಕ ಲೆಕ್ಕ" (₹7,877 ಕೋಟಿ) ಇವುಗಳ ಮೊತ್ತದಲ್ಲಿ ಕಳೆದ (4) "ನಿವ್ವಳ ನಗದು ಶಿಲ್ಕು" ₹266 ಕೋಟಿಯನ್ನು ಒಳಗೊಂಡಿದೆ.

### 2.2 ರಾಜಸ್ವ ಸ್ವೀಕೃತಿಗಳು

ರಾಜ್ಯ ಸರ್ಕಾರದ ರಾಜಸ್ವ ಸ್ವೀಕೃತಿಗಳು ರಾಜ್ಯದ ಸ್ವಂತ ತೆರಿಗೆ ಮತ್ತು ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲನ್ನೊಳಗೊಂಡಂತೆ 'ತೆರಿಗೆ ರಾಜಸ್ವ', 'ತೆರಿಗೆಯೇತರ ರಾಜಸ್ವ' ಮತ್ತು 'ಕೇಂದ್ರ ಸರ್ಕಾರದ ಸಹಾಯಾನುದಾನಗಳು ಮತ್ತು ವಂತಿಗೆಗಳು' ಎಂಬ ಮೂರು ಮುಖ್ಯ ಮೂಲಗಳನ್ನು ಒಳಗೊಂಡಿದೆ.ಒಟ್ಟು ರಾಜಸ್ವದ ಸ್ವೀಕೃತಿಗೆ ಶತಾಂಶ ವಿಭಾಗೀಯ ರಾಜಸ್ವ ಸೀಕೃತಿಯನ್ನು ಕೆಳಗಿನ ಪೈ ನಕ್ಷೆಯಲ್ಲಿ ತೋರಿಸಲಾಗಿದೆ.

| | |
|---|---|
| **ತೆರಿಗೆ ರಾಜಸ್ವ** | ಇದು ರಾಜ್ಯ ಸರ್ಕಾರವು ಸಂಗ್ರಹಿಸಿ ಉಳಿಸಿಕೊಂಡ ತೆರಿಗೆಗಳು ಮತ್ತು ಸುಂಕಗಳು ಮತ್ತು ಸಂವಿಧಾನದ ಅನುಚ್ಛೇದ 280 (3) ರ ಅನ್ವಯ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲನ್ನು ಒಳಗೊಂಡಿದೆ. |
| **ತೆರಿಗೆಯೇತರ ರಾಜಸ್ವ** | ಇದರಲ್ಲಿ ಬಡ್ಡಿ ಸ್ವೀಕೃತಿ, ಲಾಭಾಂಶಗಳು ಮತ್ತು ಲಾಭಗಳು ಮತ್ತು ಇತರ ಇಲಾಖಾ ಸ್ವೀಕೃತಿಗಳು ಸೇರಿವೆ. |
| **ಸಹಾಯಾನುದಾನಗಳು ಮತ್ತು ವಂತಿಗೆಗಳು** | ಇದು ರಾಜ್ಯ ಸರ್ಕಾರಕ್ಕೆ ಕೇಂದ್ರ ನೀಡಿದ ಸಹಾಯವಾಗಿದ್ದು ಇದರಲ್ಲಿ ಕೇಂದ್ರ ಸರ್ಕಾರದ ಮೂಲಕ ವಿದೇಶಿ ಸರ್ಕಾರಗಳಿಂದ ಪಡೆದ ಬಾಹ್ಯ ಅನುದಾನ ಸಹಾಯ ಮತ್ತು ಸಹಾಯ ಸಾಮಗ್ರಿಗಳು ಮತ್ತು ಸಾಧನಗಳು ಸೇರಿವೆ. |



### 2.2.1 ರಾಜಸ್ವ ಸ್ವೀಕೃತಿಗಳ ಭಾಗಗಳು


ಒಟ್ಟು ರಾಜಸ್ವ ಸ್ವೀಕೃತಿಗಳಿಗೆ 'ತೆರಿಗೆ ರಾಜಸ್ವ' ಮತ್ತು 'ತೆರಿಗೆಯೇತರ ರಾಜಸ್ವ'ಗಳ ಶತಾಂಶವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಭಾಗಗಳು | ಮೊತ್ತ (₹ ಕೋಟಿಗಳಲ್ಲಿ) | ಒಟ್ಟು ರಾಜಸ್ವ ಸ್ವೀಕೃತಿಗೆ ಶೇಕಡಾವಾರು |
|---|---|---|
| **ಅ. ತೆರಿಗೆ ರಾಜಸ್ವ(*)** | **132,725** | **81** |
| ವರಮಾನ ಮತ್ತು ವೆಚ್ಚದ ಮೇಲಿನ ತೆರಿಗೆಗಳು | 22,796 | 14 |
| ಆಸ್ತಿ ಮತ್ತು ಬಂಡವಾಳ ವ್ಯವಹಾರಗಳ ಮೇಲಿನತೆರಿಗೆಗಳು | 10,924 | 7 |
| ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ | 99,005 | 60 |
| **ಆ. ತೆರಿಗೆಯೇತರ ರಾಜಸ್ವ** | **6,773** | **4** |
| ಬಡ್ಡಿ ಜಮೆಗಳು, ಲಾಭ ಮತ್ತು ಲಾಭಾಂಶಗಳು | 1,150 | 1 |
| ಸಾಮಾನ್ಯ ಸೇವೆಗಳು | 1,052 | 1 |
| ಸಾಮಾಜಿಕ ಸೇವೆಗಳು | 701 | – |
| ಆರ್ಥಿಕ ಸೇವೆಗಳು | 3,870 | 2 |
| **ಇ. ಸಹಾಯಾನುದಾನಗಳು ಮತ್ತು ವಂತಿಗೆಗಳು** | **25,481** | **15** |
| **ಒಟ್ಟು ರಾಜಸ್ವ ಸ್ವೀಕೃತಿಗಳು** | **164,979** | **100** |

(*)ಕೇಂದ್ರ ಸರ್ಕಾರದಿಂದ ಹಂಚಲಾದ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು ₹35,895 ಕೋಟಿ (ರಾಜಸ್ವ ಜಮೆಯ ಶೇಕಡ 21.76) ಒಳಗೊಂಡಿದೆ.

**ರಾಜಸ್ವ ಸ್ವೀಕೃತಿಗಳ ಭಾಗಗಳ ಪ್ರವೃತ್ತಿ**

ಒಟ್ಟು ತೆರಿಗೆ ಆದಾಯ ₹132,725 ಕೋಟಿ ಮತ್ತು ತೆರಿಗೆಯೇತರ ಆದಾಯ ₹6,773 ಕೋಟಿ ಕ್ರಮವಾಗಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ* ಶೇಕಡ 9.43 ಮತ್ತು ಶೇಕಡ 0.48 ರಷ್ಟಿವೆ.




### 2.2.2 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ

ಕಳೆದ ಐದು ವರ್ಷಗಳ ರಾಜಸ್ವ ಸ್ವೀಕೃತಿಗಳ ವಿಭಾಗಗಳ ಪ್ರವೃತ್ತಿ ಮತ್ತು ರಾ.ಒ.ಆಂ.ಉ.ದ ಒಟ್ಟು ರಾಜಸ್ವ ಸ್ವೀಕೃತಿಗಳ ಶತಾಂಶವನ್ನು ನಕ್ಷೆಯ ಸಹಿತ ಈ ಕೆಳಗೆ ಕೋಷ್ಟಕದಲ್ಲಿ ನೀಡಲಾಗಿದೆ.

(₹ಕೋಟಿಗಳಲ್ಲಿ)

| ವರ್ಷ | ತೆರಿಗೆ ರಾಜಸ್ವ | ತೆರಿಗೆಯೇತರ ರಾಜಸ್ವ | ಸಹಾಯಾನು ದಾನಗಳು ಮತ್ತು ವಂತಿಗೆಗಳು | ಒಟ್ಟು ರಾಜಸ್ವ ಸ್ವೀಕೃತಿ | ರಾ.ಒ.ಆಂ.ಉ* | ರಾ.ಒ.ಆಂ.ಉ. ದ ಮೇಲಿನ ಒಟ್ಟು ರಾಜಸ್ವ ಸ್ವೀಕೃತಿಗಳ ಶತಾಂಶ |
|---|---|---|---|---|---|---|
| 2014-15 | 84,835 | 4,688 | 14,619 | 104,142 | 913,923 | 11.40 |
| 2015-16 | 99,533 | 5,355 | 13,929 | 118,817 | 1,045,182 | 11.37 |
| 2016-17 | 111,716 | 5,795 | 15,703 | 133,214 | 1,155,912 | 11.52 |
| 2017-18 | 118,882 | 6,477 | 21,641 | 147,000 | 1,325,443 | 11.09 |
| 2018-19 | 132,725 | 6,773 | 25,481 | 164,979 | 1,408,112 | 11.72 |

* ಆಕರ : ಮಧ್ಯಂತರ ವಿತ್ತೀಯ ಯೋಜನೆ 2019–23).





## *2.3 ರಾಜಸ್ವ ತೆರಿಗೆಯ ಸಂಗ್ರಹಣೆಯ ಪ್ರವೃತ್ತಿ*

ಕಳೆದ ಐದು ವರ್ಷಗಳ ತೆರಿಗೆ ರಾಜಸ್ವದ ಉಪ–ವಿಭಾಗವಾರು ಪ್ರವೃತ್ತಿಯನ್ನು ಈ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ತೆರಿಗೆ ರಾಜಸ್ವ | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ವರಮಾನ ಮತ್ತು ವೆಚ್ಚದ ಮೇಲಿನ ತೆರಿಗೆಗಳು | 9,660 | 13,653 | 16,515 | 18,909 | 22,796 |
| 2ಆಸ್ತಿ ಮತ್ತು ಬಂಡವಾಳ ವ್ಯವಹಾರಗಳ ಮೇಲಿನ ತೆರಿಗೆಗಳು | 7,225 | 8,397 | 8,036 | 9,219 | 10,924 |
| ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ | 67,950 | 77,483 | 87,165 | 90,754 | 99,005 |
| **ಒಟ್ಟು ರಾಜಸ್ವ ತೆರಿಗೆ** | **84,835** | **99,533** | **111,716** | **118,882** | **132,725** |

ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಪ್ರಮುಖ ತೆರಿಗೆಗಳ ಪ್ರಮಾಣದ ಪ್ರವೃತ್ತಿ




### 2.3.1 ರಾಜ್ಯದ ತೆರಿಗೆಯ ಸಂಗ್ರಹದ ನಿರ್ವಹಣೆ

(₹ ಕೋಟಿಗಳಲ್ಲಿ)

| ವರ್ಷ | ರಾಜಸ್ವ ತೆರಿಗೆ | ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯ ಪಾಲು | ರಾಜ್ಯದ ಸ್ವಂತ ರಾಜಸ್ವ ತೆರಿಗೆ | ರಾ.ಒ.ಆಂ.ಉ* | ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯ ಪಾಲು | ರಾಜ್ಯದ ಸ್ವಂತ ರಾಜಸ್ವದ ತೆರಿಗೆ |
|---|---|---|---|---|---|---|
| | (₹ ಕೋಟಿಗಳಲ್ಲಿ) | | | | ರಾ.ಒ.ಆಂ.ಉ. ಶತಾಂಶ | |
| 2014-15 | 84,835 | 14,654 | 70,181 | 913,923 | 1.60 | 7.68 |
| 2015-16 | 99,533 | 23,983 | 75,550 | 1,045,182 | 2.29 | 7.22 |
| 2016-17 | 111,716 | 28,760 | 82,956 | 1,155,912 | 2.49 | 7.18 |
| 2017-18 | 118,882 | 31,752 | 87,130 | 1,325,443 | 2.40 | 6.57 |
| 2018-19 | 132,725 | 35,895 | 96,830 | 1,408,112 | 2.55 | 6.88 |

* ಆಕರ : ಮಧ್ಯಂತರ ವಿತ್ತೀಯ ಯೋಜನೆ 2019–23.

## 2.4 ತೆರಿಗೆ ಸಂಗ್ರಹದ ದಕ್ಷತೆ

### ಎ. *ಆಸ್ತಿಗಳ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಗಳು(*)*

ತೆರಿಗೆ ಸಂಗ್ರಹದ ವೆಚ್ಚಕ್ಕೆ ಅನುಗುಣವಾಗಿ ತೆರಿಗೆ ಸಂಗ್ರಹದ ದಕ್ಷತೆಯನ್ನು ಈ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಒಟ್ಟು ರಾಜಸ್ವ ಸಂಗ್ರಹ | 7,221 | 8,423 | 8,093 | 8,947 | 10,288 |
| ಸಂಗ್ರಹದ ಮೇಲಿನ ವೆಚ್ಚ (ಎ) | 360 | 420 | 440 | 353 | 533 |
| ತೆರಿಗೆ ಸಂಗ್ರಹದ ಶೇಕಡಾವಾರು ಶುಲ್ಕ | 4.99 | 4.99 | 5.44 | 3.95 | 5.18 |
| (*)ಸಂಪತ್ತಿನ ಮೇಲಿನ ತೆರಿಗೆಯು ರಾಜ್ಯದ ಸ್ವಂತ ತೆರಿಗೆಯ ಭಾಗವಲ್ಲವಾದ್ದರಿಂದ ಆಸ್ತಿಗಳ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಗಳಲ್ಲಿ ಇವುಗಳನ್ನು ಹೊರತುಪಡಿಸಿದೆ'. | | | | | |
| (ಎ)ಒಳಶೀರ್ಷಿಕೆ '001- ನಿರ್ದೇಶನ ಮತ್ತು ಆಡಳಿತ' ಹಾಗೂ '101–ಸಂಗ್ರಹಣಾ ಶುಲ್ಕ' ಇದರಡಿಯಲ್ಲಿ ವೆಚ್ಚವಾದ ಮೊತ್ತಗಳನ್ನೊಳಗೊಂಡಿದೆ. | | | | | |

### ಬಿ. *ಸರಕು ಮತ್ತು ಸೇವಾ ತೆರಿಗೆ (*)*

(₹ ಕೋಟಿಗಳಲ್ಲಿ)

| ವಿವರ | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ರಾಜಸ್ವ ಸಂಗ್ರಹ | 63,497 | 67,753 | 75,983 | 55,086 | 84,838 |
| ಸಂಗ್ರಹದ ಮೇಲಿನ ವೆಚ್ಚ (ಎ) | 1,697 | 488 | 411 | 204 | 668 |
| ತೆರಿಗೆ ಸಂಗ್ರಹದ ಶೇಕಡಾವಾರು ವೆಚ್ಚ | 2.67 | 0.72 | 0.54 | 0.37 | 0.79 |
| (*) 'ಸೀಮಾ ಶುಲ್ಕ, ಕೇಂದ್ರ ಅಬಕಾರಿ ಶುಲ್ಕ, ಸೇವಾ ತೆರಿಗೆ – ಇವುಗಳನ್ನು ಹೊರತುಪಡಿಸಿದೆ'. | | | | | |
| (A)ಒಳಶೀರ್ಷಿಕೆ '001- ನಿರ್ದೇಶನ ಮತ್ತು ಆಡಳಿತ' ಹಾಗೂ '101-ಸಂಗ್ರಹಣಾ ಶುಲ್ಕ' ಇದರಡಿಯಲ್ಲಿ ವೆಚ್ಚವಾದ ಮೊತ್ತಗಳನ್ನೊಳಗೊಂಡಿದೆ. | | | | | |

### 2.4.1 ಕಳೆದ ಐದು ವರ್ಷಗಳಲ್ಲಿ ರಾಜ್ಯದ ಸ್ವಂತ ತೆರಿಗೆ ಸಂಗ್ರಹಣೆಯ ಪ್ರವೃತ್ತಿ

(₹ ಕೋಟಿಗಳಲ್ಲಿ)

| ಲೆಕ್ಕ ಶೀರ್ಷಿಕೆ | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆಗಳು | 38,286 | 40,449 | 46,105 | 25,093 | 14,003 |
| ರಾಜ್ಯ ಸರಕು ಮತ್ತು ಸೇವಾ ತೆರಿಗೆ | ... | ... | ... | 24,182 | 41,956 |
| ರಾಜ್ಯ ಅಬಕಾರಿ | 13,801 | 15,333 | 16,484 | 17,949 | 19,943 |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 7,026 | 8,215 | 7,806 | 9,024 | 10,775 |
| ನಿಗಮ ತೆರಿಗೆ | 5,117 | 7,548 | 9,211 | 9,721 | 12,482 |
| ವಾಹನಗಳ ಮೇಲಿನ ತೆರಿಗೆ | 4,542 | 5,002 | 5,594 | 6,209 | 6,568 |
| ನಿಗಮ ತೆರಿಗೆ ಹೊರತು ಇತರ ತೆರಿಗೆ | 3,654 | 5,252 | 6,402 | 8,209 | 9,192 |
| ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆ | 3,038 | 3,125 | 3,306 | 1,279 | 28 |
| ಸೀಮಾ ಸುಂಕ | 2,370 | 3,830 | 3,962 | 3,204 | 2,544 |
| ಕೇಂದ್ರ ಅಬಕಾರಿ ಸುಂಕ | 1,338 | 3,182 | 4,525 | 3,349 | 1,691 |
| ಸೇವಾ ತೆರಿಗೆ | 2,161 | 4,154 | 4,639 | 3,617 | 332 |
| ಸರಕು ಮತ್ತು ಸೇವೆಗಳ ಮೇಲಿನ ಇತರ ತೆರಿಗೆ ಮತ್ತು ಸುಂಕ | 1,373 | 1,224 | 1,099 | 736 | 21 |
| ವಿದ್ಯುತ್ ಮೇಲಿನ ಸುಂಕದ ಮೇಲಿನ ತೆರಿಗೆ | 1,041 | 1,170 | 1,452 | 1,485 | 2,334 |
| ಸಂಯೋಜಿತ ಸರಕುಗಳ ಮಾರಾಟ ತೆರಿಗೆ | ... | ... | ... | 3,205 | 707 |
| ಕೇಂದ್ರ ಸರಕು ಮತ್ತು ಸೇವಾ ತೆರಿಗೆ | ... | ... | ... | 448 | 8,859 |

ಈ ವರ್ಷದ ನಿವ್ವಳ ತೆರಿಗೆ ಸ್ವೀಕೃತಿಯು ಆಯವ್ಯಯ ಅಂದಾಜುಗಳಿಗಿಂತ ₹691 ಕೋಟಿಗಳಷ್ಟು ಅಧಿಕವಾಗಿತ್ತು. ಆಯವ್ಯಯ ಅಂದಾಜುಗಳಿಗೆ ಹೋಲಿಸಿದರೆ ವಾಸ್ತವವಾಗಿ ಸಂಗ್ರಹವಾದ ತೆರಿಗೆ ರಾಜಸ್ವದಲ್ಲಿ ಉಂಟಾದ ಪ್ರಮುಖ ವ್ಯತ್ಯಯವನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಆಯವ್ಯಯ ಅಂದಾಜುಗಳಿಗಿಂತ ಕಡಿಮೆ ಸಂಗ್ರಹವಾದ ತೆರಿಗೆ | ಮೊತ್ತ | ಆಯವ್ಯಯ ಅಂದಾಜುಗಳಿಗಿಂತ ವಾಸ್ತವವಾಗಿ ಹೆಚ್ಚಾಗಿ ಸಂಗ್ರಹವಾದ ತೆರಿಗೆ | ಮೊತ್ತ |
|---|---|---|---|
| ಸರಕುಗಳ ಮತ್ತು ಸೇವೆಗಳ ಮೇಲಿನ ಕೇಂದ್ರ ತೆರಿಗೆಗಳು | 3,095 | ನಿಗಮ ತೆರಿಗೆ | 2053 |
| ಸಮಗ್ರ ಸರಕು ಮತ್ತು ಸೇವೆಗಳ ತೆರಿಗೆ | 283 | ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆ | 1,279 |
| ವಿದ್ಯುತ್ ಮೇಲಿನ ಸುಂಕ ಮತ್ತು ತೆರಿಗೆ | 247 | ಸೀಮಾ ಶುಲ್ಕ | 714 |
| ಭೂ ಕಂದಾಯ | 141 | ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆ | 471 |
| ಕೇಂದ್ರ ಅಬಕಾರಿ ಸುಂಕ | 92 | ಮುದ್ರಾಂಕ ಮತ್ತು ನೋಂದಣಿ ಶುಲ್ಕ | 375 |
| ವಾಹನಗಳ ಮೇಲಿನ ತೆರಿಗೆ | 88 | ಸೇವಾ ತೆರಿಗೆ | 332 |
| ನಿಗಮ ತೆರಿಗೆ ಹೊರತುಪಡಿಸಿ ಆದಾಯದ ಮೇಲಿನ ತೆರಿಗೆ | 37 | ವರಮಾನ ಮತ್ತು ವ್ಯಯಗಳ ಮೇಲಿನ ಇತರ ತೆರಿಗೆಗಳು | 184 |
| ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆ | 28 | ವ್ಯವಸಾಯ ವರಮಾನದ ಮೇಲಿನ ತೆರಿಗೆಗಳು | 15 |
| ಸಂಪತ್ತು ತೆರಿಗೆ | 5 | ಸರಕು ಮತ್ತು ಸೇವೆಗಳ ಮೇಲಿನ ಇತರ ತೆರಿಗೆಗಳು ಮತ್ತು ಸುಂಕಗಳು | 12 |
| | | ರಾಜ್ಯ ಸರಕು ಮತ್ತು ಸೇವಾ ತೆರಿಗೆ | 306 |
| | | ರಾಜ್ಯ ಅಬಕಾರಿ | 194 |

## 2.4.2 ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯ ಪಾಲಿನ ಪ್ರವೃತ್ತಿ

(₹ ಕೋಟಿಗಳಲ್ಲಿ)

| ಪ್ರಧಾನ ಶೀರ್ಷಿಕೆ ವಿವರ | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ನಿಗಮ ತೆರಿಗೆ | 5,117 | 7,548 | 9,211 | 9,721 | 12,482 |
| ನಿಗಮ ತೆರಿಗೆ ಹೊರತಾದ ವರಮಾನದ ಮೇಲಿನ ತೆರಿಗೆ | 3,654 | 5,252 | 6,402 | 8,209 | 9,192 |
| ಸಂಪತ್ತು ತೆರಿಗೆ | 14 | 2 | 21 | (-) 0.30 | 5 |
| ಸೀಮಾ ಸುಂಕ | 2,370 | 3,830 | 3,962 | 3,204 | 2,544 |
| ಕೇಂದ್ರ ಅಬಕಾರಿ ಸುಂಕ | 1,338 | 3,182 | 4,525 | 3,349 | 1,691 |
| ಸೇವಾ ತೆರಿಗೆ | 2,161 | 4,153 | 4,639 | 3,617 | 332 |
| ಸರಕುಗಳ ಮತ್ತು ಸೇವೆಗಳ ಮೇಲಿನ ಕೇಂದ್ರ ತೆರಿಗೆಗಳು | ... | ... | ... | 448 | 8,859 |
| ಸಮಗ್ರ ಸರಕು ಮತ್ತು ಸೇವೆಗಳ ತೆರಿಗೆ | ... | ... | ... | 3205 | 707 |
| **ರಾಜ್ಯ ಪಾಲಿನ ಕೇಂದ್ರ ತೆರಿಗೆ ಮತ್ತು ಸುಂಕಗಳು** | **14,654** | **23,983** | **28,760** | **31,752** | **35,895** |
| **ಒಟ್ಟು ರಾಜಸ್ವ ತೆರಿಗೆ** | **84,835** | **99,533** | **111,716** | **118,882** | **132,725** |
| **ಒಟ್ಟು ರಾಜಸ್ವ ತೆರಿಗೆಗೆ ಕೇಂದ್ರ ತೆರಿಗೆ ಮತ್ತು ಸುಂಕಗಳ ಶತಾಂಶ** | **17.27** | **24.10** | **25.74** | **26.71** | **27.04** |

## 2.5 ಸಾರ್ವಜನಿಕ ಋಣ


ಕಳೆದ ಐದು ವರ್ಷಗಳಲ್ಲಿ ಸಾರ್ವಜನಿಕ ಋಣದಡಿ ಸ್ವೀಕೃತಿಗಳ ಪ್ರವೃತ್ತಿಯನ್ನು ಕೆಳಗೆ ಸೂಚಿಸಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ರಾಜ್ಯಸರ್ಕಾರದ ಆಂತರಿಕ ಋಣ | 20,510 | 19,801 | 29,238 | 23,179 | 40,470 |
| ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮತ್ತು ಮುಂಗಡಗಳು | 1,365 | 1,271 | 1,918 | 1,943 | 1,444 |
| **ಒಟ್ಟು ಸಾರ್ವಜನಿಕ ಋಣ** | **21,875** | **21,072** | **31,156** | **25,122** | **41,914** |

ಪ್ರಸಕ್ತ 2018–19ರಲ್ಲಿ ರಾಜ್ಯ ಸರ್ಕಾರವು 2028–29ರಲ್ಲಿ ವಿಮೋಚನೆಗೊಳ್ಳುವ ₹39,600 ಕೋಟಿಗಳಷ್ಟು ಮೊತ್ತದ 22 ಮಾರುಕಟ್ಟೆ ಸಾಲಗಳನ್ನು ಪಡೆದಿದೆ. ಪ್ರಸಕ್ತ ಸಾಲಿನಲ್ಲಿಸಾರ್ವಜನಿಕ ಋಣದ ಒಟ್ಟು ಸ್ವೀಕೃತಿ ₹41,914 ಕೋಟಿಯಲ್ಲಿ ರಾಜ್ಯ ಸರ್ಕಾರದ ಆಂತರಿಕ ಋಣ (₹40,470 ಕೋಟಿ) ಮತ್ತು ಕೇಂದ್ರ ಸಾಲದ ಮತ್ತು ಮುಂಗಡ (₹1,444 ಕೋಟಿ) ಭಾಗಕ್ಕೆ ಪ್ರತಿಯಾಗಿ, ₹11,083 ಕೋಟಿ ಮೊತ್ತದ ಸಾರ್ವಜನಿಕ ಋಣದ ಮರುಪಾವತಿಯನ್ನು ಹೊರತುಪಡಿಸಿ ಬಂಡವಾಳ ವೆಚ್ಚವು ₹39,146ಕೋಟಿಯಷ್ಟಿತ್ತು.

**ಸಾರ್ವಜನಿಕ ಋಣದ ಅಡಿಯಲ್ಲಿ ಸ್ವೀಕೃತಿಗಳ ಪ್ರವೃತ್ತಿ**




~~~
~~~

# *ಅಧ್ಯಾಯ–III*

## ವೆಚ್ಚಗಳು

### 3.1 ಪೀಠಿಕೆ

ವೆಚ್ಚಗಳನ್ನು ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚ ಎಂದು ವರ್ಗೀಕರಿಸಲಾಗಿದೆ. ರಾಜಸ್ವ ವೆಚ್ಚವನ್ನು ರಾಜ್ಯ ಸರ್ಕಾರದ ಇಲಾಖೆಗಳ ದಿನನಿತ್ಯದ ಖರ್ಚಿನ ನಿರ್ವಹಣೆಗೆ ಬಳಸಲಾಗುತ್ತದೆ. ಬಂಡವಾಳ ವೆಚ್ಚವನ್ನು ಶಾಶ್ವತ ಆಸ್ತಿ ನಿರ್ಮಾಣ ಅಥವಾ ಅಂತಹ ಆಸ್ತಿಗಳ ಉಪಯುಕ್ತತೆಯನ್ನು ಹೆಚ್ಚಿಸಲು ಅಥವಾ ಶಾಶ್ವತ ಜವಾಬ್ದಾರಿಗಳನ್ನು ಕಡಿಮೆಯಾಗಿಸಲು ಬಳಸಲಾಗುತ್ತದೆ.

| | |
|---|---|
| **ಸಾಮಾನ್ಯ ಸೇವೆಗಳು** | ನ್ಯಾಯಾಂಗ, ಪೋಲೀಸ್, ಬಂದೀಖಾನೆ, ಲೋಕೋಪಯೋಗಿ, ನಿವೃತ್ತಿ ವೇತನ ಮುಂತಾದವುಗಳನ್ನು ಒಳಗೊಂಡಿದೆ. |
| **ಸಾಮಾಜಿಕ ಸೇವೆಗಳು** | ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ನೀರು ಸರಬರಾಜು ಮತ್ತು ನೈರ್ಮಲ್ಯ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ, ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಮುಂತಾದವುಗಳನ್ನು ಒಳಗೊಂಡಿದೆ. |
| **ಆರ್ಥಿಕ ಸೇವೆಗಳು** | ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಸಹಕಾರ, ಇಂಧನ, ಕೈಗಾರಿಕೆಗಳು, ಸಾರಿಗೆ ಮುಂತಾದವುಗಳನ್ನು ಒಳಗೊಂಡಿದೆ. |

### 3.2 ರಾಜಸ್ವ ವೆಚ್ಚ

2018–19ನೇ ಸಾಲಿನ ₹164,300 ಕೋಟಿಗಳ ರಾಜಸ್ವ ವೆಚ್ಚವು ಆಯವ್ಯಯ ಅಂದಾಜಿಗಿಂತಲೂ (₹166,290 ಕೋಟಿ) ₹1,990 ಕೋಟಿಗಳಷ್ಟು ಕಡಿಮೆಯಾಗಿದೆ. ಕಳೆದ ಐದು ವರ್ಷಗಳಲ್ಲಿ ಆಯವ್ಯಯ ಅಂದಾಜಿಗೆ ಪ್ರತಿಯಾಗಿ ರಾಜಸ್ವ ವೆಚ್ಚದ ಪ್ರವೃತ್ತಿಯನ್ನು ಕೆಳಗೆ ನೀಡಲಾಗಿದೆ.

**(₹ ಕೋಟಿಗಳಲ್ಲಿ)**

| ವಿವರ | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಆಯವ್ಯಯ ಅಂದಾಜುಗಳು | 110,757 | 115,449 | 130,236 | 144,755 | 166,290 |
| ವಾಸ್ತವ ವೆಚ್ಚ | 103,614 | 117,029 | 131,921 | 142,482 | 164,300 |
| ಅಂತರ | (-) 7,143 | 1,580 | 1,685 | (-) 2,273 | (-)1,990 |
| ಆಯವ್ಯಯದ ಅಂತರಕ್ಕೆ ಶೇಕಡಾವಾರು | (-) 6 | 1 | 1 | (-) 2 | (-)1 |

ಕಳೆದ ಐದು ವರ್ಷಗಳಲ್ಲಿ ಬದ್ಧ ಹಾಗೂ ಬದ್ಧವಲ್ಲದ ರಾಜಸ್ವ ವೆಚ್ಚದ ಸ್ಥಿತಿಯನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಭಾಗಗಳು | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಒಟ್ಟು ರಾಜಸ್ವ ವೆಚ್ಚ | 103,614 | 117,028 | 131,921 | 142,482 | 164,300 |
| ಬದ್ಧ ರಾಜಸ್ವ ವೆಚ್ಚ# | 87,719 | 96,638 | 105,052 | 110,483 | 138,841 |
| ಒಟ್ಟು ರಾಜಸ್ವ ವೆಚ್ಚದಲ್ಲಿ ಬದ್ಧ ವೆಚ್ಚದ ಶತಾಂಶ | 85 | 83 | 80 | 78 | 85 |
| ಬದ್ಧವಲ್ಲದ ರಾಜಸ್ವ ವೆಚ್ಚ | 15,895 | 29,309 | 26,869 | 31,999 | 25,459 |

# ಬದ್ಧ ರಾಜಸ್ವ ವೆಚ್ಚವು ಸಂಬಳ ಮತ್ತು ಮಜೂರಿ, ಬಡ್ಡಿ ಪಾವತಿಗಳು, ವಿಶ್ರಾಂತಿವೇತನ ಮತ್ತು ಸಹಾಯಧನಗಳನ್ನು ಒಳಗೊಂಡಿದೆ.

ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಲಭ್ಯವಿರುವ ಬದ್ಧವಲ್ಲದ ರಾಜಸ್ವ ವೆಚ್ಚವು 2014–15ರಲ್ಲಿದ್ದ ₹15,895 ಕೋಟಿಗಳಿಂದ 2018–19ರಲ್ಲಿ ₹25,459 ಕೋಟಿಗಳಷ್ಟಿದ್ದು ಶೇಕಡಾ 60ರಷ್ಟು ಹೆಚ್ಚಳವನ್ನು ಕಂಡಿದೆ. ಒಟ್ಟು ರಾಜಸ್ವ ವೆಚ್ಚವು 2014–15ರಲ್ಲಿದ್ದ ₹103,614 ಕೋಟಿಗಳಿಂದ 2018–19ರಲ್ಲಿ ₹164,300 ಕೋಟಿಗಳಿಗೆ ಏರಿ ಶೇಕಡಾ 59ರಷ್ಟು ಹೆಚ್ಚಾಗಿ ಬದ್ಧ ರಾಜಸ್ವ ವೆಚ್ಚವು ಈ ಅವಧಿಯಲ್ಲಿ ಶೇಕಡಾ 58ರಷ್ಟು ಹೆಚ್ಚಾಗಿದೆ.

### *3.2.1 ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ*

ವಿಭಾಗವಾರುರಾಜಸ್ವ ವೆಚ್ಚದ ಹಂಚಿಕೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ

(₹ ಕೋಟಿಗಳಲ್ಲಿ)


| ರಾಜಸ್ವ ವೆಚ್ಚದ ಭಾಗಗಳು | | ಮೊತ್ತ | ಶೇಕಡಾವಾರು |
|---|---|---|---|
| A. | ಸಾಮಾನ್ಯ ಸೇವೆಗಳು | 42,655 | 25.96 |
| B. | ಸಾಮಾಜಿಕ ಸೇವೆಗಳು | 67,935 | 41.35 |
| C. | ಆರ್ಥಿಕ ಸೇವೆಗಳು | 48,285 | 29.39 |
| D. | ಸಹಾಯಾನುದಾನ ಮತ್ತು ವಂತಿಗೆಗಳು | 5,425 | 3.30 |
| | ಒಟ್ಟು ವೆಚ್ಚ (ರಾಜಸ್ವ ಲೆಕ್ಕ) | 164,300 | 100.00 |
| (*) | ಒಟ್ಟು ರಾಜಸ್ವ ವೆಚ್ಚಕ್ಕೆ ಸಂಬಂಧಿಸಿದ ವಿಭಾಗವಾರು ಶತಾಂಶ. | | |

## 3.2.2 ವಿಭಾಗವಾರು ರಾಜಸ್ವ ವೆಚ್ಚದ ಸಂಯೋಜನೆಯ ಪ್ರವೃತ್ತಿ

(₹ ಕೋಟಿಗಳಲ್ಲಿ)

| ವರ್ಷ | ಸಾಮಾನ್ಯ ಸೇವೆಗಳು | ಸಾಮಾಜಿಕ ಸೇವೆಗಳು | ಆರ್ಥಿಕ ಸೇವೆಗಳು | ಸಹಾಯಾನು-ದಾನದ ಮತ್ತು ವಂತಿಗೆಗಳು | ಒಟ್ಟು ರಾಜಸ್ವ ವೆಚ್ಚಗಳು | ರಾ.ಒ.ಆಂ.ಉ*. | ರಾ.ಒ.ಆಂ.ಉ*. ಕ್ಕೆ ಒಟ್ಟು ರಾಜಸ್ವ ವೆಚ್ಚದ ಶತಾಂಶ |
|---|---|---|---|---|---|---|---|
| 2014-15 | 28,266 | 39,366 | 29,971 | 6,011 | 103,614 | 913,923 | 11.34 |
| 2015-16 | 30,800 | 46,307 | 33,846 | 6,076 | 117,029 | 1,045,182 | 11.20 |
| 2016-17 | 31,265 | 54,549 | 40,421 | 5,686 | 131,921 | 1,155,912 | 11.41 |
| 2017-18 | 34,484 | 58,652 | 42,856 | 6,490 | 142,482 | 1,325,443 | 10.75 |
| 2018-19 | 42,655 | 67,935 | 48,285 | 5,425 | 164,300 | 1,408,112 | 11.67 |

* ಆಕರ : ಮಧ್ಯಂತರ ವಿತ್ತೀಯ ಯೋಜನೆ 2019-23.




*(*) ಸಾಮಾನ್ಯ ಸೇವೆಗಳಲ್ಲಿ ಪ್ರಧಾನ ಶೀರ್ಷಿಕೆ 2049 ಬಡ್ಡಿ ಪಾವತಿಯೂ ಸೇರಿದೆ*

### *3.2.3 ಪ್ರಮುಖ ಉಪವಿಭಾಗಗಳ ವೆಚ್ಚಗಳು*

ಕಳೆದ ಐದು ವರ್ಷಗಳಲ್ಲಿ ಪ್ರಮುಖ ಉಪವಿಭಾಗಗಳ ವೆಚ್ಚದ ಪ್ರವೃತ್ತಿಯನ್ನು ಕೆಳಗೆ ನೀಡಲಾಗಿದೆ

(₹ ಕೋಟಿಗಳಲ್ಲಿ)

| ವೆಚ್ಚದ ವಿಭಾಗಗಳು | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 18,063 | 18,724 | 20,084 | 21,307 | 23,424 |
| ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳು | 10,563 | 11,149 | 11,976 | 14,521 | 20,305 |
| ನಿವೃತ್ತಿ ವೇತನ ಮತ್ತು ಇತರ ಸಾಮಾನ್ಯ ಸೇವೆಗಳು | 10,144 | 11,366 | 11,394 | 11,817 | 15,227 |
| ಬಡ್ಡಿ ಪಾವತಿ ಮತ್ತು ಋಣ ಸೇವೆಗಳು | 9,804 | 12,413 | 12,850 | 13,930 | 16,123 |
| ಇಂಧನ | 6,746 | 9,170 | 9,237 | 9,403 | 10,061 |
| ಸಾಮಾಜಿಕ ಕಲ್ಯಾಣ ಮತ್ತು ಪೌಷ್ಠಿಕತೆ | 6,597 | 8,793 | 10,209 | 8,789 | 18,186 |
| ಆಡಳಿತ ಸೇವೆಗಳು | 5,506 | 5,711 | 5,816 | 6,417 | 7,574 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 5,058 | 5,010 | 6,139 | 6,985 | 8,369 |
| ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ, ಇತರ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ | 5,038 | 5,562 | 6,780 | 8,546 | 8,488 |
| ಗ್ರಾಮೀಣ ಅಭಿವೃದ್ಧಿ | 4,988 | 5,222 | 5,547 | 5,209 | 7,001 |
| ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 3,944 | 7,374 | 10,489 | 11,712 | 8,611 |
| ಸಾರಿಗೆ | 3,232 | 3,552 | 4,844 | 4,970 | 3,695 |
| ಸಾಮಾನ್ಯ ಆರ್ಥಿಕ ಸೇವೆಗಳು | 2,258 | 1,630 | 5,379 | 5,051 | 3,286 |

## 3.3 ಬಂಡವಾಳ ವೆಚ್ಚ

2018–19ರಲ್ಲಿ ಸರ್ಕಾರವು ₹39,146 ಕೋಟಿ ಬಂಡವಾಳವೆಚ್ಚದಲ್ಲಿ ಸಾಲ ಮತ್ತು ಮುಂಗಡಗಳ ವಿತರಣೆ (₹4,487 ಕೋಟಿ) ಸೇರಿದ್ದು ರಾ.ಒ.ಆಂ.ಉ.ದ ಶೇಕಡ 2.78 ರಷ್ಟಿದೆ. ಬಂಡವಾಳ ವೆಚ್ಚಗಳುಆಯವ್ಯಯ ಅಂದಾಜಿಗಿಂತ (₹35,246 ಕೋಟಿ) ₹3,901 ಕೋಟಿಗಳಷ್ಟು ಹೆಚ್ಚಾಗಿದೆ.

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|
| 1. | ಆಯವ್ಯಯ ಅಂದಾಜು | 20,014 | 20,564 | 25,716 | 32,033 | 35,246 |
| 2. | ವಾಸ್ತವ ವೆಚ್ಚ (#) | 19,622 | 20,713 | 28,151 | 30,667 | 34,659 |
| 3. | ಆಯವ್ಯಯದಲ್ಲಿ ವಾಸ್ತವ ವೆಚ್ಚದ ಶತಾಂಶ | 98% | 101% | 109% | 96% | 98% |
| 4. | ಬಂಡವಾಳ ವೆಚ್ಚದಲ್ಲಿನ ವಾರ್ಷಿಕ ವೃದ್ಧಿ | 16% | 6% | 36% | 9% | 13% |
| 5. | ರಾ.ಒ.ಆಂ.ಉ | 913,923 | 1,045,182 | 1,155,912 | 1,325,443 | 1,408,112 |
| 6. | ರಾ.ಒ.ಆಂ.ಉ.ದ ವಾರ್ಷಿಕ ವೃದ್ಧಿ | 12% | 14% | 11% | 15% | 6% |

# ಸಾಲಗಳು ಮತ್ತು ಮುಂಗಡಗಳ ಮೇಲಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

### *3.3.1 ಬಂಡವಾಳ ವೆಚ್ಚದ ವಿಭಾಗವಾರು ವಿತರಣೆ*

2018–19 ರಲ್ಲಿ ಸರ್ಕಾರವು ಕೆಳಗಿನ ವಿಭಾಗಗಳಲ್ಲಿ ವಿವಿಧ ಯೋಜನೆಗಳ ಮೇಲೆ ₹39,146 ಕೋಟಿಗಳನ್ನು ವೆಚ್ಚಮಾಡಿದೆ. ಒಟ್ಟು ಬಂಡವಾಳ ವೆಚ್ಚದಲ್ಲಿ ವಿಭಾಗವಾರು ವೆಚ್ಚದ ಶತಾಂಶವನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)


| ಕ್ರ.ಸಂ | ವಿಭಾಗ | ಬಂಡವಾಳ ವೆಚ್ಚ | ಸಾಲ ವಿತರಣೆ | ಒಟ್ಟುಮೊತ್ತ | ಶತಾಂಶ |
|---|---|---|---|---|---|
| 1. | **ಸಾಮಾನ್ಯ ಸೇವೆಗಳು:** ಪೋಲಿಸ್, ಭೂಕಂದಾಯ ಇತ್ಯಾದಿ. | 827 | … | 827 | 2.11 |
| 2. | **ಸಾಮಾಜಿಕ ಸೇವೆಗಳು:** ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ನೀರು ಸರಬರಾಜು, ಪ.ಜಾ/ಪ.ವ ಕಲ್ಯಾಣ ಇತ್ಯಾದಿ. | 9,794 | 2,441 | 12,235 | 31.25 |
| 3. | **ಆರ್ಥಿಕ ಸೇವೆಗಳು:** ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಸಹಕಾರ, ಇಂಧನ, ಕೈಗಾರಿಕೆ, ಸಾರಿಗೆ ಇತ್ಯಾದಿ. | 24,038 | 2,035 | 26,073 | 66.61 |
| 4. | ಇತರೆ | … | 11 | 11 | 0.03 |
| | **ಒಟ್ಟು ಬಂಡವಾಳ ವೆಚ್ಚ (ರಾಜಸ್ವ ಲೆಕ್ಕದ ಹೊರಗೆ)** | **34,659** | **4,487** | **39,146** | **100.00** |

### *3.3.2 ಬಂಡವಾಳ ವೆಚ್ಚದ ಪ್ರವೃತ್ತಿ*

ಕಳೆದ ಐದು ವರ್ಷಗಳಲ್ಲಿ ಬಂಡವಾಳ ಲೆಕ್ಕದಲ್ಲಿ ಆದ ವೆಚ್ಚದ ಪ್ರವೃತ್ತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನಕ್ಷೆಯೊಂದಿಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಕ್ರ.ಸಂ | ವಿಭಾಗ | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|
| 1. | **ಸಾಮಾನ್ಯ ಸೇವೆಗಳು** | 618 | 991 | 1,061 | 977 | 827 |
| 2. | **ಸಾಮಾಜಿಕ ಸೇವೆಗಳು** | 4,181 | 5,314 | 6,897 | 8,677 | 9,794 |
| 3. | **ಆರ್ಥಿಕ ಸೇವೆಗಳು** | 14,823 | 14,408 | 20,193 | 21,013 | 24,038 |
| 4. | **ಸಾಲ ಮತ್ತು ಮುಂಗಡಗಳು** | 576 | 656 | 1,934 | 5,093 | 4,487 |
| | **ಒಟ್ಟು** | **20,198** | **21,369** | **30,085** | **35,760** | **39,146** |



### 3.3.3 ಬಂಡವಾಳ ಮತ್ತು ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ


ಕಳೆದ ಐದು ವರ್ಷಗಳಲ್ಲಿ ಬಂಡವಾಳ ಮತ್ತು ರಾಜಸ್ವ ವೆಚ್ಚದ ವಿಭಾಗವಾರು ತುಲನಾತ್ಮಕ ಹಂಚಿಕೆಯನ್ನು ಈ ಕೆಳಗೆ ನೀಡಲಾಗಿದೆ:

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವಿಭಾಗ | | 2014-15 | 2015-16 | 2016-17 | 2017-18 | 2018-19 |
|---|---|---|---|---|---|---|---|
| 1. | ಸಾಮಾನ್ಯ ಸೇವೆಗಳು | ಬಂಡವಾಳ | 618 | 991 | 1,061 | 977 | 827 |
| | | ರಾಜಸ್ವ | 28,266 | 30,800 | 31,265 | 34,484 | 42,655 |
| 2. | ಸಾಮಾಜಿಕ ಸೇವೆಗಳು | ಬಂಡವಾಳ | 4,181 | 5,314 | 6,897 | 8,677 | 9,794 |
| | | ರಾಜಸ್ವ | 39,366 | 46,307 | 54,549 | 58,652 | 67,935 |
| 3. | ಆರ್ಥಿಕ ಸೇವೆಗಳು | ಬಂಡವಾಳ | 14,823 | 14,408 | 20,193 | 21,013 | 24,038 |
| | | ರಾಜಸ್ವ | 29,971 | 33,846 | 40,421 | 42,856 | 48,285 |

## 3.4 ಬದ್ಧ ವೆಚ್ಚಗಳು

ಕೆಳಗಿನ ಕೋಷ್ಟಕದಲ್ಲಿ ಸೂಚಿಸಿರುವ ಬದ್ಧ ವೆಚ್ಚದ ಏಳು ಭಾಗಗಳ ಜೊತೆಗೆ ಕರ್ನಾಟಕ ಸರ್ಕಾರವು ತನ್ನ ಮಧ್ಯಂತರ ವಿತ್ತೀಯ ಯೋಜನೆ 2019–23ರಲ್ಲಿ ಜಿಲ್ಲಾ ವಿಭಾಗದ ಯೋಜನೆಗಳ ಸಂಬಳ, ಇಂಗಿತ ಸಬ್ಸಿಡಿ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳನ್ನು ಬದ್ಧವೆಚ್ಚದ ಭಾಗವಾಗಿ ಪರಿಗಣಿಸಿದೆ. ಲೆಕ್ಕಗಳಲ್ಲಿ ನಿರ್ದಿಷ್ಟ ಉದ್ದೇಶ ಶೀರ್ಷಿಕೆಯ ಸಂಕೇತದೊಡನೆ ಗುರುತಿಸಲ್ಪಟ್ಟ ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚಗಳ ಮೇಲಿನ ಬದ್ಧ ವೆಚ್ಚಗಳ ಭಾಗಗಳಲ್ಲಿನ ವೃದ್ಧಿಯಲ್ಲಿನ ಐದು ವರ್ಷಗಳಲ್ಲಿನ ಪ್ರವೃತ್ತಿಯನ್ನು ಕೆಳಗೆ ನೀಡಲಾಗಿದೆ.



ಕಳೆದ ಐದು ವರ್ಷಗಳಲ್ಲಿ ರಾಜಸ್ವ ವೆಚ್ಚ ಮತ್ತು ರಾಜಸ್ವ ಸ್ವೀಕೃತಿಗಳೊಂದಿಗೆ ಬದ್ಧ ವೆಚ್ಚದ ಪ್ರವೃತ್ತಿಯನ್ನು ತುಲನಾತ್ಮಕವಾಗಿ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| | ಭಾಗಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|---|
| | ಒಟ್ಟು ಬದ್ಧ ವೆಚ್ಚ – ಇದರಲ್ಲಿ | 87,719 | 96,638 | 105,052 | 110,483 | 138,341 |
| 1) | ಸಂಬಳ [ಎ] | 19,952 | 20,774 | 21,708 | 22,958 | 28,024 |
| 2) | ಬಡ್ಡಿ ಪಾವತಿ | 9,804[ಬಿ] | 11,343[ಇ] | 12,850[ಎಫ್] | 14,973[ಜಿ] | 16,614[H] |
| 3) | ವಿಶ್ರಾಂತಿ ವೇತನ ಪಾವತಿ | 10,118 | 11,251 | 11,295 | 11,684 | 15,109 |
| 4) | ಸಾಮಾಜಿಕ ಭದ್ರತಾ ಪಿಂಚಣಿ | 2,322 | 2,247 | 2,503 | 4,055 | 5,460 |
| 5) | ಸಬ್ಸಿಡಿಗಳು[ಸಿ] | 11,153 | 13,149 | 14,387 | 14,148 | 15,400 |
| 6) | ಹಣಕಾಸಿನ ನೆರವಿನ ರೂಪದಲ್ಲಿ ಸಬ್ಸಿಡಿಗಳು | 2,973 | 3,913 | 3,714 | 3,318 | 3,777 |
| 7) | ಸಹಾಯಾನುದಾನುಗಳು [ಡಿ] | 9,737 | 10,840 | 13,163 | 11,812 | 24,888 |
| 8) | ಆಡಳಿತಾತ್ಮಕ ವೆಚ್ಚಗಳು | 1,708 | 1,958 | 1,966 | 2,404 | 2,136 |
| 9) | ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ಸ್ಥಳೀಯ ನಗರ ಸಂಸ್ಥೆಗಳಿಗೆ ಹಂಚಿಕೆ | 19,952 | 21,163 | 23,466 | 25,131 | 26,720 |
| 10) | ದಿನಗೂಲಿ | | | | 110 | 138 |
| 11) | ಗುತ್ತಿಗೆ/ಹೊರಗುತ್ತಿಗೆ | | | | 457 | 576 |
| | ರಾಜಸ್ವ ಸ್ವೀಕೃತಿಗಳು | 104,142 | 118,817 | 133,214 | 147,000 | 164,979 |
| | ರಾಜಸ್ವ ವೆಚ್ಚ | 103,614 | 117,028 | 131,921 | 142,482 | 164,300 |
| | ರಾಜಸ್ವ ಸ್ವೀಕೃತಿಗಳಿಗೆ ಬದ್ಧ ವೆಚ್ಚದ ಶೇಕಡಾವಾರು | 84 | 81 | 79 | 75 | 84 |
| | ರಾಜಸ್ವ ವೆಚ್ಚಕ್ಕೆ ಬದ್ಧ ವೆಚ್ಚದ ಶೇಕಡಾವಾರು | 85 | 83 | 80 | 78 | 85 |

(ಎ) ಇದು ರಾಜ್ಯ ವಿಭಾಗದಲ್ಲಿ ಲೆಕ್ಕ ಮಾಡಲಾದ ಸಂಬಳ ವೆಚ್ಚವಾಗಿದ್ದು, ಇದರಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಸಿಬ್ಬಂದಿಯ ಸಂಬಳ ವೆಚ್ಚ ಸೇರಿರುವುದಿಲ್ಲ

(ಬಿ) ಇದು ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳ ಅಡಿಯ ಸಂಬಂಧಿಸಿದ ಉಪವಿಭಾಗಗಳಡಿಯ ಕಾರ್ಯ ಪ್ರಧಾನ ಶೀರ್ಷಿಕೆಗಳಲ್ಲಿ ಹರಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು (₹399.53 ಕೋಟಿ) ಒಳಗೊಂಡಿದೆ.

(ಸಿ) ಉದ್ದೇಶ ಶೀರ್ಷಿಕೆ 106–ಸಬ್ಸಿಡಿ ಅಡಿಯಲ್ಲಿ ಲೆಕ್ಕ ಮಾಡಿರುವ ಮೊತ್ತವನ್ನು ಮಾತ್ರ ಸೂಚಿಸುತ್ತದೆ. ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ಸಬ್ಸಿಡಿಯನ್ನು ಒಳಗೊಂಡಿಲ್ಲ.

(ಡಿ) ಇದರಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಹಂಚಿಕೆಯನ್ನು ಒಳಗೊಂಡಿಲ್ಲ. ಅದು ಪ್ರತ್ಯೇಕವಾಗಿ ಕೆಳಗೆ ಒಂದು ಸಾಲಿನ ಬಾಬತ್ತಾಗಿ ತೋರಿಸಿದೆ.

(ಇ) ಇದು ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳ ಅಡಿಯ ಸಂಬಂಧಿಸಿದ ಉಪವಿಭಾಗಗಳಡಿಯ ಕಾರ್ಯ ಪ್ರಧಾನ ಶೀರ್ಷಿಕೆಗಳಲ್ಲಿ ಹರಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು (₹597 ಕೋಟಿ) ಒಳಗೊಂಡಿದೆ.

(ಎಫ್) ಇದು ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳ ಅಡಿಯ ಸಂಬಂಧಿಸಿದ ಉಪವಿಭಾಗಗಳಡಿಯ ಕಾರ್ಯ ಪ್ರಧಾನ ಶೀರ್ಷಿಕೆಗಳಲ್ಲಿ ಹರಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು (₹817 ಕೋಟಿ) ಒಳಗೊಂಡಿದೆ.

(ಜಿ) ಇದು ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳ ಅಡಿಯ ಸಂಬಂಧಿಸಿದ ಉಪವಿಭಾಗಗಳಡಿಯ ಕಾರ್ಯ ಪ್ರಧಾನ ಶೀರ್ಷಿಕೆಗಳಲ್ಲಿ ಹರಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು (₹1,043 ಕೋಟಿ) ಒಳಗೊಂಡಿದೆ.

(H) ಇದು ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳ ಅಡಿಯ ಸಂಬಂಧಿಸಿದ ಉಪವಿಭಾಗಗಳಡಿಯ ಕಾರ್ಯ ಪ್ರಧಾನ ಶೀರ್ಷಿಕೆಗಳಲ್ಲಿ ಹರಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು (₹1,262 ಕೋಟಿ) ಒಳಗೊಂಡಿದೆ.

~~~
~~~

# ಅಧ್ಯಾಯ – IV

## ಧನವಿನಿಯೋಗ ಲೆಕ್ಕಗಳು

### 4.1 ಧನ ವಿನಿಯೋಗ ಲೆಕ್ಕಗಳ ಸಾರಾಂಶ

ಕರ್ನಾಟಕ ಸರ್ಕಾರದ 2018–19 ರ ಧನವಿನಿಯೋಗ ಲೆಕ್ಕಗಳು ಭಾರತ ಸಂವಿಧಾನ ಅನುಚ್ಛೇದ 204 ಮತ್ತು 205 ರ ಅನ್ವಯ ಅನುಮೋದಿಸಿದ ಧನವಿನಿಯೋಗ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿಯಲ್ಲಿ ವಿವರಿಸಿದ ಅವಕಾಶಗಳಿಗೆ ಪ್ರತಿಯಾಗಿ ಮಾಡಿದ ವೆಚ್ಚದ ಲೆಕ್ಕಗಳನ್ನು ತೋರಿಸುತ್ತದೆ. 2018–19ರ ರಾಜ್ಯ ಸಂಚಿತ ನಿಧಿಯ ಪ್ರಮುಖ ವಿಭಾಗಗಳ ಧನವಿನಿಯೋಗ ಲೆಕ್ಕಗಳ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಕ್ರ.ಸಂ | ವೆಚ್ಚದ ಸ್ವರೂಪ | ಮೂಲ ಅನುದಾನ | ಪೂರಕ ಅನುದಾನ | ಪುನರ್ ವಿನಿಯೋಗ/ ಅಧ್ಯರ್ಪಣೆ | | ಒಟ್ಟು | ವಾಸ್ತವ ವೆಚ್ಚ | ಉಳಿತಾಯ (–) ಹೆಚ್ಚಳ (+) | |
|---|---|---|---|---|---|---|---|---|---|
| 1 | ರಾಜಸ್ವ ಪುರಸ್ಕೃತ | 149,169 | 14,703 | (-) | 8,037 | 155,835 | 148,976 | (-) | 6,859 |
| | ಪ್ರಭೃತ | *19,786* | *141* | *(-)* | *472* | *19,455* | *18,257* | *(-)* | *1,198* |
| 2 | ಬಂಡವಾಳ ಪುರಸ್ಕೃತ | 35,443 | 3,978 | (-) | 1,780 | 37,641 | 35,054 | (-) | 2,587 |
| | ಪ್ರಭೃತ | *1,437* | ... | | ... | *1,437* | *1,341* | *(-)* | *96* |
| *3* | ಸಾರ್ವಜನಿಕ ಋಣ ಪ್ರಭೃತ | *11,136* | *67* | *(-)* | *120* | *11,083* | *11,095* | *(+)* | *12* |
| 4 | ಸಾಲಗಳು ಮತ್ತು ಮುಂಗಡಗಳು ಪುರಸ್ಕೃತ | 7,140 | 2,673 | (+) | 38 | 9,851 | 5,811 | (-) | 4,040 |
| | **ಒಟ್ಟು** | **224,111** | **21,562** | **(-)** | **10,371** | **235,302** | **220,534** | **(-)** | **14,768** |

#### 4.1.1 ಉಳಿತಾಯ/ಹೆಚ್ಚಳಗಳ ಅನುದಾನವಾರು ವಿವರಗಳು

ಕರ್ನಾಟಕ ಸರ್ಕಾರದ 2018–19 ರ ಧನ ವಿನಿಯೋಗ ಲೆಕ್ಕಗಳ–ಅನುದಾನವಾರು ಉಳಿತಾಯ/ಹೆಚ್ಚಳಗಳ ವಿವರಗಳು ಕೆಳಕಂಡಂತಿದೆ.

(₹ ಕೋಟಿಗಳಲ್ಲಿ)

| ಕೆಳಗಿನ ಅನುದಾನಗಳಲ್ಲಿ ಉಳಿತಾಯಗಳು | | ರಾಜಸ್ವ | | ಬಂಡವಾಳ | |
|---|---|---|---|---|---|
| ಅನುದಾನ ಸಂಖ್ಯೆ ಮತ್ತು ಹೆಸರು | | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| 01 | ಕೃಷಿ ಮತ್ತು ತೋಟಗಾರಿಕೆ | 1,340.72 | | 329.50 | ... |
| 02 | ಪಶುಸಂಗೋಪನೆ ಮತ್ತು ಮೀನುಗಾರಿಕೆ | 109.55 | | 0.01 | ... |
| 03 | ಆರ್ಥಿಕ | 4,834.71 | *10.70* | 34.52 | ... |
| 04 | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 165.94 | *22.67* | 4.98 | ... |
| 05 | ಗೃಹ ಮತ್ತು ಸಾರಿಗೆ | 401.87 | *0.03* | 108.46 | ... |
| 06 | ಮೂಲ ಸೌಕರ್ಯ ಅಭಿವೃದ್ಧಿ | 0.28 | ... | 37.74 | ... |
| 07 | ಗಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ | 1,186.41 | ... | 278.19 | ... |
| 08 | ಅರಣ್ಯ, ಜೀವವಿಜ್ಞಾನ ಮತ್ತು ಪರಿಸರ | 115.48 | *358.62* | 0.14 | ... |
| 09 | ಸಹಕಾರ | 344.14 | ... | 4,000.00 | ... |
| 10 | ಸಮಾಜ ಕಲ್ಯಾಣ | 254.83 | ... | 83.84 | ... |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 815.43 | ... | 71.55 | ... |
| 12 | ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | 98.11 | ... | 242.22 | ... |
| 13 | ಆಹಾರ ಮತ್ತು ನಾಗರೀಕ ಸರಬರಾಜು | 196.32 | *0.01* | *1.16* | ... |

| ಕೆಳಗಿನ ಅನುದಾನಗಳಲ್ಲಿ ಉಳಿತಾಯಗಳು | | ರಾಜಸ್ವ | | ಬಂಡವಾಳ | |
|---|---|---|---|---|---|
| ಅನುದಾನ ಸಂಖ್ಯೆ ಮತ್ತು ಹೆಸರು | | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| 14 | ಕಂದಾಯ | 270.81 | | *13.11* | 9.29 |
| 15 | ಮಾಹಿತಿ ತಂತ್ರಜ್ಞಾನ | 0.46 | ... | ... | ... |
| 16 | ವಸತಿ | 915.89 | ... | ... | *0.01* |
| 17 | ಶಿಕ್ಷಣ | 2,309.78 | ... | 121.89 | ... |
| 18 | ವಾಣಿಜ್ಯ ಮತ್ತು ಕೈಗಾರಿಕೆಗಳು | 132.13 | ... | 576.29 | ... |
| 19 | ನಗರಾಭಿವೃದ್ಧಿ | 353.15 | *620.38* | 328.40 | ... |
| 20 | ಲೋಕೋಪಯೋಗಿ | 102.50 | *17.88* | 1,147.20 | ... |
| 21 | ಜಲ ಸಂಪನ್ಮೂಲ | 125.31 | *138.52* | 547.46 | *86.57* |
| 22 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 427.44 | ... | 248.49 | ... |
| 23 | ಕಾರ್ಮಿಕ ಮತ್ತು ಕೌಶಲ್ಯಾಭಿವೃದ್ಧಿ | 204.81 | ... | 30.09 | ... |
| 24 | ಇಂಧನ | 4.95 | ... | 12.95 | ... |
| 25 | ಕನ್ನಡ ಮತ್ತು ಸಂಸ್ಕೃತಿ | 82.02 | ... | 12.27 | ... |
| 26 | ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 9.14 | ... | 138.05 | ... |
| 27 | ಕಾನೂನು | 59.28 | *63.44* | 1.00 | ... |
| 28 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ | 34.33 | *1.25* | ... | ... |
| *29* | *ಋಣ ನಿರ್ವಹಣೆ* | | *435.97* | ... | *108.35* |
| | | **14,895.79** | ***1,669.47*** | **8,369.51** | ***204.22*** |

## 4.2 ಉಳಿತಾಯ ಪ್ರವೃತ್ತಿ

ಧನವಿನಿಯೋಗ ಲೆಕ್ಕಗಳಲ್ಲಿ ಉಳಿತಾಯವು ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಧನವಿನಿಯೋಗ ಅಧಿನಿಯಮದಲ್ಲಿ ನೀಡಿದ ಅನೇಕ ಉದ್ದೇಶಿತ ವೆಚ್ಚಗಳ ಅವಕಾಶಗಳನ್ನು ಬಳಸದಿರುವುದನ್ನು ತೋರಿಸುತ್ತದೆ. ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಅವಕಾಶಗಳನ್ನು ಉಲ್ಲೇಖಿಸಿ ಅಧ್ಯರ್ಪಣೆ ಮಾಡಿದ ಮೊತ್ತವನ್ನು (ಉಳಿತಾಯವೆಂದು ಪರಿಗಣಿಸಿ), ಉಳಿತಾಯಗಳನ್ನು ಲೆಕ್ಕ ಮಾಡಲಾಗುವುದು.


ಕಳೆದ ಐದು ವರ್ಷಗಳಪುರಸ್ಕೃತ ಮತ್ತು ಪ್ರಭೃತ ಹಾಗು ರಾಜಸ್ವ ಮತ್ತು ಬಂಡವಾಳ ವಿಭಾಗಗಳಲ್ಲಾದ ಉಳಿತಾಯ ಪ್ರವೃತ್ತಿಗಳನ್ನು ಕ್ರಮವಾಗಿ ಕೋಷ್ಟಕ 4.2.1 ಮತ್ತು ಕೋಷ್ಟಕ 4.2.2 ಗಳಲ್ಲಿ ಈ ಕೆಳಗೆ ನೀಡಲಾಗಿದೆ.

### ಸತತ ಉಳಿತಾಯಗಳು (ಪುರಸ್ಕೃತ ವಿಭಾಗ)

(ಕೋಷ್ಟಕ**4.2.1**)

**(₹ ಕೋಟಿಗಳಲ್ಲಿ)**

| ವರ್ಷ | ರಾಜಸ್ವ ವಿಭಾಗ | | | | ಬಂಡವಾಳ ವಿಭಾಗ | | | |
|---|---|---|---|---|---|---|---|---|
| | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ |
| 2014-15 | 109,864 | 94,250 | 15,614 | 14.21 | 25,531 | 21,408 | 4,123 | 16.14 |
| 2015-16 | 114,291 | 107,199 | 7,092 | 6.21 | 28,281 | 24,509 | 3,772 | 13.34 |
| 2016-17 | 129,147 | 122,027 | 7,120 | 5.51 | 34,451 | 29,821 | 4,630 | 13.44 |
| 2017-18 | 141,869 | 129,684 | 12,185 | 8.59 | 42,523 | 38,161 | 4,362 | 10.26 |
| 2018-19 | 163,872 | 148,976 | 14,896 | 9.09 | 49,234 | 40,865 | 8,369 | 17.00 |





**ಸತತ ಉಳಿತಾಯಗಳು (ಪ್ರಭೃತ ವಿಭಾಗ)**

**(ಕೋಷ್ಟಕ4.2.2)**

**(₹ ಕೋಟಿಗಳಲ್ಲಿ)**

| ವರ್ಷ | ರಾಜಸ್ವ ವಿಭಾಗ | | | | ಬಂಡವಾಳ ವಿಬಖ್ಘಣ್ಪ | | | |
|---|---|---|---|---|---|---|---|---|
| | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ |
| 2014-15 | 11,502 | 10,618 | 884 | 7.69 | 7,040 | 5,090 | 1,950 | 27.70 |
| 2015-16 | 17,898 | 13,031 | 4,867 | 27.19 | 6,202 | 4,511 | 1,691 | 27.27 |
| 2016-17 | 14,724 | 13,327 | 1,397 | 9.49 | ... | ... | ... | ... |
| 2017-18 | 16,328 | 15,632 | 696 | 4.26 | ... | ... | ... | ... |
| 2018-19 | 19,927 | 18,257 | 1,670 | 8.38 | 12,640 | 12,436 | 204 | 1.61 |




## 4.3 ಗಣನೀಯ ಉಳಿತಾಯಗಳು

ಅನುದಾನದಡಿಯ ಗಣನಾರ್ಹ ಉಳಿತಾಯಗಳು ಕೆಲವು ಯೋಜನೆಗಳ/ಕಾರ್ಯಕ್ರಮಗಳ ಅನುಷ್ಠಾನವಾಗದಿರುವಿಕೆ ಅಥವಾ ನಿಧಾನಗತಿಯ ಅನುಷ್ಠಾನವನ್ನು ಅಥವಾ ಆಯವ್ಯಯದಲ್ಲಿ ಅಧಿಕವಾದ ಹಂಚಿಕೆಯನ್ನು ಸೂಚಿಸುತ್ತದೆ. ಕಳೆದ ಐದು ವರ್ಷಗಳಲ್ಲಿ ರಾಜಸ್ವ ಮತ್ತು ಬಂಡವಾಳ ವಿಭಾಗಗಳಲ್ಲಿ ಸತತವಾಗಿ ಮತ್ತು ಗಣನೀಯವಾಗಿ ನಿವ್ವಳ ಅವಕಾಶದ ಶೇಕಡ 10ಕ್ಕಿಂತಲೂ ಹೆಚ್ಚು ಉಳಿತಾಯ ಕಂಡು ಬಂದ ಕೆಲವು ಅನುದಾನಗಳನ್ನು ಕೆಳಗೆ ನೀಡಲಾಗಿದೆ.

**(ಶತಾಂಶದಲ್ಲಿ)**

| ಅನುದಾನ ಸಂಖ್ಯೆ | ರಾಜಸ್ವ ವಿಭಾಗ | 2013-14 | 2014-15 | 2015-16 | 2016-17 | 2017-18 |
|---|---|---|---|---|---|---|
| 23 | ಕಾರ್ಮಿಕ | 33 | 13 | 12 | 36 | 16 |
| 28 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ | 14 | 16 | 14 | 25 | 17 |
| | ಬಂಡವಾಳ ವಿಭಾಗ | | | | | |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 41 | 13 | 26 | 11 | 44 |
| 12 | ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | 21 | 21 | 24 | 35 | 42 |

### 4.4 ಪೂರಕ ಅಂದಾಜುಗಳು

2018–19 ರಲ್ಲಿ ಭಾರತ ಸಂವಿಧಾನದ ಅನುಚ್ಛೇದ 205 ರ ಪ್ರಕಾರ ₹21,562 ಕೋಟಿಗಳಷ್ಟು ಹೆಚ್ಚುವರಿ ಅನುದಾನವನ್ನು ಪೂರಕ ಅಂದಾಜುಗಳ ಮುಖಾಂತರ ಪಡೆಯಲಾಗಿದೆ. ಅನಗತ್ಯ ಪೂರಕ ಅಂದಾಜಿನ ಅಥವಾಕೊರತೆಯಕೆಲವು ಪ್ರಕರಣಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಅನಗತ್ಯ ಪೂರಕ ಅಂದಾಜುಗಳು**

(₹ಕೋಟಿಗಳಲ್ಲಿ)

| ಅನು. ಸಂಖ್ಯೆ | ಲೆಕ್ಕ ಶೀರ್ಷಿಕೆ | ಮೂಲ ಅಂದಾಜು | ಪೂರಕ ಅಂದಾಜು | ವಾಸ್ತವ ವೆಚ್ಚ | ಉಳಿತಾಯ |
|---|---|---|---|---|---|
| 1 | 2401-00-800-1 | 1,451.05 | 129.93 | 497.09 | 1,083.89 |
| 1 | 2402-00-102-30 | 327.50 | 0.20 | 261.42 | 66.28 |
| 3 | 2070-00-800-13 | 49.94 | 100.00 | 0 | 149.94 |
| 4 | 2052-00-090-28 | 43.18 | 73.25 | 0 | 116.43 |
| 5 | 2235-60-200-1 | 15.62 | 0.23 | 4.69 | 11.16 |
| 5 | 2055-00-001-08 | 401.39 | 710.00 | 0 | 1,111.39 |
| 8 | 2406-01-800-17 | 34.47 | 16.20 | 0 | 50.67 |
| 8 | 2406-01-101-2 | 233.48 | 19.48 | 223.24 | 29.72 |
| 9 | 2425-00-800-05 | 14.86 | 8.90 | 0 | 23.76 |
| 13 | 2408-01-800-13 | 6.90 | 6.00 | 0 | 12.90 |
| 14 | 2053-00-093-02 | 83.76 | 75.00 | 0.02 | 158.74 |
| 21 | 2705-00-204-01 | 30.65 | 1.13 | 21.02 | 10.76 |
| 21 | 4702-00-101-1 | 235.16 | 53.23 | 228.32 | 60.07 |
| 22 | 4210-00-101-1 | 606.66 | 42.72 | 421.09 | 228.29 |
| 23 | 2230-02-101-09 | 55.00 | 20.00 | 30.47 | 44.53 |
| 23 | 2230-01-800-08 | 15.03 | 30.00 | 0 | 45.03 |
| 25 | 2205-00-102-4 | 130.94 | 6.65 | 94.40 | 43.19 |
| 27 | 2014-00-102-16 | 64.42 | 60.00 | 0 | 124.42 |
| *27* | *2014-00-102-16* | *0.00* | *125.00* | *0* | *125.00* |
| 28 | 2011-02-101-05 | 54.82 | 5.16 | 44.72 | 15.26 |
| 28 | 2011-02-800-08 | 4.62 | 10.00 | 0 | 14.62 |
| **ಅಧಿಕವಾದ ಪೂರಕ ಅಂದಾಜುಗಳು** | | | | | |
| 1 | 2401-00-108-2 | 448.64 | 180.08 | 531.70 | 97.02 |
| 2 | 2403-00-113-04 | 0.01 | 2.15 | 0.80 | 1.36 |
| 3 | 2235-04-101-01 | 6,500.00 | 2,500.00 | 7,300.00 | 1,700.00 |
| 4 | 2015-00-105-02 | 0.01 | 36.00 | 18.78 | 17.23 |
| 5 | 4059-80-051-41 | 11.40 | 8.38 | 16.78 | 3.00 |
| 7 | 2505-60-196-6 | 1,740.00 | 500.00 | 1,990.00 | 250.00 |
| 7 | 5054-04-337-07 | 0 | 10.00 | 8.67 | 1.33 |
| 10 | 2225-02-197-6 | 45.00 | 85.20 | 111.23 | 18.97 |
| 11 | 4235-02-102-1 | 0.03 | 17.35 | 14.09 | 3.29 |
| 14 | 4059-80-051-42 | 21.48 | 70.00 | 61.48 | 30.00 |
| 14 | 2235-60-107-08 | 3.66 | 5.22 | 4.23 | 4.65 |
| 21 | 4711-01-103-1 | 15.90 | 10.00 | 20.80 | 5.10 |
| 23 | 2230-02-101-08 | 0.01 | 3.03 | 1.02 | 2.02 |

~~~
~~~

# ಅಧ್ಯಾಯ V

## ಆಸ್ತಿ ಮತ್ತು ಜವಾಬ್ದಾರಿಗಳು

### 5.1 ಆಸ್ತಿಗಳು

ಪ್ರಸ್ತುತ ಲೆಕ್ಕ ಪತ್ರ ನಮೂನೆಯು ಜಮೀನು, ಕಟ್ಟಡಗಳು ಮುಂತಾದ ಸರ್ಕಾರಿ ಆಸ್ತಿಗಳನ್ನುಸ್ವಾಧೀನ ಪಡಿಸಿಕೊಂಡ/ಖರೀದಿಸಿದ ವರ್ಷದ ಹೊರತುಪಡಿಸಿಪ್ರಸ್ತುತ ಲೆಕ್ಕದಲ್ಲಿ ಅವುಗಳ ಮೌಲ್ಯವನ್ನು ಬಿಂಬಿಸುವುದಿಲ್ಲ. 31 ಮಾರ್ಚ್ 2019ರ ಅಂತ್ಯಕ್ಕೆ ಸರ್ಕಾರಿ ಆಸ್ತಿಯ ಮೌಲ್ಯಗಳು, ಪ್ರಧಾನವಾಗಿ ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು (₹22,004 ಕೋಟಿ), ಸಂಚಿತ ಬಂಡವಾಳ ವೆಚ್ಚ (₹270,270 ಕೋಟಿಗಳು) ಮತ್ತು ಸಾಲಗಳು ಮತ್ತು ಮುಂಗಡಗಳು (₹24,981 ಕೋಟಿ), ಸಿವಿಲ್ ಮುಂಗಡಗಳು (₹7 ಕೋಟಿ) ಮತ್ತು ಇರಸಾಲು ಅಡಿಯಲ್ಲಿ ಬಾಕಿ ಉಳಿದಿರುವ ಮೊತ್ತ (₹691 ಕೋಟಿ) ಗಳನ್ನು ಒಳಗೊಂಡಿತ್ತು. ಸರ್ಕಾರದ ಆಸ್ತಿಮತ್ತು ಜವಾಬ್ದಾರಿಗಳ ವಿವರಗಳನ್ನು ಹಣಕಾಸು ಲೆಕ್ಕಗಳ ಸಂಪುಟ–Iರ ವಿವರಣ ಪಟ್ಟಿ–1ರಲ್ಲಿ ತೋರಿಸಲಾಗಿದೆ.

2018–19ನೇ ಸಾಲಿನ ಅಂತ್ಯಕ್ಕೆ ಸಾರ್ವಜನಿಕ ಉದ್ದಿಮೆಗಳಲ್ಲಿ ಷೇರು ಬಂಡವಾಳವಾಗಿ ವಿವಿಧ ವರ್ಗಗಳ ಸಂಸ್ಥೆಗಳಲ್ಲಿ ಸರ್ಕಾರದ ಹೂಡಿಕೆಯು ₹66,518 ಕೋಟಿಗಳಷ್ಟಿತ್ತು. ಇದು ಮುಖ್ಯವಾಗಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು (₹2,685 ಕೋಟಿ), ಸರ್ಕಾರಿ ಕಂಪನಿಗಳು/ಸಾರ್ವಜನಿಕ ಉದ್ದಿಮೆಗಳು (₹60,278 ಕೋಟಿ), ಜಾಯಿಂಟ್ ಸ್ಟಾಕ್ ಕಂಪನಿಗಳು (₹3,033 ಕೋಟಿ) ಮತ್ತು ಸಹಕಾರಿ ಸಂಸ್ಥೆಗಳು ಹಾಗೂ ಸ್ಥಳೀಯ ಸಂಸ್ಥೆಗಳು (₹522 ಕೋಟಿ) ಸೇರಿ ಶಾಸನಬದ್ಧ ನಿಗಮಗಳ ಹೂಡಿಕೆಗಳನ್ನು ಒಳಗೊಂಡಿದೆ. ಆದರೆ ಈ ಸಾಲಿನಲ್ಲಿ ಒಟ್ಟು ಸರ್ಕಾರಿ ಹೂಡಿಕೆಗಳ ಮೇಲೆ ಪಡೆದ ಡಿವಿಡೆಂಡುಗಳು ₹38 ಕೋಟಿಯಷ್ಟಿತ್ತು (ಶೇಕಡ 0.06). 2018–19ರಲ್ಲಿ, ಹೂಡಿಕೆಗಳು ₹1,372 ಕೋಟಿಯಷ್ಟು ಏರಿಕೆಯಾಗಿದ್ದರೆ, ಡಿವಿಡೆಂಡುಗಳ ಆದಾಯವು ₹41 ಕೋಟಿಗಳಷ್ಟು ಕಡಿಮೆಯಾಗಿತ್ತು.

ಭಾರತೀಯ ರಿಜರ್ವ್ ಬ್ಯಾಂಕ್‌ನಲ್ಲಿ 1ನೇ ಏಪ್ರಿಲ್ 2018ಕ್ಕೆ ಶಿಲ್ಕು ₹724 ಕೋಟಿಯಷ್ಟಿದ್ದು, ಮಾರ್ಚ್ 2019ರ ಅಂತ್ಯಕ್ಕೆ ₹990 ಕೋಟಿಗೆ ಏರಿಕೆಯಾಗಿತ್ತು.

### 5.2 ಋಣ ಮತ್ತು ಜವಾಬ್ದಾರಿಗಳು

ಭಾರತ ಸಂವಿಧಾನದ ಅನುಚ್ಛೇದ 293(1)ರ ಅಧಿಕಾರದನ್ವಯ ರಾಜ್ಯ ಸರ್ಕಾರಗಳು, ಸಂಚಿತ ನಿಧಿಯ ಭದ್ರತೆಯ ಮೇಲೆ, ರಾಜ್ಯ ವಿಧಾನ ಮಂಡಲವು ಕಾಲ ಕಾಲಕ್ಕೆ ನಿಗದಿ ಪಡಿಸಿದ ಮಿತಿಗೆ ಅನುಗುಣವಾಗಿ ಸಾಲಗಳನ್ನು ಪಡೆಯಬಹುದಾಗಿದೆ.

11ನೇ ವಿತ್ತ ಆಯೋಗದ ಶಿಫಾರಸ್ಸಿಗೆ ಅನುಗುಣವಾಗಿ ಕರ್ನಾಟಕ ಸರ್ಕಾರವು ವಿತ್ತೀಯ ಜವಾಬ್ದಾರಿ ಅಧಿನಿಯಮ 2002ನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿದೆ. 13ನೇ ಹಣಕಾಸು ಆಯೋಗದ ಶಿಫಾರಸಿನ ಮೇರೆಗೆ ಹಾಗೂ ವಿತ್ತೀಯ ಜವಾಬ್ದಾರಿ ಅಧಿನಿಯಮದ ತಿದ್ದುಪಡಿ (ಮೇ 2011)ಗೆ ಅನುಗುಣವಾಗಿ ರಾಜ್ಯವು 2018–19ರ ಅಂತ್ಯಕ್ಕೆ ಬಾಕಿಯಿರುವ ಸಾಲದ ಮೊತ್ತವು ರಾ.ಒ.ಆಂ.ಉ. ದ ಶೇಕಡಾ 25ರ ವಿತ್ತೀಯ ಗುರಿ ನಿಗದಿಯಾಗಿತ್ತು. ಹಾಗೂ ನಿಗದಿತ ಹಣಕಾಸು ಕಾರ್ಯ ನಿರ್ವಹಣೆಯ

ಮೌಲ್ಯನಿರ್ಧಾರಣ ಮಾನದಂಡವಾಗಿ 'ಒಟ್ಟು ಜವಾಬ್ದಾರಿ'ಯ ವ್ಯಾಪ್ತಿಯನ್ನು ವಿಸ್ತರಿಸಲು ಎಲ್ಲಿ ಅಸಲು ಮತ್ತು/ಅಥವಾ ಬಡ್ಡಿಗಳನ್ನು ಕರ್ನಾಟಕ ಸರಕಾರದ ಆಯವ್ಯಯದಿಂದ ಹೊರತುಪಡಿಸಿ ತುಂಬಿಸಬೇಕಾಗುವುದೋ ಅಂತಹ ಸಾರ್ವಜನಿಕ ಉದ್ದಿಮೆಗಳ ಮತ್ತು ವಿಶೇಷ ಉದ್ದೇಶದ ವಾಹನಗಳ ಮತ್ತು ಇತರ ತತ್ಸಮಾನ ಉಪಕರಣಗಳನ್ನು ಸೇರಿಸಿ 'ಒಟ್ಟು ಜವಾಬ್ದಾರಿ' ವಿಸ್ತರಿಸುವುದಕ್ಕಾಗಿ ಕನಾಟಕ ಸರ್ಕಾರವು ಕರ್ನಾಟಕ ಹಣಕಾಸು ಜವಾಬ್ದಾರಿ (ತಿದ್ದುಪಡಿ) ಅಧಿನಿಯಮ 2014ನ್ನು 28ನೇ ಫೆಬ್ರವರಿ 2014ರಲ್ಲಿ ಜಾರಿಗೆ ತಂದಿದೆ.

ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರದ ಸಾರ್ವಜನಿಕ ಋಣ ಮತ್ತು ಒಟ್ಟು ಜವಾಬ್ದಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

(₹ಕೋಟಿಗಳಲ್ಲಿ)

| ವರ್ಷ | ರಾ.ಒ.ಆಂ.ಉ (*) | ಸಾರ್ವಜನಿಕ ಋಣ | ರಾ.ಒ.ಆಂ.ಉ. ಶತಾಂಶ | ಸಾರ್ವಜನಿಕ ಲೆಕ್ಕ(^) | ರಾ.ಒ.ಆಂ.ಉ. ಶತಾಂಶ | ಒಟ್ಟು ಜವಾಬ್ದಾರಿಗಳು(^) | ರಾ.ಒ.ಆಂ.ಉ. ಶತಾಂಶ |
|---|---|---|---|---|---|---|---|
| 2014-15 | 913,923 | 105,585 | 11.55 | 52,968 | 5.80 | 158,553 | 17.35 |
| 2015-16 | 1,045,182 | 122,547 | 11.72 | 53,076 | 5.08 | 175,623 | 16.80 |
| 2016-17 | 1,155,912 | 146,283 | 12.66 | 64,788 | 5.60 | 211,071 | 18.26 |
| 2017-18 | 1,325,443 | 163,135 | 12.31 | 69,923# | 5.28 | 2,33,058 | 17.58 |
| 2018-19 | 1,408,112 | 193,967 | 13.77 | 76,409# | 5.42 | 270,376(#) | 19.20 |

* ಆಕರ: ಮಧ್ಯಂತರ ವಿತ್ತೀಯ ಯೋಜನೆ 2019–23

^ ಯೋಜನೆ ಹಣಕಾಸು ಲೆಕ್ಕಗಳ ವಿವರಣಾಪಟ್ಟಿ 6 (i) ರಲ್ಲಿ ತೋರಿಸಿರುವಂತೆ ಸಣ್ಣ ಉಳಿತಾಯಗಳು ಮತ್ತು ಇತರೆ ಜವಾಬ್ದಾರಿಗಳ ನಿವ್ವಳವನ್ನು ತೋರಿಸುತ್ತದೆ.

# ರಾಜ್ಯದ ಸಂಚಿತ ನಿಧಿಯ ಭಾಗವಲ್ಲದ, ಆದರೆ ಹಣಕಾಸಿನ ಕಾರ್ಯನಿರ್ವಹಣೆಯ ಮಾನದಂಡವಾಗಿ 'ಒಟ್ಟು ಜವಾಬ್ದಾರಿ'ಯ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವ ಆಯವ್ಯಯದ ಹೊರಗಿನ ಸಾಲದ ಮೊತ್ತ ₹15,423 ಕೋಟಿಗಳನ್ನು ಹೊರತುಪಡಿಸಿದೆ.ಹೆಚ್ಚಿನ ವಿವರಗಳಿಗೆ ಒಂದನೇ ಅಧ್ಯಾಯದ ಕಂಡಿಕೆ 1.6ನ್ನು ನೋಡಬಹುದು.

2017–18ಕ್ಕೆ ಹೋಲಿಸಿದರೆ ಸಾರ್ವಜನಿಕ ಋಣ ಮತ್ತು ಇತರ ಜವಾಬ್ದಾರಿಗಳಲ್ಲಿ ₹37,318 ಕೋಟಿಗಳ (ಶೇಕಡ 16.01) ನಿವ್ವಳ ಹೆಚ್ಚಳವಿದೆ.

2018–19ರ ಒಟ್ಟು ಸಾಲ ಮತ್ತು ಇತರೆ ಜವಾಬ್ದಾರಿಗಳ ಮೇಲಣ ಬಡ್ಡಿ ₹16,685 ಕೋಟಿಯಲ್ಲಿ,ಆಯವ್ಯಯದ ಹೊರಗಿನ ಸಾಲದ ಮೇಲಿನ ಬಡ್ಡಿಯನ್ನು (₹1,262 ಕೋಟಿ) ಒಳಗೊಂಡಂತೆ ಆಂತರಿಕ ರಾಜ್ಯ ಸರ್ಕಾರದ ಆಂತರಿಕ ಸಾಲದ ಮೇಲಣ ಬಡ್ಡಿ (₹12,328 ಕೋಟಿ), ಭವಿಷ್ಯ ನಿಧಿ ಮತ್ತು ಸಣ್ಣ ಉಳಿತಾಯಗಳ ಮೇಲಣ ಬಡ್ಡಿ (₹2,357 ಕೋಟಿ) ಕೇಂದ್ರದ ಸಾಲ ಮತ್ತು ಮುಂಗಡಗಳ ಮೇಲಣ ಬಡ್ಡಿ (₹706 ಕೋಟಿಗಳು) ಹಾಗೂ ಮೀಸಲು ನಿಧಿ ಮತ್ತು ಇತರೆ ಜವಾಬ್ದಾರಿಗಳಮೇಲಣ ಬಡ್ಡಿ (₹0.08 ಕೋಟಿ) ಯೂ ಒಳಗೊಂಡಿರುತ್ತದೆ.ಹಾಗೂ ಒಟ್ಟು ಬಡ್ಡಿ ಪಾವತಿಯು 2018–19ರ ರಾಜಸ್ವ ವೆಚ್ಚದ ಶೇಕಡಾ 10.13 ರಷ್ಟಾಗುತ್ತದೆ ಮತ್ತು ರಾಜಸ್ವ ಸ್ವೀಕೃತಿಯ ಶೇಕಡ 10.09 ರಷ್ಟಿದೆ. 2017–18ಕ್ಕಿಂತಲೂ 2018–19ರಲ್ಲಿ ಬಡ್ಡಿ ಪಾವತಿ ಮೇಲಿನ ವೆಚ್ಚವು (ಹೊರಗಿನ ಸಾಲದ ಮೇಲಿನ ಬಡ್ಡಿಯನ್ನುಒಳಗೊಂಡಂತೆ) ₹1,712 ಕೋಟಿಗಳಷ್ಟು ಹೆಚ್ಚಾಗಿದೆ.

### *5.2.1 ರಾಜ್ಯ ಭವಿಷ್ಯ ನಿಧಿ*

ಕೆಳಗಿನ ಕೋಷ್ಟಕವು ರಾಜ್ಯ ಭವಿಷ್ಯ ನಿಧಿಯ ಕಳೆದ ಐದು ವರ್ಷಗಳ ಪ್ರವೃತ್ತಿಯನ್ನು ಸೂಚಿಸುತ್ತದೆ.

**(₹ಕೋಟಿಗಳಲ್ಲಿ)**

| ವರ್ಷ | ಆರಂಭಿಕ ಶಿಲ್ಕು | ಸ್ವೀಕೃತಿಗಳು* | ಪಾವತಿಗಳು | ವರ್ಷದ ನಿವ್ವಳ ಸೇರ್ಪಡೆ | ಅಂತಿಮ ಶಿಲ್ಕು | ಭವಿಷ್ಯ ನಿಧಿ ಶಿಲ್ಕಿನ ಮೇಲಿನ ಬಡ್ಡಿ |
|---|---|---|---|---|---|---|
| 2014-15 | 9,984 | 2,847 | 1,744 | 1,103 | 11,087 | 866 |
| 2015-16 | 11,087 | 3,098 | 2,073 | 1,025 | 12,112 | 952 |
| 2016-17 | 12,112 | 3,275 | 1,852 | 1,423 | 13,535 | 988 |
| 2017-18 | 13,535 | 3,507 | 2,006 | 1,501 | 15,036 | 1,055 |
| 2018-19 | 15,036 | 3,894 | 2,221 | 1,673 | 16,709 | 1,164 |

(*) ಕೋಷ್ಟಕದ ಕೊನೆಯ ಸಾಲಿನಲ್ಲಿ ನಮೂದಿಸಿದ ಬಡ್ಡಿಯನ್ನೂ ಒಳಗೊಂಡಿದೆ.

### *5.2.2 ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿ*


ಕೆಳಗಿನ ಕೋಷ್ಟಕವು ಕಳೆದ ಐದು ವರ್ಷಗಳ ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿಯನ್ನು ಸೂಚಿಸುತ್ತದೆ. ಸರ್ಕಾರಿ ಜವಾಬ್ದಾರಿಗಳ ಪ್ರವೃತಿಯನ್ನು ತೋರಿಸುವ ನಕ್ಷೆಯನ್ನೂ ನೀಡಲಾಗಿದೆ.

**(₹ಕೋಟಿಗಳಲ್ಲಿ)**

| ವರ್ಷ | ರಾಜ್ಯದ ಆಂತರಿಕ ಋಣ | ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿ | ಇತರೆ ಜವಾಬ್ದಾರಿಗಳು | ಒಟ್ಟು ಜವಾಬ್ದಾರಿಗಳು |
|---|---|---|---|---|---|
| 2014-15 | 92,904 | 12,681 | 20,176 | 32,792 | 158,553 |
| 2015-16 | 109,545 | 13,002 | 22,262 | 30,814 | 175,623 |
| 2016-17 | 132,489 | 13,794 | 24,920 | 39,868 | 211,071 |
| 2017-18 | 148,581 | 14,555 | 27,731 | 42,191 | 233,058[#] |
| 2018-19 | 179,309 | 14,657 | 31,023 | 45,387 | 270,376[$] |

(#) ರಾಜ್ಯದ ಸಂಚಿತ ನಿಧಿಯ ಭಾಗವಲ್ಲದ, ಆದರೆ ಹಣಕಾಸಿನ ಕಾರ್ಯನಿರ್ವಹಣೆಯ ಮಾನದಂಡವಾಗಿ 'ಒಟ್ಟು ಜವಾಬ್ದಾರಿ'ಯ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವ ಆಯವ್ಯಯದ ಹೊರಗಿನಸಾಲದ ಮೊತ್ತ ₹13,173 ಕೋಟಿಗಳನ್ನು ಹೊರತುಪಡಿಸಿದೆ. ವಿವರಗಳಿಗಾಗಿ ದಯಮಾಡಿ ಅಧ್ಯಾಯ–Iರಲ್ಲಿನ ಕಂಡಿಕೆ 1.6 ನೋಡಿರಿ.

($) ರಾಜ್ಯದ ಸಂಚಿತ ನಿಧಿಯ ಭಾಗವಲ್ಲದ, ಆದರೆ ಹಣಕಾಸಿನ ಕಾರ್ಯನಿರ್ವಹಣೆಯ ಮಾನದಂಡವಾಗಿ 'ಒಟ್ಟು ಜವಾಬ್ದಾರಿ'ಯ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವ ಆಯವ್ಯಯದ ಹೊರಗಿನ ಸಾಲದ ಮೊತ್ತ ₹14,862 ಕೋಟಿಗಳನ್ನು ಹೊರತುಪಡಿಸಿದೆ. ವಿವರಗಳಿಗಾಗಿ ದಯಮಾಡಿ ಅಧ್ಯಾಯ–I ರಲ್ಲಿನ ಕಂಡಿಕೆ 1.6 ನೋಡಿರಿ.



ಕರ್ನಾಟಕ ಸರ್ಕಾರವು 'ಒಟ್ಟು ಜವಾಬ್ದಾರಿ'ಯ ವ್ಯಾಪ್ತಿಯನ್ನು ವಿಸ್ತರಿಸಲು ಎಲ್ಲಿ ಅಸಲು ಮತ್ತು/ಅಥವಾ ಬಡ್ಡಿಗಳನ್ನು ಕರ್ನಾಟಕ ಸರಕಾರದ ಆಯವ್ಯಯದಿಂದ ಹೊರತುಪಡಿಸಿ ತುಂಬಿಸಬೇಕಾಗುವುದೋ ಅಂತಹ ಸಾರ್ವಜನಿಕ ಉದ್ದಿಮೆಗಳ ಮತ್ತು ವಿಶೇಷ ಉದ್ದೇಶದ ವಾಹನಗಳ ಮತ್ತು ಇತರ ತತ್ಸಮಾನ ಉಪಕರಣಗಳನ್ನು ಸೇರಿಸಿ 'ಒಟ್ಟು ಜವಾಬ್ದಾರಿ'ಯನ್ನು ವಿಸ್ತರಿಸುವುದಕ್ಕಾಗಿ ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮ 2011ಕ್ಕೆ ಕರ್ನಾಟಕ ಹಣಕಾಸು ಜವಾಬ್ದಾರಿ (ತಿದ್ದುಪಡಿ) ಅಧಿನಿಯಮ 2014ನ್ನು 28ನೇ ಫೆಬ್ರವರಿ 2014ರಲ್ಲಿ ಜಾರಿಗೆ ತಂದಿದೆ.

ಹಣಕಾಸು ಇಲಾಖೆ ಒದಗಿಸಿದ ಆಯವ್ಯಯದ ಹೊರಗಿನ ಸಾಲಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

| ಆರಂಭದ ಶಿಲ್ಕು | ಪ್ರಸಕ್ತ ವರ್ಷದ ಸಾಲ | ಪ್ರಸಕ್ತ ಸಾಲಿನಲ್ಲಿ ಹಿಂತಿರುಗಿಸಿದ ಅಸಲು | ಪ್ರಸಕ್ತ ವರ್ಷದಲ್ಲಿ ಹಿಂತಿರುಗಿಸಿದ ಬಡ್ಡಿ | ಅಂತಿಮ ಶಿಲ್ಕು |
|---|---|---|---|---|
| (1) | (2) | (3) | (4) | (5) |
| 12,677.35 | 3523.65 | 1,339.44 | 1,190.61 | 14,861.56 |
| ಸೂಚನೆ:ಅಂತಿಮ ಶಿಲ್ಕನ್ನು (ಕಾಲಂ 5) ಒಂದನೇ ಕಾಲಂ(1)ಕ್ಕೆ ಕಾಲಂ (2)ನ್ನು ಸೇರಿಸಿ ಕಲಂ (3)ನ್ನು ಕಳೆದು ತೋರಿಸಲಾಗಿದೆ | | | | |

ಆಯವ್ಯಯದ ಹೊರಗಿನ ಸಾಲವೂ (₹14,862 ಕೋಟಿ) ಸೇರಿ, ಸರ್ಕಾರದ ಒಟ್ಟು ಸಾಲವು 2018–19ರಲ್ಲಿ ₹39,007 ಕೋಟಿಗಳಷ್ಟು ಹೆಚ್ಚಾಗಿದೆ. ಇದರಿಂದ 31ನೇ ಮಾರ್ಚ್ 2019ಕ್ಕೆ ಒಟ್ಟು ಜವಾಬ್ದಾರಿಯು ₹285,238 ಕೋಟಿಗಳಷ್ಟಿತ್ತು.

ಆಯವ್ಯಯದ ಹೊರಗಿನ ಬಾಕಿಯಿರುವ ಜವಾಬ್ದಾರಿ ಸಾಲಗಳಾದ ₹14,862 ಕೋಟಿಗಳನ್ನು ವಿತ್ತೀಯ ಸೂಚಿಯ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಂಡ ನಂತರ 2018–19ರ ಆರ್ಥಿಕ ವರ್ಷದ ಅಂತ್ಯಕ್ಕೆ ಒಟ್ಟು ಜವಾಬ್ದಾರಿಯು ಬಾಕಿ ಇದ್ದ ಋಣವು ರಾ.ಒ.ಆಂ.ಉ. ದ ಶೇಕಡ 20.26ರಷ್ಟಿತ್ತು.

### *5.2.3 ಸಾದಿಲ್ವಾರು ನಿಧಿ*

ರಾಜ್ಯದ ಸಾದಿಲ್ವಾರು ನಿಧಿಯು ರಾಜ್ಯದ ವಿಧಾನಮಂಡಲದ ಅಧಿಕಾರದ ಒಪ್ಪಿಗೆಯನ್ನು ಕಾದಿರಿಸಿ ಸರ್ಕಾರವು ಭರಿಸಬೇಕಾದ ಅನಿರೀಕ್ಷಿತ ವೆಚ್ಚಗಳನ್ನು ಪೂರೈಸಲು ಸಾದಿಲ್ವಾರು ನಿಧಿಯ ಸ್ಥಾಪನೆಯಾಗಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಈ ನಿಧಿಯ ಬಳಕೆಯ ವಿವರಣೆಗಳನ್ನು ಕೆಳಗೆ ನೀಡಲಾಗಿದೆ.

| ವಿವರಣೆಗಳು | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಸಾದಿಲ್ವಾರು ನಿಧಿಯಿಂದ ಹಣ ಪಡೆದ ಸಂದರ್ಭಗಳ ಸಂಖ್ಯೆ | 2 | 5 | 2 | 0 | 5 |
| ಸಾದಿಲ್ವಾರು ನಿಧಿಯಿಂದ ಪಡೆದ ಒಟ್ಟು ಮೊತ್ತ ₹ಕೋಟಿಗಳಲ್ಲಿ | 16.95 | 36.25 | 7.64 | 0 | 59.64 |
| ಆಯವ್ಯಯದ ಅಂದಾಜಿಗೆ ಸಾದಿಲ್ವಾರು ನಿಧಿಯಿಂದ ಪಡೆದ ಹಣದ ಪ್ರತಿಶತ | 0.01 | 0.02 | 0.01 | 0 | 0.02 |

## 5.3 ಖಾತರಿಗಳು

ಕರ್ನಾಟಕ ಖಾತರಿಗಳ ಮಿತಿ ಅಧಿನಿಯಮ 1999 ರಲ್ಲಿ ನಿಗದಿಪಡಿಸಿದ ಮಿತಿಯಂತೆ ಯಾವುದೇ ವರ್ಷದ ಏಪ್ರಿಲ್ ಒಂದರಂದು ಬಾಕಿ ಇರುವ ಸರ್ಕಾರಿ ಖಾತರಿಗಳ ಮೊತ್ತವು ಮಹಾಲೇಖಪಾಲರ ಪುಸ್ತಕದಲ್ಲಿ ತೋರಿಸಿರುವ ಹಿಂದಿನ ಎರಡು ವರ್ಷಗಳ ರಾಜ್ಯದ ರಾಜಸ್ವ ಸ್ವೀಕೃತಿಯ ಶೇಕಡ 80ಕ್ಕೆ ಮೀರದಂತೆ ಇರಬೇಕು. ಹಣಕಾಸು ಲೆಕ್ಕದಲ್ಲಿ ತೋರಿಸಿರುವ ಸರ್ಕಾರದ ಬಾಕಿ ಇರುವ

ಗರಿಷ್ಠ ಖಾತರಿಗಳ ಮೊತ್ತವು ಅಧಿನಿಯಮದಲ್ಲಿ ನಿಗಡಿಪಡಿಸಿದ ಮಿತಿಯ ಒಳಗಿದೆ.ಶಾಸನ ಬದ್ಧ ನಿಗಮಗಳು, ಸರ್ಕಾರಿ ಕಂಪನಿಗಳು, ಸ್ಥಳೀಯ ಸಂಸ್ಥೆಗಳು, ಸಹಕಾರಿ ಸೊಸೈಟಿಗಳು ಮುಂತಾದವುಗಳು ಪಡೆದ ಸಾಲದ ಮರುಪಾವತಿಗೆ ರಾಜ್ಯ ಸರ್ಕಾರ ನೀಡಿದ ಖಾತರಿಗಳ ವಿವರಗಳನ್ನು ಹಣಕಾಸು ಲೆಕ್ಕಗಳ **ಸಂಪುಟ–II**ರ ವಿವರಣಾ ಪಟ್ಟಿ 20ರಲ್ಲಿ ನೀಡಲಾಗಿದೆ. ಕಳೆದ ಐದು ವರ್ಷಗಳಲ್ಲಿ ಪ್ರತಿವರ್ಷ ಖಾತರಿ ನೀಡಿದ ಗರಿಷ್ಠ ಮೊತ್ತ ಮತ್ತು ಬಾಕಿ ಇರುವ ಅಸಲು ಮತ್ತು ಬಡ್ಡಿಯ ಮೊತ್ತವನ್ನು ಕೆಳಗೆ ನೀಡಲಾಗಿದೆ.

**(₹ಕೋಟಿಗಳಲ್ಲಿ)**

| ವರ್ಷಾಂತ್ಯದಲ್ಲಿ | ಖಾತರಿ ನೀಡಿದ ಗರಿಷ್ಠ ಮೊತ್ತ (ಅಸಲು ಮಾತ್ರ) | 31ನೇ ಮಾರ್ಚಿಗೆ ಬಾಕಿ ಇರುವ ಮೊತ್ತ | |
|---|---|---|---|
| | | ಅಸಲು | ಬಡ್ಡಿ |
| 2014-15 | 16,869 | 10,890 | 143 |
| 2015-16 | 18,358 | 13,155 | 170 |
| 2016-17 | 21,115 | 15,227 | 165 |
| 2017-18 | 24,025 | 18,266 | 149 |
| 2018-19 | 30,719 | 23,913 | 178 |

## 5.4 ಬಾಹ್ಯ ಬೆಂಬಲಿತ ಯೋಜನೆಗಳು

ಬಾಹ್ಯ ಬೆಂಬಲಿತ ಯೋಜನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮರುಪಾವತಿಯ ಜವಾಬ್ದಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ. ಪ್ರತಿ ಯೋಜನೆಯ ವಿವರಗಳನ್ನು ಹಣಕಾಸು ಲೆಕ್ಕಗಳು–**ಸಂಪುಟ–II**ರಲ್ಲಿ ಅನುಬಂಧ–Vರಲ್ಲಿ ನೀಡಲಾಗಿದೆ.

**(₹ಕೋಟಿಗಳಲ್ಲಿ)**

| ಅವಧಿ | ಆರಂಭ ಶಿಲ್ಕು | ಸ್ವೀಕರಿಸಿದ ಮೊತ್ತ | ಮರು ಪಾವತಿಸಿದ ಮೊತ್ತ | ಮುಕ್ತಾಯ ಶಿಲ್ಕು |
|---|---|---|---|---|
| 2014-15 | 9,362 | 1,365 | 493 | 10,234 |
| 2015-16 | 10,234 | 1,271 | 664 | 10,841 |
| 2016-17 | 10,841 | 1,917 | 839 | 11,919 |
| 2017-18 | 11,919 | 1,968 | 895 | 12,992 |
| 2018-19 | 12,992 | 1,455 | 1,054 | 13,393 |

~~~
~~~

# ಅಧ್ಯಾಯVI

## ಇತರೆ ವಿಷಯಗಳು

### 6.1 ಸಾರ್ವಜನಿಕ ಋಣದಡಿ ವ್ಯತಿರಿಕ್ತ ಶಿಲ್ಕುಗಳು

ಸಂವಿಧಾನದ ಅನುಚ್ಛೇದ 293(1) ರಾಜ್ಯ ಸರ್ಕಾರದ ಸಾಲ ಪಡೆಯುವಿಕೆಯನ್ನು ನಿಯಂತ್ರಿಸುತ್ತದೆ. ರಾಜ್ಯ ಸರ್ಕಾರದ ಆಂತರಿಕ ಋಣದ ಶಿಲ್ಕು ₹179,309 ಕೋಟಿಗಳಷ್ಟಿದ್ದು, ಇದರಲ್ಲಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ. ₹133.55 ಕೋಟಿಗಳ ಸಾಲದ ವ್ಯತಿರಿಕ್ತ ಶಿಲ್ಕು ಸೇರಿದೆ. ಕೇಂದ್ರ ಸರ್ಕಾರದ ಸಾಲ ಮತ್ತು ಮುಂಗಡಗಳ ಶಿಲ್ಕು ₹14,657 ಕೋಟಿಗಳಷ್ಟಿದ್ದು ಇದರಲ್ಲಿ ಕೇಂದ್ರ ಸರ್ಕಾರದ 31ನೇ ಮಾರ್ಚ್ 2010 ಬಾಕಿಯಿರುವಸಾಲಗಳು13ನೆಯ ವಿತ್ತ ಆಯೋಗದ ಶಿಫಾರಸಿನಂತೆ ಮನ್ನಾ ಮಾಡಿದ ₹11.97 ಕೋಟಿಗಳು ಸೇರಿದೆ. ವ್ಯತಿರಿಕ್ತ ಶಿಲ್ಕುಗಳ ಹೊಂದಾಣಿಕೆಯು ಪರಿಶೀಲನೆಯಲ್ಲಿದೆ.

### 6.2 ರಾಜ್ಯ ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು

2018–19ರ ಅಂತ್ಯಕ್ಕೆ ರಾಜ್ಯ ಸರ್ಕಾರ ನೀಡಿದ ಒಟ್ಟು ಸಾಲ ಮತ್ತು ಮುಂಗಡಗಳ ಮೊತ್ತವು ₹24,981 ಕೋಟಿಗಳಷ್ಟಿತ್ತು. ಈ ಸಾಲ ಮತ್ತು ಮುಂಗಡಗಳನ್ನು ವಿವಿಧ ಸಾಲವರ್ಗಗಳಾದ ಪಂಚಾಯತ್ ರಾಜ್ ಸಂಸ್ಥೆಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಪುರಸಭೆಗಳು, ಗೃಹ ಮಂಡಳಿಗಳು ಮತ್ತು ನಿಗಮಗಳು, ಸರ್ಕಾರಿ ಕಂಪನಿಗಳು ಮತ್ತು ನಿಗಮಗಳು, ಸಹಕಾರಿ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ನೀಡಲಾಗುತ್ತದೆ. 31ನೇ ಮಾರ್ಚ್ 2019ರ ಅಂತ್ಯಕ್ಕೆ ಮರುಪಾವತಿಯ ₹4,644 ಕೋಟಿಗಳ ಅಸಲು ಮತ್ತು ₹3,861 ಕೋಟಿಗಳ ಬಡ್ಡಿಯ ಮೊತ್ತವು ಬಾಕಿ ಉಳಿದಿದ್ದು, ಇದಕ್ಕೆ ಸಂಬಂಧಿಸಿದ ಸಾಲ ಲೆಕ್ಕಗಳನ್ನು ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಕರ್ನಾಟಕ, ನಿರ್ವಹಿಸಿದ್ದಾರೆ.

### 6.3 ಸ್ಥಳೀಯ ಸಂಸ್ಥೆಗಳು ಮತ್ತು ಇತರರಿಗೆ ನೀಡಿದ ಆರ್ಥಿಕ ಬೆಂಬಲ

ಸ್ಥಳೀಯ ಸಂಸ್ಥೆಗಳು ಮುಂತಾದವುಗಳಿಗೆ ನೀಡಿದ ಸಹಾಯಾನುದಾನಗಳ ಮೊತ್ತವು 2017–18 ರಲ್ಲಿದ್ದ ₹47,096 ಕೋಟಿಗಳಿಂದ 2018–19 ರಲ್ಲಿ ₹50,603 ಕೋಟಿಗಳಿಗೆ ಏರಿದೆ. ಇದು ಹಿಂದಿನ ವರ್ಷಕಿಂತ ₹3,507 ಏರಿಕೆಯಾಗಿದ್ದು, ಶೇಕಡ 7ರಷ್ಟುಏರಿಕೆಯನ್ನು ಸೂಚಿಸುತ್ತದೆ. ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು, ಗ್ರಾಮ ಪಂಚಾಯತಿಗಳು ಮತ್ತು ಪುರಸಭೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ಅನುದಾನವು (₹41,322 ಕೋಟಿಗಳು) ಪ್ರಸಕ್ತ ಸಾಲಿನಲ್ಲಿ ನೀಡಿದ ಒಟ್ಟು ಅನುದಾನದ ಶೇಕಡ 82ರಷ್ಟಿದೆ.ಕಳೆದ ಮೂರು ವರ್ಷಗಳಲ್ಲಿ ನೀಡಿದ ಸಹಾಯಾನುದಾನದ ವಿವರಗಳು ಕೆಳಕಂಡಂತಿದೆ.

(₹ಕೋಟಿಗಳಲ್ಲಿ)

| ವರ್ಷ | ಜಿಲ್ಲಾ ಪಂಚಾಯತ್‌ಗಳು | ತಾಲ್ಲೂಕು ಪಂಚಾಯತ್‌ಗಳು | ಗ್ರಾಮ ಪಂಚಾಯತ್‌ಗಳು | ನಗರಸ್ಥಳೀಯ ಸಂಸ್ಥೆಗಳು ಮತ್ತು ಪುರಸಭೆಗಳು | ಇತರೆ (*) | ಒಟ್ಟು |
|---|---|---|---|---|---|---|
| 2014-15 | 9,601 | 12,709 | 2,678 | 6,010 | 7,749 | 38,747 |
| 2015-16 | 9,476 | 13,596 | 3,620 | 6,076 | 7,254 | 40,022 |
| 2016-17 | 10,387 | 15,032 | 4,274 | 5,686 | 9,120 | 44,499 |
| 2017-18 | 9,811 | 15,705 | 5,533 | 6,490 | 9,557 | 47,096 |
| 2018-19 | 11,750 | 19,222 | 4,925 | 5,425 | 9,281 | 50,603 |

* ಇತರೆಯಲ್ಲಿ ಸಾರ್ವಜನಿಕ ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಸೇರಿವೆ.

### *6.3.1 ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆ*

ಸರ್ಕಾರವು ವಿವಿಧ ಫಲಾನುಭವಿಗಳಿಗೆ ಸಹಾಯಾನುದಾನಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಸಹಾಯಾನುದಾನದ ಬಳಕೆ ಪ್ರಮಾಣ ಪತ್ರವನ್ನು ಮಹಾಲೇಖಪಾಲರಿಗೆ ಸಲ್ಲಿಸಲು ಸೂಚಿಸಬಹುದು. ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಅಂತಹಹಣಬಿಡುಗಡೆಗಳಲ್ಲಿ ಮಾತ್ರ ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆಯನ್ನು ಗಮನಿಸುತ್ತಾರೆ. 31 ಮಾರ್ಚ್ 2019ರ ಅಂತ್ಯಕ್ಕೆ ₹765ಕೋಟಿಗಳ ಮೊತ್ತದ ಸುಮಾರು 110 ಸಹಾಯಾನುದಾನ ಬಿಲ್ಲುಗಳಲ್ಲಿ ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆಯು ಬಾಕಿ ಉಳಿದಿದೆ. ಇದರಲ್ಲಿ ಪ್ರಮುಖವಾಗಿವೈದ್ಯಕೀಯ ಮತ್ತು ಜನಾರೋಗ್ಯ (₹426 ಕೋಟಿ) ಮತು ನಗರಾಭಿವೃದ್ಧಿ, ಸಾಮಾನ್ಯ ಆರ್ಥಿಕ ಸೇವೆಗಳು ಮತ್ತು ವಾರ್ತಾ ಮತ್ತು ಪ್ರಚಾರ ಇಲಾಖೆಗಳು (₹327 ಕೋಟಿ) ಬಾಕಿ ಉಳಿಸಿಕೊಂಡಿದ್ದು, ಇದು ಶೇಕಡಾ 98ರಷ್ಟಿದೆ.

## 6.4 ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು

**(₹ಕೋಟಿಗಳಲ್ಲಿ)**

| ಭಾಗ | 01-04-2018 ರಲ್ಲಿದ್ದಂತೆ | 31-03-2019 ರಲ್ಲಿದ್ದಂತೆ | ನಿವ್ವಳ ಹೆಚ್ಚಳ(+)/ಇಳಿಕೆ (-) | |
|---|---|---|---|---|
| **ನಗದು ಶಿಲ್ಕು** * | 724 | 990 | (+) | 266 |
| **ನಗದು ಶಿಲ್ಕಿನಿಂದ ಹೂಡಿಕೆಗಳು** (ಭಾರತ ಸರ್ಕಾರದ ಭದ್ರತೆಗಳು ಮತ್ತು ಟ್ರೆಜರಿ ಬಿಲ್ಲುಗಳಲ್ಲಿ) | 12,655 | 5,139 | (-) | 7,516 |
| **ಇತರೆ ನಗದು ಶಿಲ್ಕು ಮತ್ತು ಹೂಡಿಕೆಗಳು** | 12,805 | 15,875 | (+) | 3,070 |
| (a) ಇಲಾಖಾ ಅಧಿಕಾರಿಗಳ ಬಳಿಯ ನಗದು ಮತ್ತು ಖಾಯಂಮುಂಗಡ | 4 | 4 | | ... |
| (b) ಮೀಸಲು ನಿಧಿಗಳ ಹೂಡಿಕೆಗಳು | 12,801 | 15,871 | (+) | 3,070 |
| **ಒಟ್ಟು** | 26,184 | 22,004 | (-) | 4,180 |
| **ಬಡ್ಡಿ ವಸೂಲಿ** | 1,078 | 936 | (-) | 142 |

(*) ನಗದು ಶಿಲ್ಕು ಸ್ಥಳೀಯ ಇರಸಾಲು ಮತ್ತು ರಿಸರ್ವ್ ಬ್ಯಾಂಕಿನ ಠೇವಣಿಗಳನ್ನು ಒಳಗೊಂಡಿದೆ.

2018-19ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ನಗದು ಶಿಲ್ಕಿನ ಹೂಡಿಕೆಗಳ ಮೇಲಿನ ಬಡ್ಡಿಯಲ್ಲಿ ಶೇಕಡ ₹13.17ರಷ್ಟು ಕಡಿಮೆಯಾಗಿತೆ.

## 6.5 ಲೆಕ್ಕಗಳ ಹೊಂದಾಣಿಕೆ

ಲೆಕ್ಕಗಳ ನಿಖರತೆ ಮತ್ತು ವಿಶ್ವಸನೀಯತೆಗಳು ಇತರೆ ಅಂಶಗಳೊಂದಿಗೆ ಇಲಾಖೆಗಳಲ್ಲಿ ಲಭ್ಯವಿರುವ ಅಂಕಿಗಳನ್ನು ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಸಂಕಲಿಸಿದ ಲೆಕ್ಕಗಳ ಅಂಕಿಗಳೊಂದಿಗೆ ಸಕಾಲದಲ್ಲಿ ಹೊಂದಾಣಿಕೆ ಮಾಡುವುದನ್ನು ಅವಲಂಬಿಸಿವೆ. ಈ ಕೆಲಸವು ಆಯಾ ಇಲಾಖಾ ಮುಖ್ಯಸ್ಥರುಗಳಿಂದ ನಿರ್ವಹಿಸಲ್ಪಡಬೇಕಾಗಿದೆ. 2018-19ರಲ್ಲಿ ರಾಜ್ಯದ ₹198,959 ಕೋಟಿಗಳ ಒಟ್ಟು ವೆಚ್ಚದಲ್ಲಿ ಶೇಕಡ 99.48ರಷ್ಟು (₹197,933 ಕೋಟಿಗಳು) ಹೊಂದಾಣಿಕೆಯಾಗಿತ್ತು. ಅದೇರೀತಿ ₹164,973 ಕೋಟಿಗಳ ಒಟ್ಟು ಸ್ವೀಕೃತಿಯಲ್ಲಿ ಶೇಕಡ 99.91ರಷ್ಟು (₹164,817 ಕೋಟಿಗಳು) ಹೊಂದಾಣಿಕೆಯಾಗಿತ್ತು. ಸಾಲ ಮತ್ತು ಮುಂಗಡಗಳ ವಿತರಣೆ ಹಾಗೂ ಮರುಪಾವತಿ ಲೆಕ್ಕ ಹೊಂದಾಣಿಕೆಯನ್ನು ಯಾವುದೇ ಇಲಾಖೆಗಳ ಮುಖ್ಯ ನಿಯಂತ್ರಣಾಧಿಕಾರಿಗಳು ಮಾಡಿರುವುದಿಲ್ಲ.

## 6.6 ಖಜಾನೆಗಳಿಂದ ಲೆಕ್ಕಗಳ ಸಲ್ಲಿಕೆ

ರಾಜ್ಯದಲ್ಲಿ 34 ಜಿಲ್ಲಾ ಖಜಾನೆಗಳಿವೆ. 2018-19ನೇ ಸಾಲಿನಲ್ಲಿ 164 ಸಂದರ್ಭಗಳಲ್ಲಿ ಖಜಾನೆ ಲೆಕ್ಕಗಳನ್ನು ವಿಳಂಬವಾಗಿ ಸ್ವೀಕರಿಸಲಾಗಿತ್ತು. ಇದರಲ್ಲಿ ಖಜಾನೆಗಳ ಲೆಕ್ಕಗಳ ಸಲ್ಲಿಕೆಯಲ್ಲಿ 163 ಸಂದರ್ಭಗಳಲ್ಲಿ 15 ದಿನಗಳವರೆಗಿನ ಹಾಗೂ 1 ಸಂದರ್ಭಗಳಲ್ಲಿ 15 ದಿನಗಳಿಂದ ಒಂದು ತಿಂಗಳ ವರೆಗಿನ ವಿಳಂಬವನ್ನು ಗಮನಿಸಲಾಗಿತ್ತು.

## 6.7 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳು

'ಸಾದಿಲ್ವಾರು' ವೆಚ್ಚ ಅಥವಾ 'ಸಾದಿಲ್ವಾರುಗಳು' ಒಂದು ಕಛೇರಿಯ ನಿರ್ವಹಣೆಗೆ ಅಗತ್ಯವಾದ ಎಲ್ಲಾ ಪ್ರಾಸಂಗಿಕ ವೆಚ್ಚ ಮತ್ತು ಇತರ ವೆಚ್ಚಗಳು ಅಥವಾ ಇಲಾಖೆಯ ನಿಗದಿತ ವರ್ಗೀಕರಣ ನಿಯಮಗಳ ಹೊರಗಿನ ವೆಚ್ಚ ಶೀರ್ಷಿಕೆಯಡಿ ಬರುವ ತಾಂತ್ರಿಕ ನಿರ್ವಹಣೆಯು ಇಲಾಖಾ ವೆಚ್ಚಗಳನ್ನು ಒಳಗೊಂಡಿದೆ. ಸಾದಿಲ್ವಾರು ವೆಚ್ಚ ಕೈಪಿಡಿ 1958ರ ಕಂಡಿಕೆ 36ರ ಅನ್ವಯ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಸಮರ್ಥನಾ ದಾಖಲೆಗಳು ಇಲ್ಲದೆಯೇ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣ ಸೆಳೆಯುವ ಅಧಿಕಾರವನ್ನು ಹೊಂದಿದ್ದಾರೆ. ಅಂತಹ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಯಾವ ತಿಂಗಳಲ್ಲಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಸೆಳೆಯಲಾಗಿದೆಯೋ ಅದರ ಮುಂದಿನ ತಿಂಗಳ 15ನೇ ತಾರೀಖಿನೊಳಗೆ ಸವಿವರ ಸಾದಿಲ್ವಾರು ಬಿಲ್ಲುಗಳನ್ನು (ಎನ್‌ಡಿಸಿ) ತಯಾರಿಸಿ ಖಜಾನೆಯ ಮೂಲಕ ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಅವರಿಗೆ ಸಲ್ಲಿಸಬೇಕು. ಸೆಪ್ಟಂಬರ್ 2004ರ ಸರ್ಕಾರಿ ಆದೇಶದ ಅನ್ವಯ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಖಜಾನೆಗಳ ಮೂಲಕ ಸಲ್ಲಿಸಬೇಕಿದ್ದು, ಹೊಂದಾಣಿಕೆಗೆ ಬಾಕಿ ಇರುವ ಎಸಿ ಬಿಲ್ಲುಗಳಿಗೆ ಸವಿವರ ಬಿಲ್ಲುಗಳನ್ನು (ಎನ್‌ಡಿಸಿ) ಸಲ್ಲಿಸದಿದ್ದಲ್ಲಿ ಮುಂದಿನ ಎಸಿ ಬಿಲ್ಲುಗಳನ್ನು ಮನ್ನಣೆ ಮಾಡದಿರಲು ಖಜಾನೆಗೆ ಅಧಿಕಾರ ನೀಡಿದೆ. ಎನ್‌ಡಿಸಿ ಬಿಲ್ಲುಗಳ ಸಲ್ಲಿಕೆಯ ಮುಂದೂಡುವಿಕೆಯು ಎಸಿ ಬಿಲ್ಲುಗಳೆಚ್ಚವನ್ನುಅಪಾರದರ್ಶಕವಾಗಿಸುತ್ತದೆ.

31 ಮಾರ್ಚ್ 2019ರ ಅಂತ್ಯಕ್ಕೆ ₹93.27 ಕೋಟಿಗಳನ್ನು ಒಳಗೊಂಡ ಸುಮಾರು 2095 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು, ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯಾಗದೆ ಬಾಕಿ ಉಳಿದಿವೆ. ಪ್ರಮುಖವಾಗಿ ಪೋಲಿಸ್ (₹32.93 ಕೋಟಿ), ಚುನಾವಣೆಗಳು (₹33.22 ಕೋಟಿ), ಅರಣ್ಯ, ಜೀವವಿಜ್ಞಾನ ಮತ್ತು ಪರಿಸರ (₹6.80 ಕೋಟಿ) ಮತ್ತು ಶಿಕ್ಷಣ (₹4.57 ಕೋಟಿ) ಇಲಾಖೆಗಳು ಬಾಕಿ ಉಳಿಸಿಕೊಂಡಿವೆ.

## 6.8 ಅಪೂರ್ಣ ಕಾಮಗಾರಿಗಳ ಮೇಲಿನ ಬದ್ಧತೆಗಳು

ಲೋಕೋಪಯೋಗಿ ಕಾಮಗಾರಿಗಳ ಇಲಾಖೆ, ಜಲಸಂಪನ್ಮೂಲ ಇಲಾಖೆ ಮತ್ತು ಜನಾರೋಗ್ಯ ಮತ್ತು ಇಂಜಿನೀಯರಿಂಗ್ ಇಲಾಖೆಗಳು ಕೈಗೊಂಡ ವಿವಿಧ ನಿರ್ಮಾಣ ಕಾಮಗಾರಿಗಳ ಮೇಲೆ ರಾಜ್ಯ ಸರ್ಕಾರವು 2018–19ರವರೆಗೆ ಒಟ್ಟು ₹179,857 ಕೋಟಿಗಳ ವೆಚ್ಚವನ್ನು ಮಾಡಿದೆ. ಆದರೆ ಈ ನಿರ್ಮಾಣ ಯೋಜನೆಗಳಲ್ಲಿ ತೊಡಗಿರುವ ಇಲಾಖೆಗಳು, 2018–19ರ ಅಂತ್ಯಕ್ಕೆ ₹433 ಕೋಟಿಗಳ ಅಂದಾಜಿನ 1,060 ಕಾಮಗಾರಿಗಳು ಅಪೂರ್ಣವಾಗಿ ಉಳಿದಿದ್ದು ಇವುಗಳ ಮೇಲೆ ₹259 ಕೋಟಿಗಳ ಸರ್ಕಾರದ ಬದ್ಧತೆಗಳನ್ನು ವರದಿ ಮಾಡಿವೆ. ವಿವರ ಕೆಳಗಿನಂತಿವೆ.

**(₹ಕೋಟಿಗಳಲ್ಲಿ)**

| ಅವಧಿ | ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಅಂದಾಜು | ತಹಲ್ ವರೆಗಿನ ವೆಚ್ಚ |
|---|---|---|---|
| 2005-10 | 05 | 03 | 03 |
| 2010-15 | 126 | 276 | 211 |
| 2015-19 | 2,039 | 3,399 | 2,040 |
| **ಮೊತ್ತ** | **2,170** | **3,678** | **2,254** |

~~~
~~~

# ಅಧ್ಯಾಯ 7

## ವಿತ್ತೀಯ ವರದಿ

### 7.1 ಮುಂಗಡ ಸಿದ್ಧಪಡಿಸುವಾಗ ದಕ್ಷತೆ

ಭಾರತ ಸಂವಿಧಾನದ 202ನೇ ಅನುಚ್ಛೇದವು ರಾಜ್ಯಸರ್ಕಾರಕ್ಕೆ ಪ್ರತಿ ಆರ್ಥಿಕ ವರ್ಷಕ್ಕೆ ರಾಜ್ಯದ ಅಂದಾಜು ವೆಚ್ಚ ಮತ್ತು ಆದಾಯದ ಪಟ್ಟಿಯನ್ನು ಸಿದ್ಧಪಡಿಸುವ ಅಧಿಕಾರವಿತ್ತಿದ್ದು ಅದನ್ನು ಉಭಯ ಸದನಗಳಲ್ಲಿ ಮಂಡಿಸಬೇಕಾಗುತ್ತದೆ

ವಾರ್ಷಿಕ ಹಣಕಾಸು ಪಟ್ಟಿ ಅಥವಾ ಬಜೆಟ್ ಎಂದೂ ಕರೆಯಲ್ಪಡುವ ಈ ಪಟ್ಟಿಯು ಒಂದು ನಿರ್ದಿಷ್ಟ ಆರ್ಥಿಕ ವರ್ಷದ ರಾಜಸ್ವ ಹಾಗೂ ವೆಚ್ಚ.ದ ಮುನ್ನೋಟ ಅಥವಾ ಅಂದಾಜು ಕುರಿತು ವಿವರಣೆ, ಆದಾಯದ ವಿವರವಾದ ಅಂದಾಜು ಮತ್ತು ಅನುದಾನಗಳ ಬೇಡಿಕೆಯೊಂದಿಗೆ ವೆಚ್ಚದ ವಿವರವಾದ ಅಂದಾಜುಗಳನ್ನು ಒದಗಿಸುತ್ತವೆ.ನಿರ್ದಿಷ್ಟ ವರ್ಷದ ಮುಂಗಡ ಪತ್ರವು ಹಿಂದಿನವರ್ಷಗಳ, ಸಾಧಾರಣವಾಗಿ ಹಿಂದಿನ ಮೂರು ವರ್ಷಗಳ ಪಾಲನೆಯ ಕುರಿತು ಚರ್ಚಿಸುತ್ತದೆ.ಮುಂಗಡ ದಾಖಲೆಗಳು ಲೆಕ್ಕಗಳ ಮಾಹಿತಿಯನ್ನು ಅಂದರೆ ಮುಂಬರುವ ವರ್ಷದ ಮುಂಗಡದ ಅಂದಾಜು ಮತ್ತು ಹಿಂದಿನ ವರ್ಷದಅಂದಾಜು ಮತ್ತು ಪರಿಷ್ಕೃತ ಅಂದಾಜು ಹಾಗೂ ಎರಡುವರ್ಷ ಹಿಂದಿನ ಲೆಕ್ಕಗಳ ಅಥವಾ ವಾಸ್ತವ ಲೆಕ್ಕಗಳ ಮಾಹಿತಿಯನ್ನು ಒದಗಿಸುತ್ತವೆ.

ಸರ್ಕಾರದ ಮುಂಗಡಪತ್ರದ ಪಾಲನೆಯ ಅರ್ಥಪೂರ್ಣ ತಿಳುವಳಿಕೆಗಾಗಿ ನಿರ್ದಿಷ್ಟ ವರ್ಷದಮುಂಗಡದಲ್ಲಿ ಹೇಳಿರುವವ್ಯತ್ಯಯಗಳ ಹಾಗೂ ಅಂತಿಮ ಪರಿಣಾಮಗಳ ತುಲನಾತ್ಮಕ ವಿಶ್ಲೇಷಣೆಯ ಅವಶ್ಯಕತೆಯಿರುತ್ತದೆ. ಆದರೆ ರಾಜಸ್ವ ಹಾಗೂ ವೆಚ್ಚಗಳ ಮಿತಿಮೀರಿದ ಅಂದಾಜು ಅಥವಾ ಕಡಿಮೆ ಅಂದಾಜಿನ ಕಾರಣಗಳಿಂದ ಇದರಲ್ಲಿ ವ್ಯತ್ಯಯಗಳು ಉಂಟಾಗಿರುತ್ತವೆ. ಬಜೆಟ್ಟಿನ ಅಂದಾಜಿನ ರಾಜಸ್ವ ಮತ್ತು ವೆಚ್ಚಗಳಿಗೂ ಮತ್ತು ವಾಸ್ತವ ರಾಜಸ್ವ ಮತ್ತು ವೆಚ್ಚಗಳಿಗೂ ಇರುವ ವ್ಯತ್ಯಯದ ಪ್ರಮಾಣವು ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಮುಂಗಡ ಅಂದಾಜಿನ ವ್ಯವಸ್ಥೆಯ ವಿಧಾನ ಮತ್ತು ಲೆಕ್ಕ ಇಡುವಿಕೆಯ ಪದ್ಧತಿ ಮುಂತಾದ ಹಲವು ಅಂಶಗಳಿಂದ ಪ್ರಭಾವಿತವಾಗಿರುತ್ತವೆ. ಆದರೂ ಸಹ ಮುಂಗಡ ಅಂದಾಜಿಗೂ ವಾಸ್ತವಕ್ಕೂ ಅಗಾಧ ವ್ಯತ್ಯಯವಿರುವುದು ಅಪೇಕ್ಷಣೀಯವಲ್ಲ; ಅಂತಹ ಪಥಾಂತರವು ಹಣಕಾಸು ಸೂಚಿಯನ್ನು ವಿರೂಪಗೊಳಿಸುವಲ್ಲಿ ಪರ್ಯಾವಸಾನವಾಗುತ್ತದೆ. ವೆಚ್ಚಯೋಜನೆಗಳ ಸುಗಮವಾದ ಜಾರಿಗೆ ಹಾಗೂ ವೆಚ್ಚ ಕಾರ್ಯನೀತಿಗಳ ವಾಸ್ತವಿಕ ಆಯ್ಕೆಗೆ ಅವಕಾಶವೊದಗಿಸಲು ರಾಜಸ್ವಗಳ ಅಂದಾಜಿನ ನಿಖರತೆಯು ಅಪೇಕ್ಷಣೀಯ.ಕರಾರುವಾಕ್ಕಾದ ಮುಂಗಡ ಅಂದಾಜಿನ ಪ್ರಾಮುಖ್ಯತೆಗೆ ಹಾಗೂ ಆರ್ಥಿಕ ನೀತಿ ರೂಪಿಸುವ ಸಲುವಾಗಿ ಸಮರ್ಥ ವಿತ್ತೀಯ ನೀತಿ ರಚನೆಯಲ್ಲೂ ಸಹ ಅಂತಹ ನಿಖರತೆಯು ಅಪೇಕ್ಷಣೀಯ. ಈ ರೀತಿಯಾಗಿ ಉತ್ತಮ ಮುನ್ಸೂಚನೆಯ ಮುಂಗಡ ಅಂದಾಜುಗಳಿಲ್ಲದಿದ್ದಲ್ಲಿ ಯೋಜನೆಗಳ ರಚನೆ ಮತ್ತು ಜಾರಿಯ ನಡುವೆ ತೃಪ್ತಿಕರ ಸಮನ್ವಯತೆಯನ್ನು ಸಾಧಿಸಲಾಗುವುದಿಲ್ಲ.

2018–19ನೇ ವರ್ಷದ ಮುಂಗಡ ಅಂದಾಜುಗಳ ಪರಿಶೀಲನೆಯ ಸಮಯದಲ್ಲಿ ಮುಂಗಡ ಅಂದಾಜು ಮತ್ತು ವಾಸ್ತವಿಕ ಅಂಕಿಅಂಶಗಳ ನಡುವೆ ವ್ಯತ್ಯಯ ಇರುವುದನ್ನು ಗಮನಿಸಲಾಗಿತ್ತು.ಮುಂಗಡ ಅಂದಾಜಿನಂತೆ ₹166,395 ಕೋಟಿಗಳ ರಾಜಸ್ವ ಸ್ವೀಕೃತಿಯನ್ನು ಊಹಿಸಲಾಗಿದ್ದು ಅದಕ್ಕೆ ಪ್ರತಿಯಾಗಿ ವಾಸ್ತವ ಸಂಗ್ರಹವು ₹164,979 ಕೋಟಿಯಾಗಿದ್ದು ಅಂದಾಜಿಗಿಂತ ₹1,416 ಕೋಟಿ ಕಡಿಮೆಯಾಗಿತ್ತು (ಶೇಕಡ 15ರಷ್ಟು). ಇದೇ ರೀತಿ ₹166,290 ಕೋಟಿಗಳ ರಾಜಸ್ವ ವೆಚ್ಚವನ್ನು ಊಹಿಸಲಾಗಿದ್ದುದಕ್ಕೆ ಪ್ರತಿಯಾಗಿ ವಾಸ್ತವ ವೆಚ್ಚವು ₹164,300 ಕೋಟಿಯಾಗಿದ್ದು ಅಂದಾಜಿಗಿಂತ ₹1,990 ಕೋಟಿಗಳಷ್ಟು ಕಡಿಮೆಯಾಗಿತ್ತು (ಶೇಕಡ 1.2ರಷ್ಟು).

## 7.2 ಸಹಾಯಾನುದಾನ

ಇಂಡಿಯನ್ ಗೌರ್ನಮೆಂಟ್ ಅಕೌಂಟಿಂಗ್ ಸ್ಟ್ಯಾಂಡರ್ಡ್ (ಐ.ಜಿ.ಎ.ಎಸ್.)–2 ಅನುಸಾರವಾಗಿ ಸಹಾಯಾನುದಾನಗಳು ಒಂದು ಸರ್ಕಾರದಿಂದ ಇನ್ನೊಂದು ಸರ್ಕಾರಕ್ಕೆ, ಸಂಸ್ಥೆಗಳಿಗೆ ಅಥವಾ ವೈಯಕ್ತಿಕವಾಗಿ ನೀಡಿದ ನಿಧಿ ವರ್ಗಾವಣೆಗಳು, ನಗದು ಅಥವಾ ವಸ್ತುಗಳ ರೂಪದ ಸಹಾಯ, ದಾನಗಳು ಅಥವಾ ವಂತಿಗೆಗಳ ಪಾವತಿಗಳು.ಸಹಾಯಾನುದಾನಗಳು ಆಸ್ತಿನಿರ್ಮಾಣ ಸಹಿತ ಒಂದು ಸಂಸ್ಥೆಯನ್ನು ಬೆಂಬಲಿಸುವ ನಿರ್ದಿಷ್ಟ ಉದ್ದೇಶಕ್ಕೆ ಕೊಡಲ್ಪಡುತ್ತವೆ

ಸಹಾಯಾನುದಾನಗಳು ಸಂವಿಧಾನಕ್ಕನುಗುಣವಾಗಿ ಕೇಂದ್ರಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರದಿಂದ ರಾಜ್ಯ ಸರ್ಕಾರದ ಉದ್ದೇಶಗಳನ್ನು ನೆರವೇರಿಸುತ್ತಿರುವ ಸ್ಥಳೀಯ ಸಂಸ್ಥೆಗಳಿಗೆ ಕೊಡಲ್ಪಡುತ್ತವೆ. ಇದು ಭಾರತದಲ್ಲಿ ಮೇಲ್ಮಟ್ಟದಲ್ಲಿ ಕೇಂದ್ರಸರ್ಕಾರ, ನಡುವಿನ ರಾಜ್ಯಸರ್ಕಾರ, ಹಾಗೂ ತಳಮಟ್ಟದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು (ಪಂ.ರಾ.ಸಂ) ಮತ್ತು ನಗರ ಸ್ಥಳೀಯ ಸಂಸ್ಥೆ(ನ.ಸ್ಥ.ಸಂ)ಗಳನ್ನೊಳಗೊಂಡು ಮೂರು ಹಂತಗಳ ಮಾದರಿಯ ಆಡಳಿತ ಪದ್ಧತಿಯ ಆಧಾರದ ಮೇಲೆ ನಿಂತಿದೆ. ಕೇಂದ್ರ ಸರ್ಕಾರದಿಂದ ರಾಜ್ಯಸರ್ಕಾರಕ್ಕೆ ಬಿಡುಗಡೆಯಾದ ಸಹಾಯಾನುದಾನಗಳು ಸಂವಿಧಾನದ 275 ಮತ್ತು 282 ವಿಧಿಗಳಿಗೆ ಅನುಗುಣವಾಗಿ ಭಾರತ ಸರ್ಕಾರದ ಸಂಚಿತ ನಿಧಿಯಿಂದ ಕೊಡಲ್ಪಡುತ್ತವೆ.

ರಾಜ್ಯ ಸರ್ಕಾರವು ವಿವಿಧ ಸಂಸ್ಥೆಗಳಿಗೆ ಸಹಾಯಾನುದಾನಗಳನ್ನು ಮಂಜೂರು ಮಾಡುವಾಗ ಅನುದಾನ ಬಿಡುಗಡೆಯಾದ ಅನುದಾನಗಳ ಬಳಕೆ ಪ್ರಮಾಣಪತ್ರಗಳನ್ನು (ಬ.ಪ್ರ.ಪ) ಪ್ರಧಾನ ಮಹಾಲೇಖಪಾಲರು (ಲೆ ಮತ್ತು ಹ) ಅವರಿಗೆ ಕಳುಹಿಸಿಕೊಡುವಂತೆ ನಿಗದಿಪಡಿಸುವುದರಿಂದ ಅವರು ಅನುದಾನಗಳ ಬಳಕೆಪ್ರಮಾಣಪತ್ರಗಳ ಸಲ್ಲಿಕೆಯನ್ನು ಗಮನಿಸಬಹುದು. ನಿಗದಿತ ಅವಧಿಯ (18 ತಿಂಗಳು) ನಂತರವೂ ಬಳಕೆ ಪ್ರಮಾಣ ಪತ್ರಗಳು ಬಾಕಿಯಿರುವುದು ನಿಗದಿತ ಉದ್ದೇಶಗಳಿಗೆ ಅನುದಾನವನ್ನು ಬಳಕೆಯಾಗಿರುವ ಬಗ್ಗೆ ಭರವಸೆಯ ಅಭಾವವನ್ನು ಸೂಚಿಸುತ್ತದೆ.

**ಈ ಕೆಳಗಿನ ಕೋಷ್ಟಕವು ಬಾಕಿ ಇರುವ ಬಳಕೆ ಪ್ರಮಾಣಪತ್ರಗಳ ಸ್ಥಿತಿಯನ್ನು ತೋರಿಸುತ್ತದೆ.**

| ವರ್ಷ | ಬರಬೇಕಾಗಿರುವ ಬ.ಪ್ರ.ಪ | ಮೊತ್ತ (₹ ಕೋಟಿಗಳಲ್ಲಿ) |
|---|---|---|
| 2015–16 ರವರೆಗೆ | 55 | 195.61 |
| 2016–17 | 32 | 223.14 |
| 2017–18* | 23 | 345.76 |
| **ಒಟ್ಟು** | **110** | **764.81** |

* ಮೇಲೆ ಸೂಚಿಸಿರುವ ವರ್ಷಗಳು ಬಾಕಿಯಿರುವ ವರ್ಷಗಳು, ಅಂದರೆ ಹಣ ಸೆಳೆದು 18 ತಿಂಗಳು ಕಳೆದಿರುವುದು. ಬಳಕೆ ಪ್ರಮಾಣವನ್ನು ಸಲ್ಲಿಸದಿರುವ ಪ್ರಮುಖವಾದ ಇಲಾಖೆಗಳೆಂದರೆ ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯ ಮತ್ತು ನಗರಾಭಿವೃದ್ಧಿ ಇಲಾಖೆ ಸೇರಿ ಒಟ್ಟು ಶೇಕಡ 98.44 ಬಾಕಿಯಿರುವುದು(₹752.88 ಕೋಟಿ).

## 7.3 ಅಮಾನತು ಶಿಲ್ಕಿನ ಸ್ಥಿತಿ

ವಹಿವಾಟುಗಳ ಸ್ವಭಾವದ ಮಾಹಿತಿಯ ಕೊರತೆಯಿಂದಾಗಿ ಅಥವಾ ಇನ್ನಿತರ ಕಾರಣದಿಂದ ಅಂತಿಮ ಲೆಕ್ಕಶೀರ್ಷಿಕೆಗೆ ದಾಖಲಿಸಲಾಗದ ಜಮೆ ಮತ್ತು ವೆಚ್ಚದ ವಹಿವಾಟುಗಳನ್ನು ಅಮಾನತುಗಳ ಅಡಿಯಲ್ಲಿ ವರ್ಗೀಕರಿಸಲಾಗುತ್ತದೆ. ಈ ಶೀರ್ಷಿಕೆಗಳ ಲೆಕ್ಕಗಳಲ್ಲಿರುವ ಮೊತ್ತವು ಅಂತಿಮವಾಗಿ ಆಯಾ ಅಂತಿಮ ಶೀರ್ಷಿಕೆಗಳಲ್ಲಿ ದಾಖಲಿಸಲ್ಪಟ್ಟಾಗ ವೆಚ್ಚದಲ್ಲಿ ಕಡಿತಗೊಳಿಸುವುದರ ಅಥವಾ ಜಮೆಯಲ್ಲಿ ಕಡಿತಗೊಳಿಸುವುದರ ಮೂಲಕ ಚುಕ್ತಗೊಳಿಸಲಾಗುತ್ತದೆ.

ಹಣಕಾಸು ಲೆಕ್ಕಗಳು ವಿವಿಧ ಅಮಾನತು ಮತ್ತು ಇರಸಾಲು ಲೆಕ್ಕಶೀರ್ಷಿಕೆಗಳ ನಿವ್ವಳ ಶಿಲ್ಕುಗಳನ್ನು ಬಿಂಬಿಸುತ್ತವೆ.ಪ್ರಧಾನ ಲೆಕ್ಕಶೀರ್ಷಿಕೆ '8658–ಅಮಾನತುಲೆಕ್ಕಗಳು ಮತ್ತು 8782– ನಗದು ಇರಸಾಲುಗಳಲ್ಲಿ ಬಾಕಿಯಿರುವ ಶಿಲ್ಕುಗಳು ಮತ್ತು ಲೆಕ್ಕ ಸಲ್ಲಿಸುವ ಅದೇ ಅಧಿಕಾರಿಗಳ ನಡುವಿನ ಹೊಂದಾಣಿಕೆಯನ್ನು ಬಾಕಿಯಿರುವ ಖರ್ಚು ಹಾಗೂ ಜಮೆಯ ಪ್ರತ್ಯೇಕ ಶಿಲ್ಕುಗಳ ಮೊತ್ತದಿಂದ ಲೆಕ್ಕ ಹಾಕಲಾಗಿದೆ. ಈ ಕೆಳಗಿನ ಕೋಷ್ಟಕದಲ್ಲಿ ಕೆಲವು ವಿಶೇಷ ಅಮಾನತು ಮತ್ತು ಇರಸಾಲು ವಿಷಯಗಳ ಕಳೆದ ಮೂರು ವರ್ಷಗಳ ನಿವ್ವಳ ಶಿಲ್ಕಿನ ಸ್ಥಿತಿಯನ್ನು ಸೂಚಿಸಲಾಗಿದೆ.

**ಅಮಾನತು ಮತ್ತು ಇರಸಾಲು ಶಿಲ್ಕುಗಳ ವಿವರಣೆಗಳು**

(₹ ಕೋಟಿಗಳಲ್ಲಿ)

| | ಒಳಶೀರ್ಷಿಕೆಯ ವಿವರಣೆ | 2016-17 | | 2017-18 | | 2018-19 | |
|---|---|---|---|---|---|---|---|
| | | ಖರ್ಚು | ಜಮೆ | ಖರ್ಚು | ಜಮೆ | ಖರ್ಚು | ಜಮೆ |
| 1 | 8658–00–101<br>ವೇತನ ಮತ್ತು ಲೆಕ್ಕ ಕಛೇರಿ ಅಮಾನತು | 118.86 | 0.45 | 189.66 | 0.25 | 288.08 | 16.93 |
| | ನಿವ್ವಳ | ಖರ್ಚು 118.41 | | ಖರ್ಚು 189.41 | | ಖರ್ಚು 271.15 | |
| 2 | 8658–00–102–ಅಮಾನತು ಲೆಕ್ಕ (ಸಿವಿಲ್) | 17.22 | 60.78 | 17.37 | 175.77 | 17.76 | 296.45 |
| | ನಿವ್ವಳ | ಜಮೆ 43.56 | | ಜಮೆ. 158.40 | | ಜಮೆ 278.69 | |
| 3 | 8658–00–110– ರಿಜರ್ವ್ ಬ್ಯಾಂಕ್ ಅಮನತು–ಕೇಂದ್ರ ಲೆಕ್ಕ ಕಛೇರಿ | 41.02 | 148.41 | 44.53 | 151.18 | 91.41 | 183.28 |
| | ನಿವ್ವಳ | ಜಮೆ107.39 | | ಜಮೆ 106.65 | | ಜಮೆ 91.87 | |
| 4 | 8782–00–102–1<br>ಲೋಕೋಪಯೋಗಿ ಇಲಖೆಯಿಚಿದ ಖಜಾನೆಗೆ ಇರಸಾಲು | 81.40 | ... | 81.72 | ... | 82.61 | ... |
| | ನಿವ್ವಳ | ಖರ್ಚು 81.40 | | ಖರ್ಚು 81.72 | | ಖರ್ಚು 82.61 | |
| 5 | 8782–00–102–2<br>ಲೋಕೋಪಯೋಗಿ ಇಲಾಖೆಯ ಚೆಕ್ಕುಗಳು | 2.52 | 18.42 | 2.53 | 30.52 | 2.53 | 29.78 |
| | ನಿವ್ವಳ | ಜಮೆ 15.90 | | ಜಮೆ 27.99 | | ಜಮೆ27.25 | |
| 6 | 8782–00–103–1<br>ಅರಣ್ಯ ಇಲಾಖೆಯ ಇರಸಾಲುಗಳು | 12.12 | ... | 12.13 | ... | 12.13 | ... |
| | ನಿವ್ವಳ | ಖರ್ಚು. 12.12 | | ಖರ್ಚು. 12.13 | | ಖರ್ಚು 12.13 | |
| 7 | 8782–00–103–2<br>ಅರಣ್ಯ ಇಲಾಖೆಯ ಚೆಕ್ಕುಗಳು | 0.83 | ... | 0.83 | ... | 0.83 | ... |
| | ನಿವ್ವಳ | ಖರ್ಚು 0.83 | | ಖರ್ಚು 0.83 | | ಖರ್ಚು 0.83 | |

## 7.4 ನೂತನ ಪಿಂಚಣಿ ಯೋಜನೆ

ಒಂದನೇ ಏಪ್ರಿಲ್, 2006ರ ಹಾಗೂ ನಂತರ ನೇಮಕಗೊಂಡ ರಾಜ್ಯ ಸರ್ಕಾರದ ನೌಕರರು ಒಂದು ನಿಗದಿತ ವಂತಿಗೆಯ ಆಧಾರಿತ ಪಿಂಚಣಿ ಯೋಜನೆಗೆ ಒಳಪಟ್ಟಿದ್ದು ಏಪ್ರಿಲ್ 1, 2010ರಿಂದ ತತ್ಸಂಬಂದವಾದ ವಸೂಲಿಯು ಪ್ರಾರಂಭವಾಗಿರುತ್ತದೆ. ಈ ಯೋಜನೆಯಡಿಯಲ್ಲಿ ನೌಕರರು ಮೂಲ ವೇತನ ಮತ್ತು ತುಟ್ಟಿಭತ್ಯೆಯ ಶೇಕಡ 10ರಷ್ಟು ವಂತಿಗೆ ನೀಡುವುದರೊಂದಿಗೆ ತತ್ಸಮವಾದ ಮೊತ್ತವನ್ನು ರಾಜ್ಯ ಸರ್ಕಾರವು ನೀಡುತ್ತದೆ.ಇಡೀ ಮೊತ್ತವು ನಿಯೋಜಿತ ನಿಧಿವ್ಯವಸ್ಥಾಪಕರಿಗೆ ಟ್ರಸ್ಟೀ ಬ್ಯಾಂಕ್ ನ್ಯಾಶನಲ್ ಸೆಕ್ಯೂರಿಟೀಸ್ ಡೆಪೊಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಮೂಲಕ ಹೂಡಿಕೆಗಾಗಿ ವರ್ಗಾಯಿಸಲ್ಪಡುತ್ತದೆ

ಪ್ರಧಾನ ಮಹಾಲೇಖಪಾಲರು (ಲೆ ಮತ್ತು ಹ) ದಾಖಲೆಗಳ ಪ್ರಕಾರ ರಾಜ್ಯ ಸರ್ಕಾರವು2018–19ನೇ ವರ್ಷದಲ್ಲಿ ₹755.39 ಕೋಟಿಗಳಷ್ಟು ವಂತಿಗೆ ನೀಡಿದೆ. ಮಾರ್ಚ್ 2018ರ ವರೆಗೆ ನಿಧಿ ಶೀರ್ಷಿಕೆ 8342–00–117ರಲ್ಲಿ ಉಳಿಸಿಕೊಂಡು, ₹1,531.67 ಕೋಟಿಗಳಷ್ಟು ಮೊತ್ತವನ್ನು ನಿಧಿಯಿಂದ ಎನ್‌ಎಸ್‌ಡಿಎಲ್/ಟ್ರಸ್ಟೀ ಬ್ಯಾಂಕ್‌ಗೆ (ನೌಕರರ ಮತ್ತು ಉದ್ಯೋಗದಾತರ ವಂತಿಗೆ ಕೂಡಿ) ಪಾವತಿ ಮಾಡಲಾಗಿದೆ. ಗಳಿಸಿರುವ ಬಡ್ಡಿಯೊಂದಿಗೆ ವರ್ಗಾವಣೆಯಾಗದೆ ಉಳಿದಿರುವ ನಿವ್ವಳ ಶಿಲ್ಕು ₹3.27 ಕೋಟಿ ಮೊತ್ತವು ಸರ್ಕಾರದ ಬಾಕಿಯಿರುವ ಜವಾಬ್ದಾರಿಯನ್ನು ಪ್ರತಿನಿಧಿಸುತ್ತದೆ.

ರಾಜ್ಯ ಸರ್ಕಾರದ ನೂತನ ಪಿಂಚಣಿಯೋಜನಾ ಘಟಕವು (ಎನ್.ಪಿ.ಎಸ್ ಸೆಲ್) ತಿಳಿಸಿರುವ ಪ್ರಕಾರ ನೌಕರರ ವಂತಿಗೆಯು ₹3,447.75 ಕೋಟಿಗಳಷ್ಟು ಇರುತ್ತದೆ (ಪ್ರಸಕ್ತ ಮತ್ತು ಹಿಂದಿನ ಬಾಕಿ). ಎನ್.ಪಿ.ಎಸ್ ಸೆಲ್‌ನಿಂದ ಒದಗಿಸಿರುವ ದತ್ತಾಂಶವು ಎನ್‌ಎಸ್‌ಡಿಎಲ್‌ನಿಂದ ವಾಸ್ತವವಾಗಿ ಹೊಂದಿಸಿ ದಾಖಲಿಸಿದ ಸಂಖ್ಯೆಗಳಾಗಿದ್ದರೆ, ಪ್ರಧಾನ ಮಹಾಲೇಖಪಾಲರು (ಲೆ ಮತ್ತು ಹ) ಒದಗಿಸಿದ ದತ್ತಾಂಶವು 2018–19ರಲ್ಲಿ ಮಾಡಿದ ವಾಸ್ತವ ವಂತಿಗೆ/ ವರ್ಗಾವಣೆಯನ್ನು ಪ್ರತಿನಿಧಿಸುತ್ತವೆ. ದಿನಾಂಕ 19ನೇ ಮೇ 2017ರ ಸರ್ಕಾರಿ ಆದೇಶದ ಪ್ಯಾರಾ ಎಫ್(3)ರಲ್ಲಿ ಇರುವ ಸೂಚನೆಗಳಿಗೆ ಅನುಸಾರವಾಗಿ, ಎನ್.ಪಿ.ಎಸ್ ಸೆಲ್ ಆಯಾ ತಿಂಗಳಲ್ಲಿ ಖಜಾನೆಯಿಂದ ಬಂದಿರುವ ಸೂಚಿತ ಪಟ್ಟಿ ಮತ್ತು ಚಲನ್‌ಗಳಿಗೂ ಪ್ರಧಾನ ಮಹಾಲೇಖಪಾಲರು(ಲೆ ಮತ್ತು ಹ) ಅವರು ದಾಖಲಿಸಿರುವ ಮೊತ್ತಗಳಿಗೂ ವ್ಯತ್ಯಾಸವೇನಾದರೂ ಇದ್ದಲ್ಲಿ ಲೆಕ್ಕ ಹೊಂದಾಣಿಕೆ ಮಾಡಬೇಕಾಗಿದೆ. ಆದರೆ ಎನ್.ಪಿ.ಎಸ್ ಸೆಲ್ ಇದುವರೆಗೂ ಎನ್.ಪಿ.ಎಸ್ ಲೆಕ್ಕದಲ್ಲಿ ತೋರಿಸಿರುವ ಶಿಲ್ಕಿನ ಲೆಕ್ಕ ಹೊಂದಾಣಿಕೆ ಮಾಡಿರುವುದಿಲ್ಲ.

ನೂತನವಾಗಿ ಪ್ರತಿಪಾದಿಸಲ್ಪಟ್ಟ ಪಿಂಚಣಿ ಯೋಜನೆಯ ಅಡಿಯಲ್ಲಿ 2018–19ರಲ್ಲಿ ₹4.69 ಕೋಟಿಗಳನ್ನು ಸಂಚಿತ ನಿಧಿಯಿಂದ 'ನೂತನ ವಂತಿಗೆ ಪಿಂಚಣಿ ಯೋಜನೆ–ನಿವೃತ್ತ/ನಿವೃತ್ತರ ಕುಟುಂಬ/ಸೇವೆಯಲ್ಲಿದಾಗ ಗತಿಸಿದ (2071–01–104–2–07) ಪ್ರಕರಣಗಳಿಗೆ ವಿಸ್ತೃತ ಸೌಲಭ್ಯ' ಎಂಬುದಾಗಿ ಪಾವತಿಸಲಾಗಿದೆ.

### 7.5 ವೈಯಕ್ತಿಕ ಠೇವಣಿ ಖಾತೆಗಳು

ಕರ್ನಾಟಕ ಆರ್ಥಿಕ ಸಂಹಿತೆ(ಕ.ಆ.ಸಂ)1958 ರ ನಿಯಮ 286ಎ ರ ಪ್ರಕಾರ, ವೈಯಕ್ತಿಕ ಠೇವಣಿ ಖಾತೆಗಳನ್ನು,ಹಣ ಸೆಳೆಯುವ ಮತ್ತು ವಿತರಿಸುವ ಅಧಿಕಾರಿಗಳಿಗೆ ಅನುಕೂಲವಾಗುವಂತೆ ಬಿಲ್ಲುಗಳನ್ನು ಖಜಾನೆಗಳಿಗೆ ಸಲ್ಲಿಸುವುದಕ್ಕೆ ಬದಲಾಗಿ ಚೆಕ್ ಮೂಲಕ ಪಾವತಿ ಮಾಡಲು ಕಲ್ಪಿಸಲಾಗಿದೆ.ರಾಜ್ಯದ ಸಂಚಿತ ನಿಧಿಯ ಪ್ರಧಾನ ಲೆಕ್ಕಶೀರ್ಷಿಕೆಗಳಿಗೆ ವೆಚ್ಚವನ್ನು ದಾಖಲಿಸಿ ಅದಕ್ಕೆ ಪ್ರತಿಯಾಗಿ ಸಾರ್ವಜನಿಕ ಲೆಕ್ಕದಲ್ಲಿ ಸಂಬಂಧಿಸಿದ ನಿಧಿಯ ವರ್ಗೀಕೃತ ಶೀರ್ಷಿಕೆಗೆ ಜಮೆಯನ್ನು ದಾಖಲಿಸಿ ವೈಯಕ್ತಿಕ ಠೇವಣಿ ಲೆಕ್ಕಗಳಿಗೆ ವರ್ಗಾಯಿಸಲ್ಪಡುತ್ತದೆ.

ಸಂಚಿತ ನಿಧಿಗೆ ವೆಚ್ಚವನ್ನು ತೋರಿಸಲ್ಪಡುವ ಮೂಲಕ ರಚಿಸಲ್ಪಟ್ಟ ವೈಯಕ್ತಿಕ ಠೇವಣಿಯ ಖಾತೆಗಳಲ್ಲಿ ಬಳಕೆಯಾಗದೆ ಉಳಿದ ಶಿಲ್ಕನ್ನು ಆರ್ಥಿಕ ವರ್ಷಾಂತ್ಯದಲ್ಲಿ ಸಂಚಿತನಿಧಿಯ ಅಡಿಯಲ್ಲಿ ಸಂಬಂಧಿಸಿದ ಸೇವಾಶೀರ್ಷಿಕೆಯಲ್ಲಿ ಶಿಲ್ಕಿನಲ್ಲಿ ಕಡಿತಗೊಳಿಸಿದ ವೆಚ್ಚವೆಂಬುದಾಗಿ ಖಾತಾ ಹೊಂದಾಣಿಕೆಯ ಮೂಲಕ ಚುಕ್ತಗೊಳಿಸಬೇಕಾಗಿರುತ್ತದೆ. ಆದರೆ, ಆರ್ಥಿಕ ವರ್ಷಾಂತ್ಯದಲ್ಲಿ ಅಂತಹ ಹೊಂದಾಣಿಕೆಗಳನ್ನು ಜಾರಿಗೊಳಿಸಿರುವುದಿಲ್ಲ.

**ವೈಯಕ್ತಿಕ ಠೇವಣಿ ಖಾತೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ**

**(₹ ಕೋಟಿಗಳಲ್ಲಿ)**

| ವರ್ಷದ ಪ್ರಾರಂಭದಲ್ಲಿ ಚಾಲ್ತಿಯಿರುವ ವೈ.ಠೇ.ಖಾತೆಗಳು | | ಹಾಲಿ ವರ್ಷದಲ್ಲಿ ತರೆದಿರುವ ವೈ.ಠೇ. ಖಾತೆಗಳು | | ಹಾಲಿ ವರ್ಷದ ವ್ಯವಹಾರಗಳು(ಮೊತ್ತ) | | ವರ್ಷಾಂತ್ಯದಲ್ಲಿ ಚಾಲ್ತಿಯಿರುವ ವೈಯಕ್ತಿಕ ಠೇವಣಿ ಖಾತೆಗಳು | |
|---|---|---|---|---|---|---|---|
| ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಜಮೆ | ಖರ್ಚು | ಸಂಖ್ಯೆ | ಮೊತ್ತ |
| 70* | ಜಮೆ.2,741.52 | 03 | 0.40 | 5,350.98 | 4,0074.36 | 73 | ಜಮೆ.4,085.14 |

ವೈಯಕ್ತಿಕ ಠೇವಣಿ ಖಾತೆಗಳ ಆಡಳಿತಾಧಿಕಾರಿಗಳು ಕ.ಆ.ಸಂ. ಯ ನಿಯಮ 286ರ ಅಡಿಯಲ್ಲಿ ಅವರ ಲೆಕ್ಕವು ಪ್ರತಿ ತಿಂಗಳ 5ನೇ ತಾರೀಕಿಗೆ ದಾಖಲಿಸಿರುವ ಹಿಂದಿನ ತಿಂಗಳ ಖಜಾನೆ ದಾಖಲೆಯ ಮಾಸಿಕ ಉದ್ಧೃತ ಭಾಗದಲ್ಲಿ ಕಾಣಿಸಿರುವ ಶಿಲ್ಕಿಗೆ ಹೊಂದಾಣಿಕೆಯಾಗಬೇಕಾಗಿದೆ. ಆಡಳಿತಾಧಿಕಾರಿಗಳ ಲೆಕ್ಕವನ್ನು ಖಜಾನೆಯೊಂದಿಗೆ ಮರುಹೊಂದಾಣಿಕೆಯ ಕುರಿತು ಮಾಹಿತಿ ಲಭ್ಯವಿರುವುದಿಲ್ಲ.

ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 286ಎ ಪ್ರಕಾರ, ಒಂದುವೇಳೆ ವೈಯಕ್ತಿಕ ಠೇವಣಿ ಖಾತೆಯಲ್ಲಿ ಗಣನೀಯ ಅವಧಿಯವರೆಗೆ ಯಾವುದೇ ವ್ಯವಹಾರಗಳು ನಡೆಯದಿದ್ದಲ್ಲಿ, ಅಂತಹ ಖಾತೆಗಳು ಯಾರ ಹೆಸರಿನಲ್ಲಿ ಆ ಲೆಕ್ಕವಿದೆಯೋ ಅಂತಹ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಅಂತಿಮಗೊಳಸಬೇಕು. 73 ವೈಯಕ್ತಿಕ ಠೇವಣಿ ಖಾತೆಗಳಲ್ಲಿ 21 ವಹಿವಾಟುಗಳಿಲ್ಲದೆ ಇದ್ದು (₹4.75 ಕೋಟಿಯಷ್ಟು ಜಮೆಯ ಶಿಲ್ಕಿನ 11 ವೈಯಕ್ತಿಕ ಠೇವಣಿ ಖಾತೆಗಳು, ₹1.24 ಕೋಟಿಯ ಖರ್ಚಿನ ಶುಲ್ಕದ 8 ವೈಯಕ್ತಿಕ ಠೇವಣಿ ಖಾತೆಗಳು ಮತ್ತು ಶೂನ್ಯ ಶಿಲ್ಕಿನ 2 ವೈಯಕ್ತಿಕ ಠೇವಣಿ ಖಾತೆಗಳು). ಅಲ್ಲದೆ, 50 ವೈಯಕ್ತಿಕ ಠೇವಣಿ ಖಾತೆಗಳು ಚಾಲ್ತಿಯಲ್ಲಿವೆ. (₹8,913.66 ಕೋಟಿಗಳ ಜಮೆಯ ಶಿಲ್ಕಿನ 30 ವೈಯಕ್ತಿಕ ಠೇವಣಿ ಖಾತೆಗಳು, ₹4,832.05 ಕೋಟಿಗಳ ಖರ್ಚಿನ ಶುಲ್ಕದ 11 ವೈ.ಠೇ.ಖಾತೆಗಳು ಹಾಗೂ ಶೂನ್ಯ ಶಿಲ್ಕಿನ 7 ವೈಯಕ್ತಿಕ ಠೇವಣಿ ಖಾತೆಗಳು).

2019ರ ಫೆಬ್ರುವರಿ–ಮಾರ್ಚ ಅವಧಿಯಲ್ಲಿ ತೆರೆದಿರುವ ಎರಡು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಸದರಿ ವರ್ಷದಲ್ಲಿ ಯಾವುದೇ ವಹಿವಾಟು ನಡೆದಿರುವುದಿಲ್ಲ.

ವಹಿವಾಟಿನ ವಿಶ್ಲೇಷಣೆಯನ್ವಯ 2018–19 ರಲ್ಲಿ 10 ವೈಯಕ್ತಿಕ ಖಾತೆಗಳಲ್ಲಿ ವರ್ಗಾವಣೆಯಾದ ಮೊತ್ತದಲ್ಲಿ ₹1,343.61 ಕೋಟಿಗಳು ಬಳಕೆಯಾಗದೆ ಉಳಿದಿರುತ್ತದೆ. ಅಂತಿಮ ಉಳಿತಾಯದ ಮೊತ್ತದಲ್ಲಿ ಸತತವಾಗಿ ಮೂರು ವರ್ಷಗಳಿಂದ ಬಳಕೆಯಾಗದ ಉಳಿದಿರುವ ಮೊತ್ತ ₹ 2,741.52 ಕೋಟಿಗಳು ಸಹ ಸೇರಿರುತ್ತದೆ.

## 7.6 ಹೂಡಿಕೆಗಳು

ಹಣಕಾಸು ಲೆಕ್ಕಪತ್ರಗಳ ಪಟ್ಟಿ 8ರಲ್ಲಿ ಕಾಣಿಸಿರುವ ಸರ್ಕಾರಿ ಹೂಡಿಕೆಯ ಮಾಹಿತಿಗಳಿಗೆ ಪ್ರಧಾನ ಮಹಾಲೇಖಪಾಲರು (ಲೆ ಮತ್ತು ಹ) ಕರ್ನಾಟಕ ಅವರಲ್ಲಿ ಸ್ವೀಕೃತವಾಗುವ ಲೆಕ್ಕಗಳು ಮತ್ತು ಮಂಜೂರಾತಿಗಳು ಆಧಾರವಾಗಿರುತ್ತದೆ. ಈ ಅಂಕೆಸಂಖ್ಯೆಗಳಿಗೆ ಹಾಗೂ ಯಾವ ಸಂಸ್ಥೆಗಳಲ್ಲಿ ಹೂಡಿಕೆಯಾಗಿದೆ ಎಂಬುದಕ್ಕೆ ಕರ್ನಾಟಕ ಸರಕಾರದ ಸಂಬಂಧಿಸಿದ ಇಲಾಖೆಯಿಂದ ಸ್ಥಿರೀಕರಣ/ದೃಢೀಕರಣದ ಅಗತ್ಯವಿದೆ. 2018–19ರ ಅಖೈರಿಗೆ ಸರ್ಕಾರದ ಸಂಪೂರ್ಣ ಹೂಡಿಕೆಯಾದ ₹66,518.28 ಕೋಟಿ ಮೊತ್ತವನ್ನು ಹಿಂದಿನ ವರ್ಷಗಳಲ್ಲೂ ಹೂಡಿಕೆಯಾಗಿದ್ದ 146 ಸಂಸ್ಥೆಗಳಲ್ಲಿ ಹೂಡಿಕೆಯಾಗಿದೆ. ಈ ಸಂಸ್ಥಗಳಲ್ಲಿ 31ನೇ ಮಾರ್ಚ್ 2019ವರೆಗೆ ಹೂಡಿಕೆಯಾಗಿರುವ ₹66,518.28 ಕೋಟಿಗಳಲ್ಲಿ 28 ಸಂಸ್ಥೆಗಳ ಡಿವಿಡೆಂಡ್ ₹38.30 ಕೋಟಿಗಳಷ್ಟು ಸ್ವೀಕೃತವಾಗಿದೆ ಹಾಗೂ 118 ಸಂಸ್ಥೆಗಳಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ಡಿವಿಡೆಂಡ್ ನೀಡಿರುವುದಿಲ್ಲ. ಹೂಡಿಕೆಯ ಅಂಕಿಸಂಖ್ಯೆಗಳನ್ನು ಸಂಬಂಧಿಸಿದ ಸಂಸ್ಥೆಗಳ ದಾಖಲೆಗಳೊಂದಿಗೆ ಹೊಂದಾಣಿಕೆ ಮಾಡಲಾಗಿರುವುದಿಲ್ಲ.

~~~
~~~

© ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು
**2020**
**www.cag.gov.in**

**www.agkar.cag.gov.in**